ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ವಿದ್ಯಾರಣ್ಯ – ೫೮೩ ೨೭೬

ಕನ್ನಡ ವಿಶ್ವವಿದ್ಯಾಲಯಕ್ಕೆ

ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ನಿಬಂಧ – ೨೦೧೭–೧೮

ವಿಷಯ

"[illegible] ಹಂತದ ಕನ್ನಡ ಭಾಷೆ ಮತ್ತು ಸಾಹಿತ್ಯ ಶೋಧನೆ ಒಂದು ಅಧ್ಯಯನ"

ಸಂಶೋಧಕರು

[illegible]

ಮಾರ್ಗದರ್ಶಕರು

ಡಾ. [illegible]

[illegible]

ಮಾನ್ಯತಾ ಸಂಸ್ಥೆ

ಕನ್ನಡ ಸಾಹಿತ್ಯ ಪರಿಷತ್ತು, ಸಂಶೋಧನಾ ಕೇಂದ್ರ ಪಂಪ ಮಹಾಕವಿ ರಸ್ತೆ,

ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ವಿದ್ಯಾರಣ್ಯ – ೫೮೩ ೨೭೬

ಕನ್ನಡ ವಿಶ್ವವಿದ್ಯಾಲಯಕ್ಕೆ

ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ನಿಬಂಧ – ೨೦೧೭-೧೮

ವಿಷಯ

"ಪ್ರೌಢಶಾಲಾ ಹಂತದ ಕನ್ನಡ ಭಾಷೆ ಮತ್ತು ಸಾಹಿತ್ಯ ಬೋಧನೆ ಒಂದು ಅಧ್ಯಯನ"

ಸಂಶೋಧಕರು

ಈರಪ್ಪ ಮಹಾಲಿಂಗಪೂರ M.A., M.Ed., NET, SLET

ನೋಂದಣಿ ಸಂಖ್ಯೆ – 172001030034

ಮಾರ್ಗದರ್ಶಕರು

ಡಾ. ವೆಂಕಟಪ್ಪ M.A., Ph.d,

ಕನ್ನಡ ಸಹಾಯಕ ಪ್ರಾಧ್ಯಾಪಕರು

ಎಸ್.ಎಲ್.ಎನ್. ಕಾಲೇಜು, ಕೋಟೆ, ಬೆಂಗಳೂರು ೫೬೦ ೦೦೨

ಮಾನ್ಯತಾ ಸಂಸ್ಥೆ

ಕನ್ನಡ ಸಾಹಿತ್ಯ ಪರಿಷತ್ತು, ಸಂಶೋಧನಾ ಕೇಂದ್ರ ಪಂಪ ಮಹಾಕವಿ ರಸ್ತೆ,
ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮

ಮಾರ್ಗದರ್ಶಕರ ದೃಢೀಕರಣ ಪತ್ರ

ಈರಪ್ಪ ಮಹಾಲಿಂಗಪೂರ ಅವರು ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ "ಪ್ರೌಢಶಾಲಾ ಹಂತದ ಕನ್ನಡ ಭಾಷೆ ಮತ್ತು ಸಾಹಿತ್ಯ ಬೋಧನೆ – ಒಂದು ಅಧ್ಯಯನ" ಎಂಬ ನಿಬಂಧವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರ ಅಧ್ಯಯನದ ಮೂಲಕ ಸಿದ್ಧಪಡಿಸಿರುತ್ತಾರೆ. ಈ ನಿಬಂಧದ ವಿಷಯವನ್ನು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ: ಬೆಂಗಳೂರು

ದಿನಾಂಕ 15/9/18

ಮಾರ್ಗದರ್ಶಕರು

~~ಡಾ. ವೆಂಕಟಪ್ಪ M.A., Ph.d,~~

ಡಾ|| ವೆಂಕಟಪ್ಪ, ಎಂ.ಎ., ಪಿಎಚ್.ಡಿ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಎಸ್.ಎಲ್.ಎನ್. ಕಾಲೇಜು
ಕೋಟೆ, ಬೆಂಗಳೂರು-560 002.

ಸಹ ಪ್ರಾಧ್ಯಾಪಕರು, ಎಸ್.ಎಲ್.ಎನ್. ಕಾಲೇಜು, ಕೋಟೆ, ಬೆಂಗಳೂರು 560 002

ಸಂಶೋಧಕರ ಪ್ರಮಾಣ ಪತ್ರ

ಹಂಪಿ, **'ಕನ್ನಡ ವಿಶ್ವವಿದ್ಯಾಲಯದ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ'**ದಿಂದ **ಎಂ.ಫಿಲ್**. ಪದವಿಗಾಗಿ ಸಲ್ಲಿಸುತ್ತಿರುವ **"ಪ್ರೌಢಶಾಲಾ ಹಂತದ ಕನ್ನಡ ಭಾಷೆ ಮತ್ತು ಸಾಹಿತ್ಯ ಬೋಧನೆ ಒಂದು ಅಧ್ಯಯನ"** ಎಂಬ ಶೀರ್ಷಿಕೆಯ ನಿಬಂಧವನ್ನು **ಡಾ. ವೆಂಕಟಪ್ಪ,** ಸಹಾಯಕ ಪ್ರಾಧ್ಯಾಪಕರು, ಎಸ್.ಎಲ್.ಎನ್. ಕಾಲೇಜ್, ಕೋಟೆ, ಬೆಂಗಳೂರು, ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಈ ಸಂಶೋಧನಾ ನಿಬಂಧವನ್ನು ಬೇರೆ ಯಾವುದೇ ಪದವಿ ಅಥವಾ ಡಿಪ್ಲೋಮಾವನ್ನು ಪಡೆಯಲು ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ – ಬೆಂಗಳೂರು

ದಿನಾಂಕ 13/9/18

ಈರಪ್ಪ ಮಹಾಲಿಂಗಪೂರ

ಸಂಶೋಧನಾ ವಿದ್ಯಾರ್ಥಿ

ನೋಂದಣಿ ಸಂಖ್ಯೆ – 172001030034

ಪರಿವಿಡಿ

ಕೋಷ್ಟಕಗಳ ಪಟ್ಟಿ

ಸ್ತಂಭಾಲೇಖಗಳ ಪಟ್ಟಿ

* * * *

ಅಧ್ಯಾಯ – 1

ಅರ್ಥ, ವ್ಯಾಪ್ತಿ, ಉದ್ದೇಶ, ಸ್ವರೂಪ ಮತ್ತು ಪ್ರಾಮುಖ್ಯತೆ

ಅಧ್ಯಾಯ – 1

ಅರ್ಥ, ವ್ಯಾಪ್ತಿ, ಉದ್ದೇಶ, ಸ್ವರೂಪ ಮತ್ತು ಪ್ರಾಮುಖ್ಯತೆ

1.1 ಪೀಠಿಕೆ

ಭಾಷೆಯು ನಮಗೆ ದೊರೆತ ಹಾಗೂ ನಾವು ಸಾಧಿಸಿಕೊಂಡ ಅಮೂಲ್ಯ ಸಾಧನ. ಈ ಸಾಧನದಿಂದ ನಾವು ಇತರ ಪ್ರಾಣಿಗಳಿಗಿಂತ ಭಿನ್ನರಾಗಿದ್ದೇವೆ. ಭಾಷೆ ನಮಗೊಂದು ಭಾಗ್ಯದ ವರವಾಗಿದೆ. ಇದರಿಂದ ಸಾಕಷ್ಟು ಪ್ರಗತಿ ಸಾಧಿಸಿದ್ದೇವೆ. ಇನ್ನೂ ಸಾಧಿಸುತ್ತಾ ಮುನ್ನಡೆದಿದ್ದೇವೆ. ಈ ಸಾಧನೆಯ ಹಾದಿಯಲ್ಲಿ ಇನ್ನೂ ಕೆಲವು ಅಂಶಗಳು ಕಾರಣವಾದರೂ ಭಾಷೆಗಿಂತ ಅವುಗಳ ಪಾತ್ರ ಹೆಚ್ಚೇನಲ್ಲ.

ನಮ್ಮ ಎಲ್ಲಾ ಆಲೋಚನೆ ಅಭಿವ್ಯಕ್ತಿಗಳಿಗೆ ಭಾಷೆಯು ಒಂದು ಮಹತ್ವದ ಮಾಧ್ಯಮವಾಗಿದೆ. ನಮ್ಮ ಜೀವನದ ಎಲ್ಲ ಅಂಶಗಳಲ್ಲಿ ಭಾಷೆಯು ಬೆಸೆದುಕೊಂಡಿದೆ. ಬದುಕಿನ ಉಸಿರಿನಲ್ಲಿ ಸಮ್ಮಿಳಿತಗೊಂಡಿದೆ. ಪ್ರತಿಯೊಂದು ಕಾರ್ಯಚಟುವಟಿಕೆಗಳಲ್ಲಿ ಹಾಸುಹೊಕ್ಕಾಗಿರುವ **ಭಾಷೆ ಇಂದು ನಮ್ಮೆಲ್ಲರಿಗೂ ಅತ್ಯಗತ್ಯವಾಗಿ ಬೇಕಾಗಿರುವುದೇ ಆಗಿದೆ.** ಹಾಗಾಗಿ ಭಾಷೆಯು ಕಲಿಕೆಯ ಮೂಲ ಅಗತ್ಯ ಮತ್ತು ಅನಿವಾರ್ಯವಾದುದಾಗಿದೆ.

ಭಾಷೆಯು ಅಮೂರ್ತರೂಪದಿಂದ ಆರಂಭವಾಯಿತಾದರೂ ಇಂದು ಅದನ್ನು ಮೂರ್ತರೂಪಕ್ಕೆ ತಂದಿದ್ದೇವೆ. ಆ ಮೂಲಕ ಆಲೋಚನೆ, ಅಭಿವ್ಯಕ್ತಿಗಳನ್ನು ಅದುಮಿಡುತ್ತಾ, ಅವಶ್ಯಕತೆಯಿದ್ದಾಗ ಬಳಸುತ್ತಾ ಭಾಷೆಯ ಪ್ರಯೋಜನವನ್ನು ಪಡೆಯುತ್ತಿದ್ದೇವೆ. ಆದಾಗ್ಯೂ ಅಮೂರ್ತರೂಪದ ಭಾಷೆಯೂ ಸಹ ನಿತ್ಯಜೀವನದಲ್ಲಿ ತನ್ನ ಇರುವಿಕೆಯನ್ನು ಪ್ರದರ್ಶಿಸುತ್ತಾ ತನ್ನ ಮಹತ್ವ ಮತ್ತು ಅವಶ್ಯಕತೆಗಳನ್ನು ಹೆಚ್ಚಿಸಿಕೊಳ್ಳುತ್ತಲೇ ಇದೆ.

ಭಾಷೆ ಒಂದೇ ಎನಿಸಿದರೂ ಅದರ ಎರಡು ರೂಪಗಳಂತೆ ಅದರ ವಿಧಗಳೂ ಎರಡು. ಆರಂಭದಲ್ಲಿ ಅರ್ಜಿತವಾಗುವ ಆಡುಭಾಷೆ ಮತ್ತು ಅನಂತರದಲ್ಲಿ ಕಲಿಯುವ **ಗ್ರಾಂಥಿಕ ಭಾಷೆ. ಜೀವದ್ಭಾಷೆಯಾದ ಆಡುಭಾಷೆ ಸಹಜವಾಗಿಯೇ ಒಲಿಯುತ್ತದೆ**. ಹೆಚ್ಚು ಶಾಶ್ವತವೆನಿಸಿದ ಗ್ರಾಂಥಿಕ ಭಾಷೆ ಕಲಿಕೆಯಿಂದ ಸೇರಿಕೊಳ್ಳುತ್ತದೆ.

ಮಗುವಿಗೆ ಆರಂಭದಲ್ಲಿ ಸಹಜವಾಗಿ ದೊರೆತ ಭಾಷೆಯೇ ಅದರ ಮಾತೃಭಾಷೆಯೆನಿಸುತ್ತದೆ. ಮಗುವಿನ ಭಾಷಾ ವಿಕಾಸ ಈ ಭಾಷೆಯಿಂದಲೇ! **ಮಾತೃಭಾಷೆಯ ಮೂಲಕವೇ ಕಲಿಕೆ, ಶಿಕ್ಷಣ ಆರಂಭವಾಗುತ್ತದೆ**. ಆತನ ಮುಂದಿನ ಎಲ್ಲ ಆಗುಹೋಗುಗಳಿಗೆ, ಪ್ರಗತಿಗೆ ಆಧಾರವಾಗಿ ನಿಲ್ಲುವುದೇ ಈ ಮಾತೃಭಾಷೆ! ಕಾರಣವಾಗಿ ಮಗುವಿಗೆ ಮಾತೃಭಾಷೆಯ ಕಲಿಕೆ ಮಹತ್ವವಾದದ್ದು.

ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಶಿಕ್ಷಣ ಅಂತರ್ ಸಂಬಂಧಿ ಪರಿಕಲ್ಪನೆಗಳು. ಇವು ಪರಸ್ಪರ ಪೂರಕ-ಪೋಷಕವಾಗಿ ಬೆಳೆಯುತ್ತವೆ. ಇವುಗಳೊಂದಿಗೆ ಬೆಳೆಯುವ ವ್ಯಕ್ತಿ ಪರಿಪೂರ್ಣವಾಗಿ ರೂಪಗೊಳ್ಳಲು ಸಾಧ್ಯವಾಗುತ್ತದೆ. ಇದರಿಂದಾಗಿ ಭಾಷಾ ಬೋಧನೆಯ ಕೆಲಸವು ಸಾಹಿತ್ಯ ಮತ್ತು ಸಾಂಸ್ಕೃತಿಕ ಒಡನಾಟಗಳೊಂದಿಗೆ ಅಂತರ್ ಶಾಸ್ತ್ರೀಯ ಕ್ರಮದಿಂದ ಸಾಗುತ್ತದೆ. ಸಂವಹನ, ಸಂಸ್ಕೃತಿ, ಕಲೆ, ಸಾಹಿತ್ಯ, ಜನಪದ ಹಾಗೂ ಸಮೂಹ ಮಾಧ್ಯಮಗಳು ಭಾಷಾ ಬೋಧನೆಯ ಸಾಧನಗಳಾಗಬೇಕು.

1.2 ಅರ್ಥ ಮತ್ತು ವ್ಯಾಪ್ತಿ

ಕನ್ನಡ ಭಾಷೆ ಮತ್ತು ಸಾಹಿತ್ಯ ಬೋಧನೆಯ ಅರ್ಥ

ಮಾನವ ತನ್ನ ಅನಿಸಿಕೆಗಳನ್ನು, ಆಕಾಂಕ್ಷೆಗಳನ್ನು ಇತರರಿಗೆ ತಿಳಿಸಲು, ಇತರರ ಆಸೆ-ಅನಿಸಿಕೆಗಳನ್ನು ತಾನು ತಿಳಿದುಕೊಳ್ಳಲು **'ಭಾಷೆ'** ಯನ್ನು ಮಾಧ್ಯಮವನ್ನಾಗಿ ಬಳಸಿಕೊಳ್ಳುತ್ತಿದ್ದಾನೆ. ಹೀಗಾಗಿ ಭಾಷೆಯನ್ನು **'ಒಂದು ಮಾಧ್ಯಮ'** ಎಂದು ಕರೆಯುತ್ತೇವೆ. ತನ್ನಲ್ಲಿರುವ ಭಾವನೆಗಳನ್ನು ಕ್ರಮಬದ್ಧವಾಗಿ, ವ್ಯವಸ್ಥಿತವಾಗಿ ಸಂಘಟಿಸಿ ಭಾಷೆಯ ಮೂಲಕ ವ್ಯಕ್ತಪಡಿಸುವುದರಿಂದ **ಭಾಷೆಯನ್ನು ಒಂದು ಅಭಿವ್ಯಕ್ತಿಯ ಸಾಧನವನ್ನಾಗಿ** ಮಾಡಿಕೊಳ್ಳಲಾಗಿದೆ.

❖ **ಭಾಷೆಯ ಅರ್ಥ** :- ಭಾಷೆಯು ಸಂಸ್ಕೃತ ಪದದ ಭಾಸ ಎಂಬ ಧಾತುವಿನಿಂದ ಬಂದಿದೆ. ಭಾಸ ಎಂದರೆ ಹೊಳೆಯುವುದು, ಪ್ರಕಾಶಿಸುವುದು ಎಂದರ್ಥ. ಇಂಗ್ಲೀಷನ Language ಎಂಬ ಪದವು ಲ್ಯಾಟಿನ್ ಭಾಷೆಯ **'ಲಿಂಗ್ವ'** ಎಂಬ ಪದದಿಂದ ಬಂದಿದೆ. **'ಲಿಂಗ್ವ'** ಎಂದರೆ ನಾಲಿಗೆ ಎಂದರ್ಥ. ಭಾಷೆಯ ಮೂಲ ಮಾತು. ನಂತರ ಚಿತ್ರಗಳು, ಬರಹ ಇತ್ಯಾದಿ ಸಂಕೇತಗಳು ಮೂಡಿ ಬಂದಿವೆ.

ಭಾಷೆಯ ವ್ಯಾಖ್ಯಾನಗಳು

1. **ಪ್ಲೇಟೋ ರವರ ಪ್ರಕಾರ,** "ಧ್ವನಿ ಸಂಕೇತಗಳಿಂದ ಮನುಷ್ಯನ ವಿಚಾರಗಳನ್ನು ಅಭಿವ್ಯಕ್ತಿಗೊಳಿಸುವ ಸಾಧನವೇ ಭಾಷೆ". ಎಂದು ಹೇಳಿದ್ದಾರೆ.
2. **ಐಸ್ಲರ್ ರವರ ಪ್ರಕಾರ,** "ಆತ್ಮವಿರುವ ಯಾವುದೇ ಪ್ರಾಣಿಯ ಅನುಭಗಳ ಅಭಿವ್ಯಕ್ತಿಯೇ ಭಾಷೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ.
3. **ಸ್ಟುರ್ಟ್‌ವಾಂಟ್, ಬ್ಲಾಕ್ ಮತ್ತು ಟ್ರೇಗರ್ ರವರ ಪ್ರಕಾರ,** "ಒಂದು ಸಮಾಜದ ವ್ಯಕ್ತಿಗಳು ಪರಸ್ಪರ ವ್ಯವಹಾರಕ್ಕಾಗಿ ಬಳಸಬಹುದಾದ ಯಾದೃಚ್ಛಿಕ ಧ್ವನಿ ಸಂಕೇತಗಳ ವ್ಯವಸ್ಥೆಯೇ ಭಾಷೆ."

ಸಾಹಿತ್ಯ ಬೋಧನೆ


ಸಾಹಿತ್ಯ ಎಂಬುದು ಒಂದು ವ್ಯಾಪಕ ವಸ್ತು ವಿಷಯ. ಸಾಮಾನ್ಯ ಅರ್ಥದಲ್ಲಿ **"ಒಂದು ಭಾಷೆಯಲ್ಲಿ ರಚಿತವಾಗಿರುವ ಜ್ಞಾನವನ್ನೊಳಗೊಂಡ ಗ್ರಂಥ ರಾಶಿಯನ್ನು ಸಾಹಿತ್ಯ"** ಎನ್ನಬಹುದು. ಕವಿಗಳು, ಲೇಖಕರು, ದಾರ್ಶನಿಕರು, ವಿಜ್ಞಾನಿಗಳು, ಸಮಾಜ ಚಿಂತಕರು ಲೋಕದ ಬಗ್ಗೆ ತಾವು ಕಂಡುಕೊಂಡ ಸತ್ಯಗಳನ್ನು, ಅನ್ವೇಷಿಸುವ ಜ್ಞಾನವನ್ನು, ತಮ್ಮ ಕನಸು, ಕಲ್ಪನೆಗಳನ್ನು ಸಂವೇದನಾಶೀಲ ಮನಸ್ಥಿತಿಯಲ್ಲಿ ಸೃಜನಶೀಲವಾಗಿ ಬರೆದಿಟ್ಟಿರುವ ಗ್ರಂಥರಾಶಿಯೇ ಸಾಹಿತ್ಯ. ಸಾಹಿತ್ಯವು ವಿವಿಧ ಕ್ಷೇತ್ರಗಳ ಜ್ಞಾನವನ್ನು ತನ್ನೊಳಗೆ ಐಕ್ಯಗೊಳಿಸಿಕೊಂಡಿದ್ದು ಕವಿಯ ಪ್ರತಿಭೆಯೊಂದಿಗೆ ರಚಿಸಲ್ಪಟ್ಟಿರುತ್ತದೆ. ಸಾಹಿತ್ಯ ಕೇವಲ ಒಂದು ಕ್ಷೇತ್ರದ ಅಂಕಿ ಅಂಶ, ಮಾಹಿತಿ ಅಥವಾ ಜ್ಞಾನವಷ್ಟೇ ಅಲ್ಲ, ಜ್ಞಾನವನ್ನು ಮೀರಿದ ವ್ಯಾಪ್ತಿ ಸಾಹಿತ್ಯಕ್ಕಿದೆ. ಜ್ಞಾನ, ವಿಜ್ಞಾನ, ಕನಸು, ಕಲ್ಪನೆ, ಸತ್ಯ, ಸೌಂದರ್ಯಗಳು ಸಾಹಿತ್ಯದಲ್ಲಿ ಅಂತರ್ಗತವಾಗಿರುತ್ತವೆ. ಭಾಷೆ, ಶಿಕ್ಷಣ, ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ ಮತ್ತು ವಿಜ್ಞಾನಗಳು ಕವಿಯ ಸಂವೇದನೆಗೊಳಪಟ್ಟು ಅಭಿವ್ಯಕ್ತವಾಗಿರುವ ಜ್ಞಾನಾಮೃತವೇ ಸಾಹಿತ್ಯ. ಈ ರೀತಿ ಚಿಂತನಶೀಲ ಹೃದಯ ಮತ್ತು ಮನಸ್ಸಿನ ಸಂವೇದನಶೀಲ ಅಭಿವ್ಯಕ್ತಿಯು ಸಾಹಿತ್ಯ ರೂಪದಲ್ಲಿ ಹುಟ್ಟಿ ಬರುತ್ತದೆ. ಸಾಹಿತ್ಯವು ಕೇವಲ ಗ್ರಂಥರೂಪಕ್ಕಷ್ಟೆ ಸೀಮಿತವಲ್ಲ. ಜನಪದ, ಕಲೆ, ಶಾಸನ, ಸಂಪ್ರದಾಯ, ಸಂಸ್ಕೃತಿ, ನಂಬಿಕೆ ಮತ್ತು ಜೀವನ ಮೌಲ್ಯಗಳ ರೂಪಗಳಲ್ಲಿ ಹುಟ್ಟಿ ಬೆಳೆದಿದೆ. ಸಾಹಿತ್ಯವು ಮನುಷ್ಯ ಜೀವನದ ಸರ್ವಸ್ವವನ್ನು ಒಳಗೊಂಡಿದ್ದು ಅನೇಕ ವಸ್ತು, ವಿಷಯಗಳನ್ನು ಸಮನ್ವಯಗೊಳಿಸಿ ನೋಡುತ್ತದೆ.

ಜ್ಞಾನಕ್ಕೆ ಸಾಹಿತ್ಯದ ಸ್ಪರ್ಶ ಇದ್ದಾಗ ವ್ಯಕ್ತಿಯ ಜೀವನ ಪರಿಪೂರ್ಣತೆ ಪಡೆಯುತ್ತದೆ. ಶಿಕ್ಷಣದಲ್ಲಿ ಸಾಹಿತ್ಯದ ಸ್ಪರ್ಶವು ವಿದ್ಯಾರ್ಥಿಯ ಸಮತೂಕ ವ್ಯಕ್ತಿತ್ವ ವಿಕಾಸಕ್ಕೆ ನೆರವಾಗುತ್ತದೆ. ವಿದ್ಯಾರ್ಥಿಯ ಬುದ್ಧಿ, ಭಾವ, ಹೃದಯ ವಿಕಾಸಕ್ಕೆ ಸಾಹಿತ್ಯ ಸೂಕ್ತ ನೆಲೆಯನ್ನು ಒದಗಿಸುತ್ತದೆ. ವಿದ್ಯಾರ್ಥಿಗಳಲ್ಲಿ ಸಾಹಿತ್ಯಾಭಿರುಚಿ ಮೂಡಿಸಿ ಅವರಲ್ಲಿ ಸಾಹಿತ್ಯದ ಬಗ್ಗೆ ಪ್ರೀತಿ, ಸಾಹಿತ್ಯ ಅಧ್ಯಯನ ಸಾಮರ್ಥ್ಯವನ್ನು ಬೆಳೆಸುವುದು ಅವಶ್ಯಕ. ಭಾಷಾ ಬೋಧನೆಯಲ್ಲಿ ಓದುವ ಗದ್ಯ, ಪದ್ಯ, ಪ್ರಬಂಧ, ಕತೆ, ಕವನ, ನಾಟಕ, ವಿಮರ್ಶೆಗಳ ಮೂಲಕ ಮಕ್ಕಳಿಗೆ ಸಾಹಿತ್ಯದ ಪರಿಚಯ ಮಾಡಿಕೊಡಬೇಕು. ಪರೀಕ್ಷೆಗಳಲ್ಲಿ ಉತ್ತರ ಬರೆಯಲು, ಜ್ಞಾನ ಅಥವಾ ತರ್ಕದ ದೃಷ್ಟಿಯಿಂದ ಸಾಹಿತ್ಯ ಬೋಧನೆ ಆಗಕೂಡದು. ಸಾಹಿತ್ಯ ಕೃತಿಯನ್ನು ಭಟ್ಟಿ ಇಳಿಸಿ ಕುಡಿದು ಕೈತೊಳೆದುಕೊಳ್ಳುವುದು ಸಾಹಿತ್ಯ ಬೋಧನೆಯಲ್ಲ. ವಿದ್ಯಾರ್ಥಿಗಳಲ್ಲಿ ಸಾಹಿತ್ಯ ಸಂವೇದನಾ ಆಸಕ್ತಿಯುಳ್ಳ ಮನಸ್ಸು, ಹೃದಯಗಳು ನಿರ್ಮಾಣವಾಗಬೇಕು. ಸಾಹಿತ್ಯದ ಬಗ್ಗೆ ಪ್ರೀತಿ, ಕಾಳಜಿ ಬೆಳೆಯಬೇಕು. ಸಾಹಿತ್ಯ ಅಧ್ಯಯನ ಅಭಿರುಚಿ, ಆಕಾಂಕ್ಷೆ, ಸಾಮರ್ಥ್ಯಗಳು ಬೆಳೆಯಬೇಕು. ಆದುದರಿಂದ ಸಾಹಿತ್ಯ ವಿಷಯವನ್ನು ಪರೀಕ್ಷೆಗಷ್ಟೇ ಸೀಮಿತಗೊಳಿಸದೆ ವಿಶಾಲ ಆಕರ್ಷಣೆಗೆ ಸಜ್ಜುಗೊಳಿಸಬೇಕು.

ಸಾಹಿತ್ಯ ಅಧ್ಯಯನ ಹಾಗೂ ಆಸ್ವಾದನೆಯು ಒಂದು ಭಾವಾನಾತ್ಮಕ ಕಲೆಯಾಗಿದ್ದು, ಸಾಮಾನ್ಯ ವ್ಯಕ್ತಿಯಿಂದ ಮೊದಲ್ಗೊಂಡು ದಾರ್ಶನಿಕರವರೆಗೂ ಸಾಹಿತ್ಯ ಮುದ ನೀಡುತ್ತದೆ. ಓದು ಬರಹ ಬಾರದ ನಮ್ಮ ತಾಯಿ, ತಂದೆಯರು ಓದುಬಲ್ಲವರ ಸಹಾಯದಿಂದ ಕತೆ, ಕಾವ್ಯ, ನಾಟಕ, ಕಾದಂಬರಿಗಳನ್ನು ವಾಚನ ಮಾಡಿಸುತ್ತಾ ಸಾಹಿತ್ಯವನ್ನು ಆಸ್ವಾದಿಸುತ್ತಾರೆ. ನಾಟಕ, ಚಲನಚಿತ್ರ, ಕಲೆ, ನೃತ್ಯ, ಸಂಗೀತಗಳ ಮೂಲಕವು ಸಾಹಿತ್ಯವನ್ನು ಆಸ್ವಾದಿಸುತ್ತಾರೆ. ಇದೇ ರೀತಿ ಶಾಲಾ ಕಾಲೇಜುಗಳ ಕಲ್ಪನೆಯೆ ಇಲ್ಲದ ಪೂರ್ವಿಕರು ತಮ್ಮ ಜೀವನದಲ್ಲಿ ಸಾಹಿತ್ಯ, ಸಂಸ್ಕೃತಿ, ಧರ್ಮವನ್ನು ಕಂಡು ಕೊಂಡಿದ್ದಾರೆ. ತಾವು ಕಂಡು ಅನುಭವಿಸಿದ ಸತ್ಯಗಳನ್ನು, ಆನಂದವನ್ನು ವಿಶಿಷ್ಟ ಜನಪದ ಶೈಲಿಯಲ್ಲಿ ಅಭಿವ್ಯಕ್ತಿಸಿದ್ದಾರೆ. ಓದು ಬರಹದ ಜ್ಞಾನ ಇಲ್ಲದೆ ಶ್ರೀಮಂತವಾದ ಜನಪದ ಸಾಹಿತ್ಯ, ಸಂಸ್ಕೃತಿಯನ್ನು ಸೃಷ್ಟಿ ಮಾಡಿದ್ದಾರೆ. ಆದುದರಿಂದ ಸಾಹಿತ್ಯದ ಅಧ್ಯಯನದ ಸ್ಪರ್ಶವು ಎಲ್ಲರಿಗೂ ಎಲ್ಲ, ಕಾಲಕ್ಕೆ ಅಗತ್ಯ. ಸಾಹಿತ್ಯವು ಮನುಷ್ಯ ಜೀವನವನ್ನು ಸಂಸ್ಕರಿಸುತ್ತದೆ. ಪೂರ್ಣ ಜೀವನಕ್ಕೆ ನೆರವಾಗುತ್ತದೆ.

ಸಾಹಿತ್ಯದಲ್ಲಿ ಪದ್ಯ ಮತ್ತು ಗದ್ಯ ಸಾಹಿತ್ಯ ಎಂಬ ಎರಡು ಸಾಹಿತ್ಯಗಳು ದೊರೆಯುತ್ತವೆ.

ಕೋಷ್ಟಕ 1: ಸಾಹಿತ್ಯದ ವಿಧಗಳು



ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯ ಎರಡರಲ್ಲಿಯೂ ಪದ್ಯ ಸಾಹಿತ್ಯ ಮತ್ತು ಗದ್ಯ ಸಾಹಿತ್ಯಗಳು ಎಂಬ ಎರಡು ಸಾಹಿತ್ಯಗಳು ದೊರೆಯುತ್ತವೆ.

1.3 ಉದ್ದೇಶ ಮತ್ತು ಸ್ವರೂಪ

(ಎ) ಅಧ್ಯಯನದ ತಲೆ ಬರಹ

"ಪ್ರೌಢಶಾಲಾ ಹಂತದ ಕನ್ನಡ ಭಾಷೆ ಮತ್ತು ಸಾಹಿತ್ಯ ಬೋಧನೆ ಒಂದು ಅಧ್ಯಯನ.

(ಬಿ) ಈ ಅಧ್ಯಯನವನ್ನು ಆಯ್ಕೆ ಮಾಡಿಕೊಂಡ ಉದ್ದೇಶ

ಈ ಸಮಸ್ಯೆಯನ್ನು ಆಯ್ಕೆ ಮಾಡಿಕೊಂಡ ಉದ್ದೇಶವೇನೆಂದರೆ ಈ ಹಿಂದಿನ ಸಂಬಂಧಿತ ಸಾಹಿತ್ಯಾವಲೋಕನವನ್ನು ಸಮಗ್ರವಾಗಿ ಅಧ್ಯಯನ ಮಾಡಲಾಗಿ ಪರಿಷ್ಕೃತ ಪಠ್ಯಪುಸ್ತಕ ಬಂದ ಮೇಲೆ ಯಾರೊಬ್ಬರೂ ಪ್ರೌಢಶಾಲಾ ಹಂತದ ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗ್ಗೆ ಅಧ್ಯಯನ ಕೈಗೊಂಡಿರುವುದಿಲ್ಲ. ಆದ್ದರಿಂದ ಈ ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗ್ಗೆ ಅಧ್ಯಯನ ಮಾಡಲು ಈ ಸಮಸ್ಯೆಯನ್ನು ಆಯ್ಕೆ ಮಾಡಿಕೊಳ್ಳಲಾಯಿತು.

ಇದಕ್ಕೂ ಮೊದಲು ಕೇವಲ ಸಮಾಜ ವಿಜ್ಞಾನ ಪಠ್ಯಪುಸ್ತಕದ ಬಗ್ಗೆ ವಿಮರ್ಶಾತ್ಮಕ ಅಧ್ಯಯನ ಕೈಗೊಳ್ಳಲಾಗಿದೆ. ಇದರಿಂದ ಭಾಷಾ ವಿಷಯದ ಪ್ರೌಢಶಾಲಾ ಹಂತದ ಪಠ್ಯಪುಸ್ತಕದಲ್ಲಿ ಭಾಷೆ ಮತ್ತು ಸಾಹಿತ್ಯ ಬೋಧನೆಯ ಬಗ್ಗೆ ಅಧ್ಯಯನ ಕೈಗೊಳ್ಳಬೇಕೆಂಬ ಆಸಕ್ತಿ ಮೂಡಿದ್ದರಿಂದ ಈ ಸಮಸ್ಯೆಯನ್ನು ಆಯ್ಕೆ ಮಾಡಿಕೊಳ್ಳಲಾಯಿತು.

ಪ್ರೌಢಶಾಲಾ ಹಂತದಲ್ಲಿ **ಪ್ರಥಮ, ದ್ವಿತೀಯ, ತೃತೀಯ** ಭಾಷೆಗಳಲ್ಲಿ ಕನ್ನಡ ಭಾಷಾ ಕೌಶಲಗಳನ್ನು ಕರಗತ ಮಾಡಿಕೊಳ್ಳುವಲ್ಲಿ, ಕನ್ನಡ ಭಾಷೆಯ ಬಗ್ಗೆ ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಮೂಡಿಸುವಂತೆ ಪಠ್ಯಪುಸ್ತಕಗಳು ರಚನೆಯಾಗಿವೆಯೇ? ಎಂಬುದನ್ನು ಅಧ್ಯಯನ ಮಾಡಲು ಈ ಸಮಸ್ಯೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ.

ವಿದ್ಯಾರ್ಥಿಗಳು ಓದುವಾಗ ಕಂಡು ಬರುವ ಕನ್ನಡ ಭಾಷೆಯ ಬಗ್ಗೆ ತಿಳಿದುಕೊಳ್ಳಬೇಕಾದರೆ, ಶಿಕ್ಷಕರು ಬೋಧಿಸುವಾಗ ಪಠ್ಯಪುಸ್ತಕದಲ್ಲಿರುವ ಲೋಪದೋಷಗಳನ್ನು ಗುರುತಿಸಿ ಅವುಗಳಿಗೆ ಸೂಕ್ತ ರೀತಿಯ ಪರಿಹಾರ ದೊರಕಿಸಿಕೊಡಬೇಕೆಂಬ ಉದ್ದೇಶದಿಂದ ಈ ಸಮಸ್ಯೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

1.4 ಅಧ್ಯಯನದ ಉದ್ದೇಶಗಳು

- ಪಠ್ಯಪುಸ್ತಕದಲ್ಲಿನ ಗದ್ಯ-ಪದ್ಯಭಾಗವು ಭಾಷೆ ಮತ್ತು ಸಾಹಿತ್ಯ ಬೋಧನೆಗೆ ಸಹಾಯಕವಾಗಿದೆಯೇ ಎಂಬುದನ್ನು ವಿಶ್ಲೇಷಿಸುವುದು.
- ಪಠ್ಯಪುಸ್ತಕಗಳಲ್ಲಿರುವ ಪಠ್ಯವಸ್ತುವಿನಿಂದ ನೈತಿಕ ಮೌಲ್ಯಗಳನ್ನು ನಾಡು-ನುಡಿಗಳ ಬಗ್ಗೆ ಅಭಿಮಾನ ಮತ್ತು ಗೌರವವನ್ನು, ಭಾಷಾ ಕೌಶಲಗಳನ್ನು ಬೆಳೆಸಬಹುದೇ ಎಂಬುದನ್ನು ತಿಳಿಯುವುದು.

- ಪ್ರಥಮ, ದ್ವಿತೀಯ, ತೃತೀಯ ಭಾಷೆಗಳ ಪಠ್ಯಪುಸ್ತಕದಲ್ಲಿ ವ್ಯಾಕರಣಾಂಶಗಳು, ಗಾದೆ ಮಾತು ಒಗಟುಗಳನ್ನು ಬಳಕೆ ಮಾಡಿದ್ದಾರೆಯೇ ಎಂಬುದನ್ನು ಮನಗಾಣುವುದು.
- ಸಾಹಿತ್ಯ ಬೋಧನೆಗೆ ಸಹಾಯಕವಾಗುವಂತಹ ಅಂಶಗಳಿವೆಯೇ ಎಂಬುದನ್ನು ಅಧ್ಯಯನ ಮಾಡುವುದು.
- ಮಕ್ಕಳ ಮಾನಸಿಕ ಮಟ್ಟಕ್ಕೆ ಅನುಗುಣವಾಗಿ ಪಠ್ಯಪುಸ್ತಕಗಳು ರಚನೆಗೊಂಡಿದೆಯೇ ಎಂಬುದನ್ನು ಪರೀಕ್ಷಿಸುವುದು.

1.5 ಅಧ್ಯಯನದ ಪ್ರಾಮುಖ್ಯತೆ

- ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಪಠ್ಯಪುಸ್ತಕಗಳ ಪಾತ್ರ ಮಹತ್ವದ್ದಾಗಿದೆ. ಪುಸ್ತಕಗಳಿಲ್ಲದ ಬೋಧನೆ ಇಂದು ದುಸ್ತರವಾಗಿದೆ.
- ಪಠ್ಯಪುಸ್ತಕಗಳು ಶಾಲೆಯ ಒಳಗೆ ಮತ್ತು ಹೊರಗೆ ಪಡೆಯುವ ವಿವಿಧ ರೀತಿಯ ಅನುಭವಗಳನ್ನು ಒಳಗೊಂಡಿದ್ದು, ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿವೆ.
- ಕನ್ನಡ ಭಾಷಾ ಸಾಮರ್ಥ್ಯಗಳು, ಬೋಧನೆಯ ಪರಿಣಾಮವನ್ನು ಗುಣಾತ್ಮಕವಾಗಿ ಕಾಣಲು ಪಠ್ಯಪುಸ್ತಕಗಳು ಮಾರ್ಗದರ್ಶಿಗಳಿದ್ದಂತೆ.
- ಬೋಧನೆಯ ಅರ್ಧ ಸಾಮಗ್ರಿಯೇ ಪಠ್ಯಪುಸ್ತಕ. ಶಿಕ್ಷಕರು ಬೋಧನೆ ಕೈಗೊಳ್ಳಲು ಅತ್ಯುತ್ತಮ ಸಾಧನ ಪಠ್ಯಪುಸ್ತಕ.
- ಪ್ರೌಢಶಾಲಾ ಹಂತದ ಪ್ರಥಮ, ದ್ವಿತೀಯ, ತೃತೀಯ ಭಾಷಾ ಪಠ್ಯಪುಸ್ತಕಗಳಲ್ಲಿನ ಕನ್ನಡ ಭಾಷೆ ಮತ್ತು ಬೋಧನೆಯ ಪರಿಣಾಮವನ್ನು ತಿಳಿಸಲು ಸಹಾಯಕವಾಗಿವೆ.
- ಪಠ್ಯ ಪುಸ್ತಕಗಳು ಶಿಕ್ಷಕರ ಕೈಪಿಡಿಯಾಗಿದ್ದು, ಯಾರಿಗೆ ಏನನ್ನು ಹೇಗೆ ಅನುಕ್ರಮವಾಗಿ ಬೋಧಿಸಬೇಕು? ಯಾವ ನಿಯಮಗಳ ಕಡೆ ಗಮನ ಹರಿಸಬೇಕು ಎಂಬ ಜ್ಞಾನವನ್ನು ತಿಳಿಸುತ್ತವೆ.

1.6 ಪ್ರೌಢ ಶಾಲಾ ಶಿಕ್ಷಣ

ಇದು ಮೂರನೆಯ ಹಂತದ ಶಿಕ್ಷಣಕ್ಕೆ ಸಂಬಂಧಿಸಿದ್ದು. ಈ ಹಂತವು ಶಬ್ದವೇ ಸೂಚಿಸುವಂತೆ ಪ್ರೌಢ ಅವಸ್ಥೆ. ಈ ಹಂತದಲ್ಲಿ ವಿಷಯ ಮತ್ತು ಭಾಷೆ ಎರಡೂ ಕಲಿಕೆಯಲ್ಲಿ ಮುಖ್ಯವಾಗುತ್ತದೆ.

ಮಾಧ್ಯಮಿಕ ಶಾಲೆಯಲ್ಲಿ ವಿಷಯಗಳ ಮೂಲಕ ಭಾಷೆ ಕಲಿಸಿದರೆ, ಈ ಹಂತದಲ್ಲಿ ವಿಷಯ ಮತ್ತು ಭಾಷೆ ಎರಡನ್ನು ಸಮಾನವಾಗಿ ಕಲಿಯಲು ಅನುಕೂಲವಾಗುವ ಪಠ್ಯಗಳ ರಚನೆ ಅತ್ಯಗತ್ಯವಾಗಿ ಬೇಕಾಗಿರುತ್ತದೆ.

ಪ್ರೌಢಶಾಲೆಗಳಲ್ಲಿ ಎಂಟು, ಒಂಬತ್ತು ಮತ್ತು ಹತ್ತನೆಯ ತರಗತಿಗಳು ಬರುತ್ತವೆ. ಈ ಹಂತದಲ್ಲಿ ಪ್ರಥಮ ಭಾಷೆ, ದ್ವಿತೀಯ ಭಾಷೆ ಮತ್ತು ತೃತೀಯ ಭಾಷೆಗಳಿರುತ್ತವೆ. ಎಂಟನೆಯ ತರಗತಿಯ ಕನ್ನಡ ಪ್ರಥಮ, ದ್ವಿತೀಯ ಮತ್ತು ತೃತೀಯ ಭಾಷಾ ಪಠ್ಯಪುಸ್ತಕಗಳ ಪ್ರತಿ ಪುಸ್ತಕದಲ್ಲಿ ಇಪ್ಪತ್ತು ಇಪ್ಪತ್ತೈದು ಪಾಠಗಳಿರಬೇಕು. ಪುನರಾವರ್ತನೆಗೆ ಈ ಪುಸ್ತಕಗಳಲ್ಲಿ ಅವಕಾಶ ಇರಬಾರದು. ಮಕ್ಕಳಿಗೆ ಪಾಠ ಹೊರೆಯಾಗಬಾರದು. ವಿಷಯಕ್ಕನುಗುಣವಾದ ಪಾಠಗಳನ್ನು ಪಠ್ಯಗಳಲ್ಲಿ ಅಳವಡಿಸಿದಲ್ಲಿ ಉತ್ತಮ ಫಲಿತಾಂಶವನ್ನು ನಾವು ನಿರೀಕ್ಷಿಸಬಹುದು.

1.7 ಪ್ರೌಢಶಾಲಾ ಹಂತದ ಕನ್ನಡ ಭಾಷಾ ವಿಷಯದ ಪಠ್ಯಕ್ರಮ

ರಾಷ್ಟ್ರೀಯ ಶಿಕ್ಷಣ ನೀತಿಯ ಹಿನ್ನಲೆಯಲ್ಲಿ NCF – 2005 ಮತ್ತು KCF - 2007 ರ ಮಾರ್ಗದರ್ಶನಕ್ಕನುಗುಣವಾಗಿ ಕರ್ನಾಟಕ ಸರಕಾರವು ಕನ್ನಡ ಭಾಷಾ ವಿಷಯದ ಪಠ್ಯಕ್ರಮ ರಚಿಸಿದೆ. ಪಠ್ಯಕ್ರಮವು ಈ ಕೆಳಗಿನಂತಿದೆ.

8 ನೇ ತರಗತಿಯ ಕನ್ನಡ ಪ್ರಥಮ ಭಾಷಾ ವಿಷಯದ ಪಠ್ಯಕ್ರಮ
ಪರಿವಿಡಿ

ಕ್ರ.ಸಂ	ಗದ್ಯ ಭಾಗ	ಕೃತಿಕಾರರ ಹೆಸರು
1	ಮಗ್ಗದ ಸಾಹೇಬ	– ಬಾಗಲೋಡಿ ದೇವರಾಯ
2	ನೀರು ಕೊಡದ ನಾಡಿನಲ್ಲಿ	– ನೇಮಿಚಂದ್ರ
3	ತಲಕಾಡಿನ ವೈಭವ	– ಹಿರೇಮಲ್ಲೂರು ಈಶ್ವರನ್
4	ಸಾರ್ಥಕ ಬದುಕಿನ ಸಾಧಕ	– ಎಸ್. ಎಸ್. ಲಕ್ಷ್ಮೀನಾರಾಯಣ ಭಟ್ಟ
5	ಹೂವಾದ ಹುಡುಗಿ	– ಎ.ಕೆ. ರಾಮಾನುಜನ್
6	ಯಶೋಧರೆ	– ಮಾಸ್ತಿ ವೆಂಕಟೇಶ ಅಯ್ಯಂಗಾರ್
7	ಅಮ್ಮ	– ಯು.ಆರ್. ಅನಂತಮೂರ್ತಿ
8	ಸಪ್ತಾಕ್ಷರಿ ಮಂತ್ರ	– ಮುದ್ದಣ
	ಪದ್ಯ ಭಾಗ	
1	ಕನ್ನಡಿಗರ ತಾಯಿ	– ರಾಷ್ಟ್ರಕವಿ ಎಂ. ಗೋವಿಂದ ಪೈ
2	ಸಣ್ಣ ಸಂಗತಿ	– ಕೆ. ಎಸ್. ನರಸಿಂಹಸ್ವಾಮಿ
3	ಗೆಳೆತನ	– ಚೆನ್ನವೀರ ಕಣವಿ
4	ಭರವಸೆ	– ಬಿ. ಟಿ. ಲಲಿತಾನಾಯಕ್
5	ವಚನಾಮೃತ	– ಅಲ್ಲಮಪ್ರಭು – ಆಯ್ದಕ್ಕಿಮಾರಯ್ಯ – ಅಮುಗೆರಾಯಮ್ಮ – ಶಿವಶರಣೆ ಲಿಂಗಮ್ಮ
6	ಸೋಮೇಶ್ವರ ಶತಕ	– ಪುಲಿಗೆರೆ ಸೋಮನಾಥ
7	ಜೀವನ ದರ್ಶನ	– ಶ್ರೀಪಾದರಾಜ – ಗೋಪಾಲದಾಸರು – ವಿಜಯದಾಸರು
8	ರಾಮಧಾನ್ಯ ಚರಿತೆ	– ಕನಕದಾಸರು
	ಪಠ್ಯಪೂರಕ ಅಧ್ಯಯನ	
1	ಕಟ್ಟುವೆವು ನಾವು	– ಎಂ. ಗೋಪಾಲಕೃಷ್ಣ ಅಡಿಗ
2	ಸಾರ್ಥಕ	– ದಿನಕರ ದೇಸಾಯಿ
3	ಆಹುತಿ	– ಕೊಡಗಿನ ಗೌರಮ್ಮ
4	ಮಗಳಿಗೆ ಬರೆದ ಪತ್ರಗಳು	– ಜವಹರಲಾಲ್ ನೆಹರು, ಅನುವಾದ – ತಿ. ತಾ. ಶರ್ಮ, ಸಿದ್ದವನಹಳ್ಳಿ ಕೃಷ್ಣಶರ್ಮ
5	ಆಟೋರಿಕ್ಷಾದ ರಸಪ್ರಸಂಗಗಳು	– ಎಚ್. ನರಸಿಂಹಯ್ಯ

9 ನೇ ತರಗತಿಯ ಕನ್ನಡ ಪ್ರಥಮ ಭಾಷಾ ವಿಷಯದ ಪಠ್ಯಕ್ರಮ

ಪರಿವಿಡಿ

ಕ್ರ.ಸಂ.	ಗದ್ಯ ಭಾಗ	ಕೃತಿಕಾರರ ಹೆಸರು
1	ಕನ್ನಡ ಮೌಲ್ವಿ	ಗೊರೂರು ರಾಮಸ್ವಾಮಿ ಅಯ್ಯಂಗಾರ್
2	ಬೆಡಗಿನ ತಾಣ ಜಯಪುರ	ಶಿವರಾಮ ಕಾರಂತ
3	ಧರ್ಮಸಮದೃಷ್ಟಿ	ವಿಜಯನಗರ ಶಾಸನ
4	ಆದರ್ಶಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್	ಸಮಿತಿ ರಚನೆ
5	ಪ್ರಜಾನಿಷ್ಠೆ	ಸಾ. ಶಿ. ಮರುಳಯ್ಯ
6	ಜನಪದ ಕಲೆಗಳ ವೈಭವ	ಸಮಿತಿ ರಚನೆ
7	ಊರುಭಂಗ	ಎಲ್. ಬಸವರಾಜು
8	ಹರಲೀಲೆ	ಹರಿಹರ
	ಪದ್ಯ ಭಾಗ	
1	ಹೊಸಹಾಡು	ಕಯ್ಯಾರ ಕಿಞ್ಞಣ್ಣ ರೈ
2	ಪಾರಿವಾಳ	ಸು. ರಂ. ಎಕ್ಕುಂಡಿ
3	ಸಿರಿಯನಿನ್ನೇನ ಬಣ್ಣಿಪೆನು	ರತ್ನಾಕರವರ್ಣಿ
4	ನಿಯತಿಯನಾರ್ ಮೀಱಿದಪರ್	ಜನ್ನ
5	ಮರಳಿ ಮನೆಗೆ	ಅರವಿಂದ ಮಾಲಗತ್ತಿ
6	ತತ್ತ್ವಪದಗಳು	ಕಡಕೋಳ ಮಡಿವಾಳಪ್ಪ, ಶಿಶುನಾಳ ಷರೀಫ್
7	ನಿನ್ನ ಮುತ್ತಿನ ಸತ್ತಿಗೆಯನ್ನಿತ್ತು ಸಲಹು	ರಾಘವಾಂಕ
8	ಕನ್ನಡ ನಾಡು ನುಡಿ	ಶ್ರೀ ವಿಜಯ, ನಯಸೇನ, ನೇಮಿಚಂದ್ರ, ಮಹಾಲಿಂಗರಂಗ, ಆಂಡಯ್ಯ
	ಪಠ್ಯ ಪೂರಕ ಅಧ್ಯಯನ	
1	ಗುಣಸಾಗರಿ ಪಂಢರೀಬಾಯಿ	ಜಯಮಾಲಾ
2	ರಂಜಾನ್ ಸುರಕುಂಬಾ	ನೀಲಾ ಕೆ.
3	ನನ್ನಾಸೆ	ಇಂದುಮತಿ ಲಮಾಣಿ
4	ಉರಿದ ಬದುಕು	ಶಾಂತರಸ
5	ಪುಟ್ಟಹಕ್ಕಿ	ಜಂಬಣ್ಣ ಅಮರಚಿಂತ

10 ನೇ ತರಗತಿಯ ಕನ್ನಡ ಪ್ರಥಮ ಭಾಷಾ ವಿಷಯದ ಪಠ್ಯಕ್ರಮ

ಪರಿವಿಡಿ

ಕ್ರ. ಸಂ	ಗದ್ಯಭಾಗ	ಕೃತಿಕಾರರ ಹೆಸರು
1.	ಯುದ್ಧ	ಸಾರಾ ಅಬೂಬಕ್ಕರ್
2.	ಶಬರಿ	ಪು. ತಿ. ನರಸಿಂಹಾಚಾರ್
3.	ಲಂಡನ್ ನಗರ	ವಿ. ಕೃ. ಗೋಕಾಕ್
4.	ಭಾಗ್ಯಶಿಲ್ಪಿಗಳು (ನಾಲ್ವಡಿ ಕೃಷ್ಣರಾಜ ಒಡೆಯರು, ಸರ್. ಎಂ. ವಿಶ್ವೇಶ್ವರಯ್ಯ)	ಸಮಿತಿ ರಚನೆ / ಡಿ. ಎಸ್. ಜಯಪ್ಪಗೌಡ
5.	ಎದೆಗೆ ಬಿದ್ದ ಅಕ್ಷರ	ದೇವನೂರು ಮಹಾದೇವ
6.	ವ್ಯಾಘ್ರಗೀತೆ	ಎ. ಎನ್. ಮೂರ್ತಿರಾವ್
7.	ವೃಕ್ಷಸಾಕ್ಷಿ	ದುರ್ಗಸಿಂಹ
8.	ಸುಕುಮಾರ ಸ್ವಾಮಿಯ ಕತೆ	ಶಿವಕೋಟ್ಯಾಚಾರ್ಯ
	ಪದ್ಯಭಾಗ	
1.	ಸಂಕಲ್ಪಗೀತೆ	ಜಿ. ಎಸ್. ಶಿವರುದ್ರಪ್ಪ
2.	ಹಕ್ಕಿಹಾರುತಿದೆ ನೋಡಿದಿರಾ	ದ. ರಾ. ಬೇಂದ್ರೆ
3.	ಹಲಗಲಿ ಬೇಡರು	ಜನಪದ ಲಾವಣಿ (ಸಂಗ್ರಹ)
4.	ಕೌರವೇಂದ್ರನ ಕೊಂದೆ ನೀನು	ಕುಮಾರ ವ್ಯಾಸ
5.	ಹಸುರು	ಕುವೆಂಪು
6.	ಛಲಮನೆ ಮೆಱೆವೆಂ	ರನ್ನ
7.	ವೀರಲವ	ಲಕ್ಷ್ಮೀಶ
8.	ಕೆಮ್ಮನೆ ಮೀಸೆವೊತ್ತನೇ	ಪಂಪ
	ಪಠ್ಯಪೂರಕ ಅಧ್ಯಯನ	
1.	ಸ್ವಾಮಿ ವಿವೇಕಾನಂದರ ಚಿಂತನೆಗಳು	ಸಮಿತಿ ರಚನೆ
2.	ವಸಂತ ಮುಖ ತೋರಲಿಲ್ಲ	ವಿಜಯಶ್ರೀ ಸಬರದ
3.	ಭಗತ್ ಸಿಂಗ್	ಜಿ. ರಾಮಕೃಷ್ಣ
4.	ಮೃಗ ಮತ್ತು ಸುಂದರಿ	ಪಿ. ಲಂಕೇಶ್
5.	ಜನಪದ ಒಗಟುಗಳು	ಸಂಗ್ರಹ

8 ನೇ ತರಗತಿಯ ಕನ್ನಡ ದ್ವಿತೀಯ ಭಾಷಾ ವಿಷಯದ ಪಠ್ಯಕ್ರಮ

ಪರಿವಿಡಿ

ಕ್ರ. ಸಂ.	ಪಾಠದ ಹೆಸರು	ಕೃತಿಕಾರರು
ಗದ್ಯಭಾಗ		
೧.	ಬುದ್ಧನ ಸಲಹೆ	ನಿರುಪಮಾ
೨.	ಕನಸು ಮತ್ತು ಸಂದೇಶ	ಎ.ಪಿ.ಜೆ. ಅಬ್ದುಲ್ ಕಲಾಂ
೩.	ಗಾಂಧೀಜಿಯ ಬಾಲ್ಯ	ಗೊರೂರು ರಾಮಸ್ವಾಮಿ ಅಯ್ಯಂಗಾರ್
೪.	ಸುಕ್ರಿ ಬೊಮ್ಮನ ಗೌಡ	ಶಾಂತಿ ನಾಯಕ
೫.	ಬ್ಲಡ್ ಗ್ರೂಪ್	ವಿಜಯಮಾಲಾ ರಂಗನಾಥ್
೬.	ಪರಿವರ್ತನೆ	ಜಿ. ಎಸ್. ಬಸವರಾಜಶಾಸ್ತ್ರಿ
೭.	ಒಂದು ಮರದ ಬೆಲೆ	ಹಾ.ಮಾ. ನಾಯಕ
೮	ಆಸನದ ಮೇಲೆ ಆಸನ	ರಾಶಿ
ಪದ್ಯಭಾಗ		
೧.	ಅನ್ವೇಷಣೆ	ಜಿ.ಎಸ್. ಶಿವರುದ್ರಪ್ಪ
೨.	ಹಾರಿದ ಹಕ್ಕಿಗಳು	ಆರ್.ವಿ. ಭಂಡಾರಿ
೩.	ಜ್ಯೋತಿಯೇ ಆಗು ಜಗಕೆಲ್ಲ	ಜನಪದಗೀತೆ
೪.	ನನ್ನ ಹಾಗೆಯೆ	ಸು. ರಂ. ಎಕ್ಕುಂಡಿ
೫.	ತೂಗಿ ತೂಗಿ ಮರಗಳೇ	ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ
೬.	ಮಳೆ ಬರಲಿ	ಸವಿತಾ ನಾಗಭೂಷಣ
೭.	ಹಕ್ಕಿಗಳು	ಸಿದ್ಧಲಿಂಗಯ್ಯ
೮.	ಗೌರವಿಸು ಜೀವನವ	ಡಿ.ವಿ.ಜಿ.

9 ನೇ ತರಗತಿಯ ಕನ್ನಡ ದ್ವಿತೀಯ ಭಾಷಾ ವಿಷಯದ ಪಠ್ಯಕ್ರಮ

ಪರಿವಿಡಿ

ಕ್ರ. ಸಂ.	ಪಾಠದ ಹೆಸರು	ಕೃತಿಕಾರರು
ಗದ್ಯಭಾಗ		
೧.	ಅವರೇ ರಾಜರತ್ನಂ!	ಕೆ. ಪಿ. ಪೂರ್ಣಚಂದ್ರ ತೇಜಸ್ವಿ
೨.	ಅರಳಿಕಟ್ಟೆ	ಬಿ. ಜಿ. ಎಲ್. ಸ್ವಾಮಿ
೩.	ಜೇನು ಕುರುಬರ ತಾಯಿಯೂ ಕಾಡು ಆನೆಯ ಮಗನೂ	ಅಬ್ದುಲ್ ರಶೀದ್
೪.	ಬಸ್ಸು ಪ್ರಯಾಣದ ಸುಖ ದುಃಖಗಳು	ವೀರೇಂದ್ರ ಸಿಂಪಿ
೫.	ಉರುಸುಗಳಲ್ಲಿ ಭಾವೈಕ್ಯತೆ	ದಸ್ತಗೀರ ಅಲ್ಲೀಭಾಯಿ
೬.	ಪಾಂಡಿತ್ಯದ ಡಿ.ಎಲ್. ನರಸಿಂಹಾಚಾರ್	ಎಂ.ಎಂ. ಕಲಬುರ್ಗಿ
೭.	ಐನ್‌ಸ್ಟೀನ್ ಮತ್ತು ದೇವರು	ಎಚ್. ನರಸಿಂಹಯ್ಯ
೮.	ಭೀಷ್ಮ ಪ್ರತಿಜ್ಞೆ	ಎ. ಆರ್. ಕೃಷ್ಣಶಾಸ್ತ್ರಿ
ಪದ್ಯಭಾಗ		
೧.	ಬೆಳಗು ಜಾವ	ದ. ರಾ. ಬೇಂದ್ರೆ
೨.	ಅಟ್ಟ ಹತ್ತ ಬೇಡ	ಎಲ್. ಹನುಮಂತಯ್ಯ
೩.	ಅವರು ಮತ್ತು ನಾವು	ಟಿ. ಯಲ್ಲಪ್ಪ
೪.	ತೊಟ್ಟಿಲು ತೂಗುವ ಹಾಡು	ವೈದೇಹಿ
೫.	ಮನೆಗೆಲಸದ ಹೆಣ್ಣು ಮಗಳು	ಎಸ್. ಜಿ. ಸಿದ್ಧರಾಮಯ್ಯ
೬.	ಹೊನ್ನೆ ಮರದ ನೆರಳು	ಜನಪದ ಸಾಹಿತ್ಯ
೭.	ವಚನಗಳು	ಜೇಡರ ದಾಸಿಮಯ್ಯ
೮.	ಆಚಾರವಿಲ್ಲದ ನಾಲಗೆ	ಪುರಂದರದಾಸರು

10 ನೇ ತರಗತಿಯ ಕನ್ನಡ ದ್ವಿತೀಯ ಭಾಷಾ ವಿಷಯದ ಪಠ್ಯಕ್ರಮ

ಪರಿವಿಡಿ

ಕ್ರ. ಸಂ.	ಪಾಠದ ಹೆಸರು	ಕೃತಿಕಾರರು
ಗದ್ಯಭಾಗ		
೧.	ಒಣ ಮರದ ಗಿಳಿ	ಅ.ರಾ. ಮಿತ್ರ
೨.	ಅಸಿ–ಮಸಿ–ಕೃಷಿ	ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ
೩.	ಗಾನಯೋಗಿ ಪಂಡಿತ ಪುಟ್ಟರಾಜಗವಾಯಿ	ರಮೇಶಗೌಡ ಎಂ.ಕೆ.
೪.	ಹಕ್ಕಿಗೂಡುಗಳ ನಿಗೂಢ ಜಗತ್ತು	ಕೆ. ಪುಟ್ಟಸ್ವಾಮಿ, ಕೃಪಾಕರ ಮತ್ತು ಸೇನಾನಿ
೫.	ಕಾಫೀ–ಕಪ್ಪು	ಗುರುರಾಜ ಕರ್ಜಗಿ
೬.	ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂ	ಬಸವಪ್ರಭು ಪಾಟೀಲ ಕೆ. ಸಿದ್ಧಯ್ಯಸ್ವಾಮಿ
೭.	ನನ್ನ ಗೋಪಾಲ	ಕುವೆಂಪು
ಪದ್ಯಭಾಗ		
೧.	ಏಣಿ	ಸುಕನ್ಯಾ ಮಾರುತಿ
೨.	ಬೋಧಿವೃಕ್ಷದ ಹಾಡು	ಬಸವರಾಜ ಸಬರದ
೩.	ಸವಿಚೈತ್ರ	ಬಸವರಾಜ ಸಾದರ
೪.	ಸದ್ದು ಮಾಡದಿರು	ಸಿ.ಪಿ. ಕೃಷ್ಣಕುಮಾರ್
೫.	ಗುರಿ	ಎಂ. ಗೋಪಾಲಕೃಷ್ಣ ಅಡಿಗ
೬.	ಮೂಡಲ್ ಕುಣಿಗಲ್ ಕೆರೆ	ಜನಪದ
೭.	ವಚನಗಳು	ಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ
೮.	ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ	ಕುಮಾರವ್ಯಾಸ (ಗದುಗಿನ ನಾರಣಪ್ಪ)

ಸೈದ್ಧಾಂತಿಕ ವ್ಯಾಕರಣ, ಛಂದಸ್ಸು ಮತ್ತು ಅಲಂಕಾರ.	
1.	ಕನ್ನಡ ವರ್ಣಮಾಲೆ – ಕನ್ನಡ ಸಂಧಿಗಳು
2	ಸಂಸ್ಕೃತ ಸಂಧಿಗಳು
3	ನಾಮಪದ – ನಾಮಪದದ ವಿಧಗಳು
4	ಕಾಲಗಳು – ವಿಭಕ್ತಿ ಪ್ರತ್ಯಯಗಳು
5	ಸಮಾಸಗಳು
6	ಅವ್ಯಯಗಳು, ದ್ವಿರುಕ್ತಿ–ಜೋಡುನುಡಿ–ನುಡಿಗಟ್ಟು, ತತ್ಸಮ–ತದ್ಭವ
7	ಕ್ರಿಯಾಪದ
8	ಛಂದಸ್ಸು
9	ಅಲಂಕಾರಗಳು
ರಚನೆ	
1	ಪತ್ರಲೇಖನ
2.	ಪ್ರಬಂಧ ರಚನೆ
3	ಗಾದೆಗಳ ವಿಸ್ತರಣೆ
ಪೂರಕ ಓದು	
1	ಕಳ್ಳರ ಗುರು – ಬೆಟಗೇರಿ ಕೃಷ್ಣಶರ್ಮ
2.	ಹೊಂಗೆ ಬೇವುಗಳ ಹಾಡು – ಡಾ. ಎಚ್.ಎಲ್. ಪುಷ್ಪ

8 ನೇ ತರಗತಿಯ ಕನ್ನಡ ತೃತೀಯ ಭಾಷಾ ವಿಷಯದ ಪಠ್ಯಕ್ರಮ

ಪರಿವಿಡಿ

ಭಾಗ–೧ ಪಠ್ಯಪ್ರಧಾನ ಅಧ್ಯಯನ – ಗದ್ಯ ಪದ್ಯಗಳು			
ಕ್ರಸಂ	ಪಾಠಗಳ ಹೆಸರು	ಪ್ರಕಾರ	ಕೃತಿಕಾರರ ಹೆಸರು
೧	ಕಾಮನಬಿಲ್ಲು ಕಮಾನು ಕಟ್ಟಿದೆ	ಪದ್ಯ	ಕುವೆಂಪು
೨	ಮರದ ಧ್ಯಾನದಲ್ಲಿ	ಗದ್ಯ	ಆರ್. ಕುಮಾರ್
೩	ಕನ್ನಡದ ಕಹಳೆ ಮೊಳಗಲಿ	ಪದ್ಯ	ಬಸವರಾಜ ಸಬರದ
೪	ಭಲೇ ಬಿಂದು	ಗದ್ಯ	ಬಿ. ಬೋರೇಗೌಡ
೫	ಹಗಲು ವೇಷಗಾರರು	ಪದ್ಯ	ಜಂಬಣ್ಣ ಅಮರಚಿಂತ
೬	ಬಾಲ್ಯದ ನೆನಪುಗಳು	ಗದ್ಯ	ಶಿವರಾಮ ಕಾರಂತ
೭	ನೆನಪಿದೆಯೆ ನಿನಗೆ?	ಪದ್ಯ	ಜಿ.ಎಸ್. ಶಿವರುದ್ರಪ್ಪ
೮	ಚಿನ್ನದ ಗೊಂಬೆಗಳು	ಗದ್ಯ	ನಲಿ– ಕಲಿ ಸಾಹಿತ್ಯ
೯	ಮಳೆಯ ಹಾಡು	ಪದ್ಯ	ಸಂಧ್ಯಾರೆಡ್ಡಿ ಕೆ.ಆರ್.
೧೦	ಮಾಸ್ತಿಯವರ ಮಾತೃಪ್ರೇಮ	ಗದ್ಯ	ಬೆಳಗೆರೆ ಕೃಷ್ಣಶಾಸ್ತ್ರಿ
೧೧	ಭೂಮಿತಾಯಿ	ಪದ್ಯ	ಜನಪದ
೧೨	ಕರ್ಚೀಫ್ ಮಹಿಮೆ	ಗದ್ಯ	ಜಯಪ್ರಕಾಶ್ ಅಬ್ಬಿಗೆರೆ
೧೩	ಬಿಡು ಭ್ರಮೆಯ	ಪದ್ಯ	ಬಿ.ಟಿ. ಲಲಿತಾನಾಯಕ್
೧೪	ಪಂಪಾ ಯಾತ್ರೆ	ಗದ್ಯ	ವಿ. ಸೀತಾರಾಮಯ್ಯ
೧೫	ಅಜ್ಜಿಯ ತೋಟ	ಗದ್ಯ	ಕೆ.ಸಿ. ಶಶಿಧರ
೧	ಮುಗ್ಧ ಹೂಗಳು	ಪದ್ಯ	ಬಿದರಹಳ್ಳಿ ನರಸಿಂಹಮೂರ್ತಿ
೨	ಉದ್ಯಾನಶಿಲ್ಪಿ ಜಿ.ಎಚ್. ಕೃಂಬಿಗಲ್	ಗದ್ಯ	ಸಂಪಾದಕರು
೩	ಸಾವೇ	ಪದ್ಯ	ರಂಜಾನ ದರ್ಗಾ
೪	ಬಿಳಿದಾಳೆ ಆನೆಗಳು	ಗದ್ಯ	ಪಾರ್ವತೀಶ್

9 ನೇ ತರಗತಿಯ ಕನ್ನಡ ತೃತೀಯ ಭಾಷಾ ವಿಷಯದ ಪಠ್ಯಕ್ರಮ

ಪರಿವಿಡಿ

ಭಾಗ-1 ಪಠ್ಯ ಪ್ರಧಾನ ಅಧ್ಯಯನ ಗದ್ಯ-ಪದ್ಯ

ಕ್ರ.ಸಂ.	ಪಠ್ಯದ ಹೆಸರು	ಪ್ರಕಾರ	ಕೃತಿಕಾರರ ಹೆಸರು
೧	ವಸಂತ	ಪದ್ಯ	ಬಿ.ಎಂ. ಶ್ರೀ
೨	ಅಧಿಕಾರ	ಗದ್ಯ	ಗಿರೀಶ ಕಾರ್ನಾಡ
೩	ಮಿತ್ರ	ಪದ್ಯ	ಎಂ. ಅಕಬರ ಅಲಿ
೪	ನಾಲಗೆ	ಗದ್ಯ	ಎನ್.ಎಸ್. ತಾರಾನಾಥ್
೫	ಕನ್ನಡವ ನುಡಿ	ಪದ್ಯ	ಸವಿತಾ ನಾಗಭೂಷಣ
೬	ಯಕ್ಷಪ್ರಶ್ನೆ	ಗದ್ಯ	ಸಂಪಾದಿತ
೭	ನೀತಿ ಮಾತು	ಪದ್ಯ	ಕನಕದಾಸ
೮	ನಾನು ಕನ್ನಡ ಕವಿಯಾದೆ	ಗದ್ಯ	ಕುವೆಂಪು
೯	ಒಂದು ರಾತ್ರಿ	ಪದ್ಯ	ಎಸ್.ವಿ. ಪರಮೇಶ್ವರ ಭಟ್ಟ
೧೦	ಬುದ್ಧನ ಸನ್ನಿಧಿಯಲ್ಲಿ ದಿವ್ಯ ಮೌನ	ಗದ್ಯ	ರಾಜಶೇಖರ ಹತಗುಂದಿ
೧೧	ನಿರೀಕ್ಷೆ	ಪದ್ಯ	ಡಿ.ಎಸ್. ವೀರಯ್ಯ
೧೨	ನನ್ನ ಟೋಪಿ	ಗದ್ಯ	ಬಿ.ಜಿ.ಎಲ್. ಸ್ವಾಮಿ
೧೩	ಬಡತನ	ಪದ್ಯ	ಜನಪದ
೧೪	ಬುಲ್ಡೋಜರ್ ಸಂಸ್ಕೃತಿ	ಗದ್ಯ	ನಾಗೇಶ್ ಹೆಗಡೆ
೧೫	ಸೂಲಗಿತ್ತಿ ನರಸಮ್ಮ	ಗದ್ಯ	ಬಾ. ಹ. ರಮಾಕುಮಾರಿ
೧	ಚತುರ ಮೊಲ	ಗದ್ಯ	ಸಂಗ್ರಹ
೨	ಅಲ್ಲಮನ ವಚನ	ಪದ್ಯ	ಅಲ್ಲಮ ಪ್ರಭು
೩	ಕನ್ನಡ ನುಡಿ	ಗದ್ಯ	ಬೆಟಗೇರಿ ಕೃಷ್ಣಶರ್ಮ
೪	ಶಬ್ದಗಳು	ಪದ್ಯ	ಡಾ. ಸರಜೂ ಕಾಟ್ಕರ್
೫	ಅಮ್ಮನಾಗುವುದೆಂದರೆ	ಪದ್ಯ	ರೂಪ ಹಾಸನ
೬	ಯಾತಕ್ಕೆ ಮಳೆ ಹೋದವೊ	ಪದ್ಯ	ಜನಪದ

10 ನೇ ತರಗತಿಯ ಕನ್ನಡ ತೃತೀಯ ಭಾಷಾ ವಿಷಯದ ಪಠ್ಯಕ್ರಮ

ಪರಿವಿಡಿ

ಭಾಗ–1 ಪಠ್ಯ ಪ್ರಧಾನ ಅಧ್ಯಯನ ಗದ್ಯ – ಪದ್ಯ

ಕ್ರಮಸಂಖ್ಯೆ	ಪಠ್ಯದ ಹೆಸರು	ಪ್ರಕಾರ	ಕೃತಿಕಾರರ ಹೆಸರು
1	ಲಾಕಪ್ಪಿನಲ್ಲಿ ಒಂದು ರಾತ್ರಿ	ಗದ್ಯ	ಗೊರೂರು ರಾಮಸ್ವಾಮಿ ಅಯ್ಯಂಗಾರ್
2	ಕಟ್ಟತೇವ ನಾವು	ಪದ್ಯ	ಸತೀಶ ಕುಲಕರ್ಣಿ
3	ಕೊಡಗಿನ ಗೌರಮ್ಮ	ಗದ್ಯ	ಮ.ನ. ಮುಕ್ತಾಯಿ
4	ಭೂಮಿತಾಯ ಕುಡಿಗಳು	ಪದ್ಯ	ಕೆ.ಎಸ್. ನಿಸಾರ್ ಅಹಮದ್
5	ಶಿಶುನಾಳ ಶರೀಫ ಸಾಹೇಬರು	ಗದ್ಯ	ಆರ್.ಎಸ್. ಸುಂಕದ
6	ಗ್ರಂಥಾಲಯದಲ್ಲಿ	ಪದ್ಯ	ಸಿ.ಪಿ.ಕೆ.
7	ಧ್ವಜರಕ್ಷಣೆ	ಗದ್ಯ	ಎಸ್.ಆರ್. ರೋಹಿಡೇಕರ್
8	ಬಸವಣ್ಣನವರ ವಚನಗಳು	ಪದ್ಯ	ಬಸವಣ್ಣ
9	ಕರ್ನಾಟಕದ ವೀರವನಿತೆಯರು	ಗದ್ಯ	ವಿಜಯಲಕ್ಷ್ಮಿ ಬಾಳೇಕುಂದ್ರಿ
10	ಉದರ ವೈರಾಗ್ಯ	ಪದ್ಯ	ಪುರಂದರದಾಸರು
11	ನನ್ನ ಪುಸ್ತಕ ಪ್ರಪಂಚ	ಗದ್ಯ	– ಬೀchi
12	ಜನಪದ ಗೀತೆ	ಪದ್ಯ	ಜನಪದ
ಭಾಗ 2 ಪಠ್ಯ ಪೂರಕ ಅಧ್ಯಯನ			
1	ಹೀಗೊಂದು ಟಾಪ್ ಪ್ರಯಾಣ	ಗದ್ಯ	ಈರಪ್ಪ ಎಂ. ಕಂಬಳಿ
2	ಸೋಮೇಶ್ವರ ಶತಕ (ಹಳಗನ್ನಡ)	ಪದ್ಯ	ಪುಲಿಗೆರೆ ಸೋಮನಾಥ
3	ಮಹಾಶಿಲ್ಪಿ	ಗದ್ಯ	ಪ್ರೇಮಾ ಭಟ್

1.8 ಅಧ್ಯಯನ ಇತಿಮಿತಿಗಳು

"ಪ್ರೌಢಶಾಲಾ ಹಂತದ ಕನ್ನಡ ಭಾಷೆ ಮತ್ತು ಸಾಹಿತ್ಯ ಬೋಧನೆಯ ಒಂದು ಅಧ್ಯಯನ" ಎಂಬ ಸಂಶೋಧನಾ ಅಧ್ಯಯನವು ಸರಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರೌಢಶಾಲೆಗಳಿಗೆ ಮಾತ್ರ ಅನ್ವಯ.

ಈ ನನ್ನ ಅಧ್ಯಯನಕ್ಕೆ ಆಯ್ದ 50 ಜನ ಕನ್ನಡ ಭಾಷಾ ಶಿಕ್ಷಕರನ್ನು ಆಯ್ಕೆ ಮಾಡಲಾಗಿದೆ.

ಪ್ರೌಢಶಾಲಾ ಹಂತದ 8, 9, 10ನೇ ತರಗತಿಯ ಪ್ರಥಮ, ದ್ವಿತೀಯ, ತೃತೀಯ ಭಾಷೆಗಳ ಪಠ್ಯಪುಸ್ತಕದಲ್ಲಿರುವ ಸಾಮಾನ್ಯ ಅಂಶಗಳಿಗೆ ಸಂಬಂಧಿಸಿದಂತೆ ಒಟ್ಟು 30 ಪ್ರಶ್ನೆಗಳನ್ನು ರಚಿಸಿ 50 ಜನ ಕನ್ನಡ ಭಾಷಾ ಶಿಕ್ಷಕರಿಗೆ ಪ್ರಶ್ನಾವಳಿ ನೀಡಿ ಅಭಿಪ್ರಾಯ ಸಂಗ್ರಹಿಸಲಾಯಿತು.

* * *

ಅಧ್ಯಾಯ – 2

ಸಂಬಂಧಿತ ಸಾಹಿತ್ಯಾವಲೋಕನ

ಅಧ್ಯಾಯ – 2

ಸಂಬಂಧಿತ ಸಾಹಿತ್ಯಾವಲೋಕನ

2.1 ಪೀಠಿಕೆ, ಅರ್ಥ ಮತ್ತು ಮಹತ್ವ

ಸಂಶೋಧನೆಗೆ ಒಂದು ವಿಷಯ ವಸ್ತುವನ್ನು ಆಯ್ಕೆ ಮಾಡಿಕೊಂಡು ಅಭ್ಯಾಸಕ್ಕೆ ತೊಡಗಿದ ಕೂಡಲೇ ಸಂಶೋಧಕ ಆ ವಿಷಯಕ್ಕೆ ಸಂಬಂಧಿಸಿದ **ಆಕರಗಳು, ಸಾಮಗ್ರಿಗಳು** ಎಲ್ಲೆಲ್ಲಿ ಸಿಗುತ್ತವೆ ಎಂಬುದನ್ನು ಹುಡುಕಿ ಸಂಗ್ರಹಿಸಬೇಕಾಗುತ್ತದೆ. ಇದನ್ನೇ **'ಸಂಬಂಧಿತ ಸಾಹಿತ್ಯಾವಲೋಕನ'** ಎನ್ನುತ್ತಾರೆ. ಸಂಶೋಧಕ ನೂರಾರು ಕಡೆಗಳಿಂದ ಅಪಾರ ಸಾಮಗ್ರಿಗಳನ್ನು ಸಂಗ್ರಹಿಸಬೇಕಾಗುತ್ತದೆ. ಇದು ಅನಿವಾರ್ಯ ಹಾಗೂ ಅವಶ್ಯಕವಾದ ಘಟಕವಾಗಿದೆ. ಹೀಗೆ ಪ್ರತಿಯೊಂದು ಸಣ್ಣ ಸಂಶೋಧನೆಯು ಸಹ ಸಂಬಂಧಿತ ಸಾಹಿತ್ಯಾವಲೋಕನವನ್ನು ಒಳಗೊಂಡಿರುತ್ತದೆ.

ಅರ್ಥ

ಅಧ್ಯಯನಗಳ ಸಮೀಕ್ಷೆಯು ನಮ್ಮ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಾರಾಂಶ ತೀರ್ಮಾನಗಳನ್ನು ಅಧ್ಯಯನದ ಮುಖ್ಯಾಂಶಗಳನ್ನು ಮತ್ತು ಮುಂದಿನ ಅಧ್ಯಯನಕ್ಕೆ ಸೂಚನೆಗಳನ್ನು ಕೊಡುತ್ತವೆ.

ಮಹತ್ವ:

ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ನಡೆದ ಅಧ್ಯಯನಗಳ ಸಮೀಕ್ಷೆ ಮಾಡುವುದು ಸಂಶೋಧನೆಯ ಒಂದು ಮುಖ್ಯ ಕಾರ್ಯವಾಗಿದೆ. ಇದರಿಂದ ಸಂಶೋಧಕನಿಗೆ ಹಾಗೂ ಸಂಶೋಧನೆಗೆ ಒಂದು ಮಹತ್ವ ಬರುವುದು ಇದನ್ನು **'ಗುಡ್ ಬಾರ್ ಮತ್ತು ಸ್ಕೇಟರ್'** ರವರು ಈ ಕೆಳಗಿನಂತೆ ವಿಶ್ಲೇಷಿಸಿದ್ದಾರೆ.

1. ದೊರಕಿರುವ ಸಾಕ್ಷಿ ಆಧಾರಗಳು ಸಮಸ್ಯೆಗಳಿಗೆ ಪರಿಹಾರವೇ? ಎಂದು ತಿಳಿದು ಸಂಶೋಧನೆಯು ಪುನರಾವರ್ತನೆ ಆಗದಂತೆ ನೋಡಿಕೊಳ್ಳುವುದು.
2. ಸಮಸ್ಯೆಗೆ ಮಾದರಿಗಳು, ಸಿದ್ಧಾಂತಗಳು, ವಿವರಣೆಗಳು ಆಧಾರ ಕಲ್ಪನೆಯನ್ನು ನೀಡುವುದು.
3. ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುವ ಸೂಕ್ತ ವಿಧಾನವನ್ನು ನಿರ್ಧರಿಸುವುದು.
4. ಫಲಿತಾಂಶವನ್ನು ವಿಮರ್ಶೆ ಮಾಡಲು ಉಪಯುಕ್ತ ತುಲನಾತ್ಮಕ ಮಾಹಿತಿಯನ್ನು ನೀಡುವುದು.
5. ಪರಿಕಲ್ಪನೆಗಳನ್ನು ಹಾಗೂ ಉದ್ದೇಶಗಳನ್ನು ರಚಿಸಲು ಮಾರ್ಗದರ್ಶನ ನೀಡುವುದು.

6. ಸಂಶೋಧಕನ ಸಂಶೋಧನೆಯಲ್ಲಿ ಸಮಸ್ಯೆಗೆ ಸಂಬಂಧಿಸಿದ ಅಧ್ಯಯನಗಳ ಸಮೀಕ್ಷೆಯು ತನ್ನದೇ ಆದ ಮಹತ್ವವನ್ನು ಹೊಂದಿದೆ ಎಂದು ಹೇಳಬಹುದು.

ಫ್ರಾಕ್ಸ್‌ರವರು ಹಿಂದಿನ ಸಂಶೋಧನೆಗಳನ್ನು ಅಭ್ಯಾಸ ಮಾಡುವುದರಿಂದ ಉಂಟಾಗುವ ಪ್ರಯೋಜನಗಳ ಕುರಿತು 1969 ರಲ್ಲಿ ಈ ರೀತಿ ಹೇಳಿದ್ದಾರೆ.

1. ಹೀಗೆ ಯೋಚಿಸಿರುವ ಸಂಶೋಧನೆಗೆ ಒಂದು ಕಾಲ್ಪನಿಕ ಚೌಕಟ್ಟು ದೊರೆಯುತ್ತದೆ.
2. ಸಂಶೋಧನಾ ಅಧ್ಯಯನದ ನಮೂನೆ ಸಾಧನೋಪಕರಣಗಳು ಮಾಹಿತಿ ಸಂಗ್ರಹಿಸಲು ಹಾಗೂ ವಿಶ್ಲೇಷಿಸಲು ಸಹಕಾರಿಯಾಗುತ್ತದೆ.
3. ಸಂಶೋಧನಾವಲೋಕನಗಳು ಆಯಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ತಿಳುವಳಿಕೆಯನ್ನು ಮೂಡಿಸುತ್ತವೆ.
4. ಈ ಸಂಶೋಧನೆಗಳು ನಾವು ಮಾಡುವ ಅಧ್ಯಯನದ ಕಾರ್ಯವ್ಯಾಪ್ತಿ ಮತ್ತು ಅಂತಿಮ ತೀರ್ಮಾನಗಳ ಬಗ್ಗೆ ಸಹಾಯ ಮಾಡುತ್ತವೆ.
5. ಈ ಸಂಶೋಧನೆಗಳು ನಿರ್ದಿಷ್ಟವಾದ ಮಾಹಿತಿಗಳು ವ್ಯಾಖ್ಯಾನಗಳ ಊಹೆಗಳು ಮಿತಿಗಳು ಮತ್ತು ಕಲ್ಪನೆಗಳನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತವೆ.

2.2 ಪ್ರಸ್ತುತ ಅಧ್ಯಯನಕ್ಕೆ ಸಂಬಂಧಪಟ್ಟ ಕೆಲವು ಕೃತಿಗಳ ಅವಲೋಕನಗಳು

ಎ] ಗುಪ್ತಾ, ಬಿ.ಪಿ. (1938):

"ಹಿಮಾಚಲ ಪ್ರದೇಶದ ಮಾಧ್ಯಮಿಕ ಶಾಲಾ ಹಂತದ ಸಮಾಜ ವಿಜ್ಞಾನ ಅಧ್ಯಯನ ಪಠ್ಯವಸ್ತುವಿನ ಒಂದು ವಿಮರ್ಶಾತ್ಮಕ ಅಧ್ಯಯನ".

ಉದ್ದೇಶಗಳು

1. ಈ ಅಧ್ಯಯನವು ಪಠ್ಯವಸ್ತುವಿನ ಅವಶ್ಯಕತೆ, ಉದ್ದೇಶ, ಗುರಿಗಳು ಮತ್ತು ವಿಷಯ ವಸ್ತುವಿನ ಬಗ್ಗೆ ತಿಳಿಸುವುದು.
2. ಬೋಧನಾ ವಿಧಾನಗಳು, ತಂತ್ರಗಳು, ಬೋಧನಾ ಪ್ರಕ್ರಿಯೆಯ ಸಹಾಯಕ ಅಂಶಗಳು ಅಳವಡಿಸಬೇಕಾದ ಮೌಲ್ಯಮಾಪನ ಮುಂತಾದ ವಿಚಾರಗಳು ಸಮಾಜ ವಿಜ್ಞಾನ ಪಠ್ಯವಸ್ತುವಿಗೆ ಸರಿ ಹೊಂದುವಂತೆ ರೂಪಿಸುವುದು.

ಪರಿಣಾಮಗಳು

1. ಪಠ್ಯವಸ್ತುವಿನಲ್ಲಿ ಇರುವಂತಹ ವಿಷಯ ವಸ್ತುವು ಮಾನವನ ವರ್ತನೆಯಲ್ಲಿರುವಂತಹ ಗುಂಪು ಅಂತಕ್ರಿಯೆ ಮತ್ತು ಬೌದ್ಧಿಕ ವಾತಾವರಣ ಮತ್ತು ಸಾಮಾಜಿಕ ವಾತಾವರಣಗಳ ಬೆಳವಣಿಗೆಗೆ ಬೇಕಾದಂತಹ ವಿವಿಧ ಅಂಶಗಳಿಗೆ ಸೂಕ್ತವಾಗಿಲ್ಲ.

2. ಉಪನ್ಯಾಸ ಪದ್ಧತಿ ಅಥವಾ ಸಂಪ್ರದಾಯ ಪದ್ಧತಿ ಅಥವಾ ಪ್ರಶ್ನೋತ್ತರ ಪದ್ಧತಿಗಳನ್ನು ಹೆಚ್ಚಾಗಿ ಪದೇ ಪದೇ ಬಳಸಲಾಗಿದೆ.

3. ಮೌಲ್ಯಮಾಪನದ ಸಾಂಪ್ರದಾಯಿಕ ಪದ್ಧತಿಯು, ಬೋಧನೆಯ ವಿಧಾನಗಳನ್ನು ಔನ್ನತೀಕರಿಸಿದ ಮತ್ತು ಒಟ್ಟಾರೆ ಸಮಾಜ ವಿಜ್ಞಾನ ವಿಷಯದ ಬೋಧನೆ ಕಲಿಕೆಯ ಮೇಲೆ ಕೇಂದ್ರೀಕರಣಗೊಂಡಿದೆ.

ಬಿ] ಜೋಷಿ ಎಂ.ಜಿ. (1970)

"ಶಾಲಾ ವಿಜ್ಞಾನ ಪಠ್ಯಪುಸ್ತಕದ ಮೌಲ್ಯಮಾಪನಕ್ಕಾಗಿ ಒಂದು ಮಾದರಿಯ ಅಭಿವೃದ್ಧಿ" – ಪಿಎಚ್.ಡಿ. ಶಿಕ್ಷಣ, ಪೂನಾ ವಿಶ್ವವಿದ್ಯಾಲಯ.

ಉದ್ದೇಶಗಳು

1. ವಿಷಯ ವಿಶ್ಲೇಷಣೆಯ ಎರಡು ಹಂತಗಳಾದಂತಹ ಸ್ಥಿತಿ ವಿಶ್ಲೇಷಣೆ ಮತ್ತು ದೋಷ ವಿಶ್ಲೇಷಣೆ ಎರಡಕ್ಕೂ ಸರಿ ಹೊಂದುವಂತಹ ಮೌಲ್ಯಮಾಪನ ಪದ್ಧತಿಯನ್ನು ಅಭಿವೃದ್ಧಿಪಡಿಸುವುದು.

2. ಅಭಿವೃದ್ಧಿಪಡಿಸಿದ ಮೌಲ್ಯಮಾಪನ ಮಾದರಿಯ ಅನ್ವಯಿಕ ಉದ್ದೇಶಗಳನ್ನು ತಿಳಿಯಲು ಆ ಪರಿಕಲ್ಪನೆ ಮತ್ತು ಸಾಧನೆಗಳ ಮೌಲ್ಯಮಾಪನ ಮಾಡುವುದು.

ಪರಿಣಾಮಗಳು

1. ವಿಷಯ ವಿಶ್ಲೇಷಣೆಗೆ ಪದ್ಧತಿಯನ್ನು ಯಾವಾಗ ಪಠ್ಯಪುಸ್ತಕದ ಕಲಿಕಾ ಘಟಕಗಳ ಸುಧಾರಣೆಗಾಗಿ ಬಳಸಲ್ಪಟ್ಟಿತೋ ಆಗ ಅದು ನಿರ್ದಿಷ್ಟಪಡಿಸಿದ ಉದ್ದೇಶಗಳನ್ನು ಸಾಧಿಸಲು ಸೂಕ್ತವಾಗಿದೆ ಎಂದು ಪ್ರಾಯೋಗಿಕವಾಗಿ ತಿಳಿದು ಬಂದಿದೆ.

2. ಬೇರೆ – ಬೇರೆ ಪಠ್ಯಪುಸ್ತಕಗಳು ಬೇರೆ ಬೇರೆ ಕಲಿಕಾ ಉದ್ದೇಶಗಳನ್ನು ಹೊಂದಿದ್ದರೂ ಪಠ್ಯಪುಸ್ತಕದ ಅಂತಿಮ ಉದ್ದೇಶವಾದಂತಹ ತರಗತಿಯಲ್ಲಿನ ಕಲಿಕಾ ಅನುಭವಗಳನ್ನು ನಿರ್ಧರಿಸುವುದು ಪಠ್ಯಪುಸ್ತಕದ ಹೊಣೆಯಾಗಿರುತ್ತದೆ.

ಸಿ] ಜೋಷಿ ಎಂ. ಎಸ್. (1972)

"4ನೇ ತರಗತಿಯ ಸಾಮಾನ್ಯ ಜ್ಞಾನ ಪಠ್ಯಪುಸ್ತಕದ ವಿಷಯ ವಸ್ತುವಿನ ವಿಶ್ಲೇಷಣೆ" – ಜಲಗಾನ್ ಶಿಕ್ಷಣ ಮಹಾವಿದ್ಯಾಲಯ.

ಉದ್ದೇಶಗಳು

1. ಪಠ್ಯವಸ್ತುವು ವಿದ್ಯಾರ್ಥಿಗಳ ವಯೋಮಾನಕ್ಕೆ ಮತ್ತು ಅವರ ಗ್ರಹಿಕೆಗೆ ಸೂಕ್ತವಾಗಿದೆಯೇ ಎಂಬುದನ್ನು ಪರೀಕ್ಷಿಸುವುದು.
2. ಪಠ್ಯವಸ್ತುವಿನಲ್ಲಿ ನೀಡಿರುವಂತಹ ವಿವರಣೆಗಳು ಮತ್ತು ದೃಷ್ಟಾಂತಗಳು ಸೂಕ್ತವಾಗಿದೆಯೇ ಎಂಬುದನ್ನು ಪರೀಕ್ಷಿಸುವುದು.
3. ಪಠ್ಯವಸ್ತುವಿನಲ್ಲಿ ಉಪಯೋಗಿಸಿದಂತಹ ಭಾಷೆ ಮತ್ತು ಶಬ್ದಗಳು ಸಮಂಜಸವಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

ಪರಿಣಾಮಗಳು

1. ಒಂದು ಪಾಠವನ್ನು ಹೊರತುಪಡಿಸಿದಂತೆ ಪಠ್ಯವಸ್ತುವಿನಲ್ಲಿರುವಂತಹ ವಿಷಯವಸ್ತುವು ವಿದ್ಯಾರ್ಥಿಗಳಿಗೆ ಸೂಕ್ತವಾಗಿದೆ.
2. ಮಾಹಿತಿ ಪ್ರಸ್ತುತೀಕರಣದ ಕ್ರಮಬದ್ಧತೆಯು ಸೂಕ್ತವಾಗಿದೆ.
3. ಕೆಲವು ವ್ಯಾಕರಣ ದೋಷಗಳನ್ನು ಹೊರತುಪಡಿಸಿದಂತೆ ಪಠ್ಯಪುಸ್ತಕವು ಅಂಶಿಕದೋಷಗಳಿಂದ ಮುಕ್ತವಾಗಿದೆ.

ಡಿ] ಧರ್ಮಾಧಿಕಾರಿ, ವಿ.ವಿ. (1973)

"ಶಿಕ್ಷಕರ ಕಾರ್ಯಾನುಭವದ ಕೈಪಿಡಿಗಳ ಒಂದು ವಿಮರ್ಶಾತ್ಮಕ ಮೌಲ್ಯಮಾಪನ" – ಸರ್ಕಾರಿ ತಾಂತ್ರಿಕ ಪ್ರೌಢಶಾಲೆ ವೆಲ್ಲಾಗನ್ ಪಿಎಚ್.ಡಿ. ಶಿಕ್ಷಣ.

ಉದ್ದೇಶಗಳು

1. ಶಿಕ್ಷಕರಿಗೆ ಪಠ್ಯಸೂಚಿಗಳಲ್ಲಿ ನಿರ್ಧರಿಸಿರುವಂತಹ ಕೈಪಿಡಿಗಳು ಕಾರ್ಯಾನುಭವದ ಗುರಿಗಳನ್ನು ಈಡೇರಿಸುವಲ್ಲಿ ಸಹಾಯಕವಾಗಿದೆಯೇ ಎಂಬುದನ್ನು ವಿಶ್ಲೇಷಿಸುವುದು.
2. ದೃಷ್ಟಾಂತಗಳು, ಚಿತ್ರಗಳು ಮತ್ತು ವಿವರಣೆಗೆ ಸಂಬಂಧಿಸಿದಂತೆ ಕೈಪಿಡಿಯು ದೋಷಗಳನ್ನು ಹೊಂದಿದೆಯೇ ಎಂಬುದನ್ನು ಪರೀಕ್ಷಿಸುವುದು.

ಫಲಿತಾಂಶಗಳು

1. ಸಾಮಾನ್ಯವಾಗಿ ಕೈಪಿಡಿಗಳು ಸೂಕ್ತ ಶೈಕ್ಷಣಿಕ ಗುರಿಗಳನ್ನು ಈಡೇರಿಸಲು ಅವಶ್ಯವಿರುವಂತಹ ಸಾಕಷ್ಟು ಮಾಹಿತಿಯನ್ನು ಮತ್ತು ಸೂಕ್ತ ಕಾರ್ಯಸೂಚಿಗಳನ್ನು ಒಳಗೊಂಡಿದೆ.
2. ಕೈಪಿಡಿಯಲ್ಲಿ ಕೊಟ್ಟಿರುವ ಕೆಲವು ಚಿತ್ರಗಳು ದೋಷಪೂರ್ಣವಾಗಿ ಇರುವುದರಿಂದಲೂ ಮತ್ತು ಅನಾವಶ್ಯಕವಾಗಿರುವುದರಿಂದಲೂ ಚಿತ್ರಗಳ ಪುನರ್ ರೂಪಿಸುವಿಕೆಯ ಅವಶ್ಯಕತೆಯಿದೆ.
3. ಕೈಪಿಡಿಯಲ್ಲಿ ಮೂಲ ಇಂಗ್ಲೀಷ್ ಪಾರಿಭಾಷಿಕ ಶಬ್ದಗಳನ್ನು ಸೇರಿಸಲಾಗಿದೆ.

ಇ] ಶುಕ್ಲಾ ಜಿ.ಬಿ. (1975)

"ಗುಜರಾತ್‌ದಲ್ಲಿನ ಪ್ರಾಥಮಿಕ ಶಾಲಾ ಶಿಕ್ಷಣ ಹಂತದ ಪಠ್ಯವಸ್ತುವಿನ ಅಭಿವೃದ್ಧಿಯ ಒಂದು ವಿಮರ್ಶಾತ್ಮಕ ಅಧ್ಯಯನ" – ಪಿಎಚ್.ಡಿ. ಶಿಕ್ಷಣ ಗುಜರಾತ್ ವಿದ್ಯಾಪೀಠ.

ಉದ್ದೇಶಗಳು:

1. 1940 ರಿಂದ 1970 ರವರೆಗೆ ಪ್ರಾಥಮಿಕ ಶಿಕ್ಷಣದ ಪಠ್ಯವಸ್ತುವಿನಲ್ಲಿ ಮಾಡಿದಂತಹ ಬದಲಾವಣೆಯನ್ನು ಪುನರಾವಲೋಕಿಸುವುದು.
2. ಪಠ್ಯವಸ್ತುವಿನಲ್ಲಿ ಆದಂತಹ ಸುಧಾರಣೆಗಳನ್ನು ಪುನರಾವಲೋಕಿಸುವುದು.
3. ಗುಜರಾತದಲ್ಲಿ 1997 ರಲ್ಲಿ ಜಾರಿಗೆ ಬಂದಂತಹ ಪ್ರಾಥಮಿಕ ಶಾಲಾ ಪಠ್ಯವಸ್ತುವಿನ ವಿಮರ್ಶಾತ್ಮಕ ಅಧ್ಯಯನ ಮಾಡುವುದು.
4. ಪಠ್ಯವಸ್ತುವಿನ ಬದಲಾವಣೆಗೆ ಕಾರಣವಾದ ಅಂಶಗಳನ್ನು ವಿಶದಪಡಿಸುವುದು.

ಪರಿಣಾಮಗಳು

1. ಪ್ರಾಥಮಿಕ ಶಾಲಾ ಶಿಕ್ಷಣದ ಪಠ್ಯವಸ್ತುವು 2 ಹಂತಗಳಲ್ಲಿ ವಿಭಾಗಿಸಲ್ಪಟ್ಟಿದೆ. 1 ರಿಂದ 4 ರವರೆಗೆ, 5 ರಿಂದ 8 ರವರೆಗೆ.
2. ಶಿಕ್ಷಕರು ಮತ್ತು ಶಿಕ್ಷಕ ತರಬೇತಿದಾರರಲ್ಲಿ ಪಠ್ಯವಸ್ತುವಿನ ರಚನೆಯಲ್ಲಿ ಸಹಭಾಗಿತ್ವದ ಕೊರತೆಯಿದೆ.
3. ಪ್ರಾಥಮಿಕ ಶಾಲಾ ಶಿಕ್ಷಣದ ಪಠ್ಯವಸ್ತುವಿನ ಮುಖ್ಯ ದೋಷವೆಂದರೆ ಪ್ರಾಯೋಗಿಕ ಜ್ಞಾನದ ಕೊರತೆ ಮತ್ತು ಕೆಳವರ್ಗದಲ್ಲಿರುವಂತಹ ಅಸಮಂಜಸ ಅಂಕಗಣಿತ ಪಠ್ಯವಸ್ತು ವಿಷಯ.

ಎಫ್] ಮುಥಕಿ ಐ. ವಿ (1981):

"ಬಾಂಗ್ಲಾದೇಶದ ಮಾಧ್ಯಮಿಕ ಶಾಲೆಯ ಜೀವಶಾಸ್ತ್ರದ ವಿಷಯವು ಪಠ್ಯವಸ್ತುವಿನ ಅಭಿವೃದ್ಧಿ" – ಎಂ.ಎಸ್. ವಿಶ್ವವಿದ್ಯಾಲಯ, ಬರೋಡ ಪಿಎಚ್.ಡಿ. ಶಿಕ್ಷಣ.

ಉದ್ದೇಶಗಳು

ಕೆಲವು ಆಯ್ದ ಶಾಲೆಗಳಲ್ಲಿನ ಬಾಂಗ್ಲಾದೇಶದಲ್ಲಿನ 6, 7 ಮತ್ತು 8ನೆಯ ತರಗತಿಯ ಮಕ್ಕಳಲ್ಲಿ ಜಾಗೃತಿಯನ್ನು ಬೆಳೆಸಲು ಪರಿಣಾಮಕಾರಿಯಾದಂತಹ ಮತ್ತು ಸೂಕ್ತವಾದಂತಹ ಪರಿಸರ ಸಮತೋಲನದ ಪಠ್ಯವಸ್ತುವನ್ನು ಅಭಿವೃದ್ಧಿಪಡಿಸುವುದು.

ಪರಿಣಾಮಗಳು

1. ಸಾಂಪ್ರದಾಯಿಕ ಮೌಲ್ಯಮಾಪನದಲ್ಲಿ ಪಠ್ಯವಸ್ತು ಮತ್ತು ಅದರಲ್ಲಿನ ವಿಷಯಗಳು ಅಧ್ಯಯನದ ಉದ್ದೇಶಗಳನ್ನು ಈಡೇರಿಸುವಲ್ಲಿ ಸೂಕ್ತ ಸಮಂಜಸವಾಗಿರುವುದು ಕಂಡುಬಂದಿದೆ.
2. ನಗರ ಪ್ರದೇಶದ ಮತ್ತು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಲ್ಲಿ ಪರಿಸರಕ್ಕೆ ಸಂಬಂಧಿಸಿದಂತೆ ಅವರ ಮನೋವೃತ್ತಿಯಲ್ಲಿ ಹೆಚ್ಚಿನ ವ್ಯತ್ಯಾಸ ಕಂಡುಬಂದಿಲ್ಲ.

ಜಿ] ಮೋದಿ ಬಾಕ್ವೆರ್ (1988):

"ಮಾಧ್ಯಮಿಕ ಹಂತದ ಶಿಕ್ಷಣದ ಸಾಮಾಜಿಕ ಗುರಿಗಳ ಮತ್ತು ಬೋಧನೆಯ ಅಭಿವೃದ್ಧಿ ವೈಯಕ್ತಿಕ ಅಧ್ಯಯನ" (ಎನ್.ಸಿ.ಆರ್.ಟಿ).

ಉದ್ದೇಶಗಳು

ಈ ಅಧ್ಯಯನದ ಮುಖ್ಯ ಉದ್ದೇಶವೆಂದರೆ – ಶಿಕ್ಷಣದ ಸಾಮಾಜಿಕ ಗುರಿಗಳ ಮತ್ತು ಬೋಧನಾವೃದ್ಧಿಗೆ ಸಂಬಂಧಿಸಿದಂತೆ ಮಾಧ್ಯಮಿಕ ಶಾಲೆಯ ಪಠ್ಯಪುಸ್ತಕವನ್ನು ಮೌಲ್ಯಮಾಪನ ಮಾಡುವುದು.

ಅಧ್ಯಯನದ ವಿಧಾನ

ಮಾಧ್ಯಮಿಕ ಶಿಕ್ಷಣ ಹಂತದ ಸಾಮಾಜಿಕ ಉದ್ದೇಶಗಳು ಮತ್ತು ಬೋಧನಾಭಿವೃದ್ಧಿ ವಿಷಯದ ಶಿಕ್ಷಕರ ಪ್ರಶ್ನಾವಳಿಯ ಮೂಲಕ ಅಧ್ಯಯನಕ್ಕೆ ಬೇಕಾಗುವಂತಹ ದತ್ತಾಂಶಗಳನ್ನು ಸಂಗ್ರಹಿಸಲಾಗಿದೆ.

ಫಲಿತಾಂಶಗಳು:

1. ವಿವಿಧ ವಿಷಯಗಳ ಪಠ್ಯವಸ್ತುವು ಸೂಕ್ತ ಸಮತೋಲವನ್ನು ಕಾಯ್ದುಕೊಂಡಿಲ್ಲ ಮತ್ತು ಒಂದು ಉತ್ತಮ ವಿಧಾನದಲ್ಲಿ ವಿವಿಧ ರೀತಿಯ ಉದ್ದೇಶಗಳನ್ನು ಈಡೇರಿಸುವಲ್ಲಿ ಸಹಾಯಕವಾಗಿಲ್ಲ.

2. ಪಠ್ಯವಸ್ತುವಿನಲ್ಲಿ ಮೌಲ್ಯಗಳು ಮನೋಭಾವನೆಗಳು ಮತ್ತು ಅನ್ವಯಿಕ ಅಂಶಗಳಿಗೆ ಒತ್ತು ನೀಡಲ್ಪಡಬೇಕು.

3. ಕೌಶಲ್ಯಾಧಾರಿತ ಬೋಧನಾ ವಿಧಾನಗಳನ್ನು, ಸಾಮಾಜಿಕ ಗುರಿಗಳನ್ನು ಈಡೇರಿಸಲು ಮತ್ತು ಬೋಧನೆಗಳನ್ನು ಅಭಿವೃದ್ಧಿಪಡಿಸಲು ಉಪಯೋಗಿಸಲ್ಪಡುವುದು.

4. ಪ್ರಸ್ತುತದಲ್ಲಿರುವ ಮೌಲ್ಯಮಾಪನ ತಂತ್ರಗಳು ವಿವಿಧ ರೀತಿಯ ಪಠ್ಯವಸ್ತುವಿನ ಗುರಿಗಳನ್ನು ಈಡೇರಿಸುವಲ್ಲಿ ಸಹಕಾರಿಯಾಗಿವೆ.

5. ಪಠ್ಯವಸ್ತುವಿನಲ್ಲಿ ಜ್ಞಾನಾತ್ಮಕ ವಲಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಒತ್ತನ್ನು ನೀಡಲಾಗಿದೆ. ಉಳಿದ ಅಂಶಗಳಿಗೆ ಸೂಕ್ತ ಪ್ರಾಧಾನ್ಯತೆ ನೀಡಿಲ್ಲ.

ಎಚ್] ಸೇನಾಪತಿ, ಟಿ. (1989)

'ಪುರಿ ಜಿಲ್ಲೆಯಲ್ಲಿನ ಪ್ರಾಥಮಿಕ ಶಿಕ್ಷಣದ ಜನಸಂಖ್ಯಾ ಶಿಕ್ಷಣ ವಿಷಯದ ಪಠ್ಯವಸ್ತುವಿನ ಅಭಿವೃದ್ಧಿ ತಂತ್ರಗಳು' – ಎಂ.ಫಿಲ್. ಶಿಕ್ಷಣ ರೇವನ್ ಷಾ ಕಾಲೇಜ್ ಕಟಕ.

ಉದ್ದೇಶಗಳು

1. ಪಠ್ಯವಸ್ತುವಿನ ಗುರಿಗಳು ಪಠ್ಯವಸ್ತುವಿನ ಅಭಿವೃದ್ಧಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರೀಕ್ಷಿಸುವುದು.

2. ಪಠ್ಯವಸ್ತು ಅಳವಡಿಕೆಯಲ್ಲಿಯ ತೊಂದರೆಗಳನ್ನು ಅಭ್ಯಸಿಸುವುದು.

3. ಪ್ರಾಥಮಿಕ ಶಾಲೆಗಳ ಶಿಕ್ಷಣ ವಿಷಯದ ಪಠ್ಯವಸ್ತುವನ್ನು ಉದ್ದಿಷ್ಟ ಮಾದರಿಯಲ್ಲಿ ಅಭಿವೃದ್ಧಿಪಡಿಸುವುದು.

ಅಧ್ಯಯನದ ವಿಧಾನಗಳು

ಪುರಿ ಜಿಲ್ಲೆಯಲ್ಲಿನ 761 ಶಾಲೆಗಳ ಪೈಕಿ 125 ವ್ಯಕ್ತಿಗಳನ್ನು ಅನದೃಚ್ಛಿಕ ಮಾದರಿ ಪದ್ಧತಿಯನ್ನು ಆಯ್ಕೆ ಮಾಡಿಕೊಂಡು ಅವಶ್ಯ ದತ್ತಾಂಶಗಳನ್ನು ಪ್ರಶ್ನಾವಳಿ ಮತ್ತು ಸಂದರ್ಶನದ ಮುಖಾಂತರ ಪಡೆಯಲಾಯಿತು.

ಪರಿಣಾಮಗಳು

1. ಪುರಿ ಜಿಲ್ಲೆಯಲ್ಲಿನ ವಿವಿಧ ಸ್ಥಳಗಳಲ್ಲಿನ ಪ್ರತಿಶತ 74% ರಷ್ಟು ಜನಸಂಖ್ಯಾ ಶಿಕ್ಷಣವನ್ನು ಪರಿಚಯಿಸಲಾಗಿದೆ.

2. ಜನಸಂಖ್ಯಾ ಶಿಕ್ಷಣದ ಬೋಧನಾ ವಿಷಯಗಳು ಸೂಕ್ತವಾದ ರೀತಿಯಲ್ಲಿ ಲಭಿಸಿಲ್ಲ.

3. ಪ್ರತಿಶತ 50% ರಷ್ಟು ಶಿಕ್ಷಕರು ಜನಸಂಖ್ಯಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪರಿಚಯ ಕಾರ್ಯಕ್ರಮಗಳನ್ನು ನೀಡುವುದರಲ್ಲಿ ಆಸಕ್ತರಾಗಿಲ್ಲ ಕೆಲವೇ ಶಿಕ್ಷಕರು ಮಾತ್ರ ಜನಸಂಖ್ಯಾ ಶಿಕ್ಷಣ ಬೋಧನಾ ತಂತ್ರಗಳನ್ನು ಅಳವಡಿಸಿಕೊಂಡಿದ್ದಾರೆ.

4. ಬಹುತೇಕ ಶಿಕ್ಷಕರು (86.75%) ಪ್ರಾಥಮಿಕ ಶಾಲೆಗಳಲ್ಲಿ ವಿಶೇಷವಾಗಿ ಜನಸಂಖ್ಯೆ ಶಿಕ್ಷಣವನ್ನು ಅಳವಡಿಸುವುದಕ್ಕೆ ಒಪ್ಪುವುದಿಲ್ಲ.

5. ಜನಸಂಖ್ಯಾ ಶಿಕ್ಷಣದ ವಿಷಯಗಳನ್ನು ಯಾವುದೇ ರೀತಿಯ ಪಠ್ಯಪೂರಕ ಚಟುವಟಿಕೆಗಳ ಮುಖಾಂತರ ಸಂಘಟಿಸಬಹುದು.

ಐ] **ಥಾಂದ, ಹ್ಯಾರಿ ಮತ್ತು ಲೋನ್ಸ್, ಜಾನ್ (1991)**

ಕೆನಡಾದಲ್ಲಿನ ಸಂಶೋಧನಾತ್ಮಕ ಸಮಾಜ ವಿಜ್ಞಾನ ಪಠ್ಯವಸ್ತುವಿನ ಒಂದು ಪ್ರಾಯೋಗಿಕ ಅಧ್ಯಯನ

ಉದ್ದೇಶಗಳು:

ಈ ಅಧ್ಯಯನದ ಪ್ರಮುಖ ಉದ್ದೇಶವೆನೆಂದರೆ, ಮಾಧ್ಯಮಿಕ ಶಾಲೆಗಳಿಗೆ ಒಂದು ಸಂಶೋಧನಾತ್ಮಕ ಸಮಾಜ ವಿಜ್ಞಾನ ಪಠ್ಯವಸ್ತುವನ್ನು ಅಭಿವೃದ್ಧಿಪಡಿಸುವುದಾಗಿದೆ.

ಅಧ್ಯಯನದ ವಿಧಾನ:

ಸಂಶೋಧನಾತ್ಮಕ ಪಠ್ಯವಸ್ತು ರಚಿಸಲು ಸಮಾಜ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಯು.ಎಸ್.ಎ. ಮತ್ತು ಕೆನಡಾಗಳಲ್ಲಿ ಸಮೀಕ್ಷೆಗಳನ್ನು ಕೈಗೊಂಡು ಪ್ರಸ್ತುತ ಅಧ್ಯಯನವನ್ನು ಕೈಕೊಳ್ಳಲಾಗಿದೆ.

ಫಲಿತಾಂಶಗಳು

1. ಸಮಾಜ ವಿಜ್ಞಾನ ಶಿಕ್ಷಣ ಹೆಚ್ಚಿನದಾಗಿ ನಾಗರಿಕ ಶಿಕ್ಷಣ ಸಾಂಸ್ಕೃತಿಕ ಸಾಕ್ಷರತೆ ಇವುಗಳ ಮೇಲೆ ಹೆಚ್ಚಿನ ಒತ್ತನ್ನು ನೀಡಿದೆ.

2. ಮಾನವೀಯ ವಿಧಾನಗಳ ಮುಖಾಂತರ ಬೋಧಿಸಲ್ಪಟ್ಟ ಸಮಾಜ ವಿಜ್ಞಾನ ವಿಷಯವು ಒಂದು ಹೆಚ್ಚಿನ ಸಾರ್ವತ್ರಿಕ ದೃಷ್ಟಿಕೋನ ಪಡೆಯಿತು ಮತ್ತು ಸಮಾಜ ವಿಜ್ಞಾನ ಶಿಕ್ಷಕರಿಗೆ ಜನಪ್ರಿಯ ಗುರಿಯಾಯಿತು.

3. ಸಂಶೋಧನಾತ್ಮಕ ಪಠ್ಯವಸ್ತುವಿನ ಬೆಳವಣಿಗೆಗೆ ಅಧ್ಯಯನಕಾರರು ನವಸಮಾಜ ವಿಜ್ಞಾನ ಪಠ್ಯವಸ್ತುವನ್ನು ನಿರೂಪಿಸಲು ಹೊಸ ಮಾರ್ಗ ಸೂಚಿಗಳನ್ನು ಸೂಚಿಸಿರುವರು.

4. ಮುಕ್ತ ಮಾದರಿಯ ಪ್ರಶ್ನೆಗಳಿಗೆ ಹೆಚ್ಚಿನ ಒತ್ತು.

5. ಮೌಲ್ಯ ವಿಶ್ಲೇಷಣೆಗೆ ಒತ್ತು ನೀಡುವುದರ ಮೂಲಕ ಮೌಲ್ಯ ವರ್ಗೀಕರಣ ಸಾಗಿರುವುದು.

6. ನೈಜ ಜೀವನ ಸಮಾಜ ವಿಜ್ಞಾನ ವಿಷಯ ವಸ್ತುವಿನ ನಡುವೆ ಸಂಪರ್ಕ.

7. ಬಹುಮುಖ ಅಸಂಪ್ರದಾಯಿಕ ಆಕರಗಳನ್ನು ಉಪಯೋಗಿಸಿಕೊಂಡು ಪರಿಕಲ್ಪನಾ ಅಭಿವೃದ್ಧಿಗಳನ್ನು ಸಾಧಿಸಲು ಹೆಚ್ಚಿನ ಒತ್ತು.

ಜೆ] ಜಾನ್ ಓ.ಟಿ. (1991)

"ತಮಿಳುನಾಡು ರಾಜ್ಯದಲ್ಲಿನ ತಾಂತ್ರಿಕ ಕೋರ್ಸಿನ ಪ್ರಸ್ತುತ ಇಂಗ್ಲೀಷ್ ಪಠ್ಯವಸ್ತುವಿನ ಒಂದು ಸಂಶೋಧನಾತ್ಮಕ ಅಧ್ಯಯನ" – ಎಂ.ಫಿಲ್ ಶಿಕ್ಷಣ ಅಳಗಪ್ಪ ವಿಶ್ವವಿದ್ಯಾಲಯ.

ಉದ್ದೇಶಗಳು

1. ಭಾಷೆಯ ನಾಲ್ಕು ಕೌಶಲ್ಯಗಳನ್ನು ಕಲಿಯುವಲ್ಲಿ ತಾಂತ್ರಿಕ ವಿದ್ಯಾರ್ಥಿಗಳಿಗೆ ಪ್ರಸ್ತುತ ಪಠ್ಯವಸ್ತು ಎಷ್ಟು ಸಮಂಜಸವಾಗಿದೆ ಎಂಬುದನ್ನು ಗುರುತಿಸುವುದು.

2. ಹೊಸ ಪಠ್ಯ ವಸ್ತುವಿನ ವಿನ್ಯಾಸ ರೂಪಿಸುವುದು.

3. ಪ್ರಾಯೋಗಿಕ ಅನ್ವೇಷಣೆ ಮುಖಾಂತರ ನವ ಪಠ್ಯವಸ್ತುವಿನ ಪರಿಣಾಮಕಾರಿತ್ವವನ್ನು ತಿಳಿಯುವುದು.

ಅಧ್ಯಯನ ವಿಧಾನ

ಪ್ರಸ್ತುತ ಅಧ್ಯಯನಕ್ಕೆ ಮಾದರಿಯಾಗಿ ಅಣ್ಣಾಮಲೈ ತಾಂತ್ರಿಕ ಶಿಕ್ಷಣ ವಿದ್ಯಾಲಯ ಚಟ್ಟಿರಾಡ್ ಸಂಸ್ಥೆಯ ಪ್ರಥಮ ವರ್ಷದ 280 ಪುರುಷ ಅಭಿಯಂತರ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಲಾಗಿದೆ. ಇಂಗ್ಲೀಷಿನ ಹೊಸ ಪಠ್ಯವಸ್ತುವನ್ನು ರೂಪಿಸುವ ಭಾಷಾ ತಜ್ಞರನ್ನು ಮತ್ತು ವಿದ್ಯಾರ್ಥಿಗಳ ಭಾಷಾ ಕೌಶಲ್ಯ ಕಲಿಕೆಯ ಮಟ್ಟವನ್ನು ಪರೀಕ್ಷಿಸಿ ಕಂಡುಕೊಳ್ಳುವುದಾಗಿದೆ.

ಫಲಿತಾಂಶಗಳು

1. ಪ್ರಸ್ತುತ ಅಧ್ಯಯನವು ನವ ಪಠ್ಯವಸ್ತುವಿನ ಹೆಚ್ಚಿನ ಪರಿಣಾಮಕತ್ವವನ್ನು ತೋರಿಸಿದೆ.

2. ನಿಯಂತ್ರಿತ ಗುಂಪಿಗಿಂತ ಪ್ರಾಯೋಗಿಕ ಗುಂಪು 4 ಭಾಷಾ ಕೌಶಲ್ಯಗಳಿಗೆ ಸಂಬಂಧಿಸಿದಂತೆ ಅಂತಿಮ ಪರೀಕ್ಷೆಯಲ್ಲಿ ಹೆಚ್ಚಿನ ಸಾಧನೆ ತೋರಿಸಿತು.

ಕೆ] ಶುಕ್ಲಾ ನಂದಿತಾ (1991)

"ಪಂಜಾಬದಲ್ಲಿಯ ಮಾಧ್ಯಮಿಕ ಶಾಲಾ ಶಿಕ್ಷಕರ ಶಿಕ್ಷಣದ ಮೌಲ್ಯಾಧಾರಿತ ಪಠ್ಯವಸ್ತುವಿನ ವಿನ್ಯಾಸ" ಪಿಎಚ್.ಡಿ. ಶಿಕ್ಷಣ ಪಂಜಾಬ ವಿಶ್ವವಿದ್ಯಾಲಯ.

ಉದ್ದೇಶಗಳು

1. ಪ್ರಸ್ತುತ ಬಿ. ಎಡ್. ಕೋರ್ಸ್‌ನ ವಿಷಯ ವಸ್ತುವನ್ನು ಗುರುತಿಸಿ ಆ ಮೂಲಕ ಸಮಗ್ರ ಮೌಲ್ಯ ಶಿಕ್ಷಣ ಪಠ್ಯವಸ್ತುವನ್ನು ಒದಗಿಸುವುದು.
2. ಬಿ.ಎಡ್. ಕಾರ್ಯಕ್ರಮದ ಮೌಲ್ಯಾಧಾರಿತ ಶಿಕ್ಷಣದ ಪಠ್ಯವಸ್ತುವನ್ನು ರೂಪಿಸುವುದು ಮತ್ತು ಅದರ ಪರಿಣಾಮತ್ವವನ್ನು ಮೌಲ್ಯಮಾಪನ ಮಾಡುವುದು.

ಅಧ್ಯಯನ ವಿಧಾನ

50 ಶಿಕ್ಷಕ ವಿದ್ಯಾರ್ಥಿಗಳನ್ನು ಅನದೃಚ್ಛಿಕವಾಗಿ ಆಯ್ಕೆಮಾಡಿಕೊಳ್ಳಲಾಯಿತು. ಪ್ರಸ್ತುತ ಬಿ.ಎಡ್. ಕೋರ್ಸನ್ನು ವಿಶ್ಲೇಷಿಸಲಾಯಿತು. ಸಂಶೋಧಕರು ಸ್ವಯಂ ತಯಾರಿಸಿದ ಬೋಧನಾ ಮಾದರಿಗಳನ್ನು ಉಪಯೋಗಿಸಲಾಯಿತು. ಮಧ್ಯಾಂಕ ಮತ್ತು ಟೈ ಸ್ಕೋಯರ್ ತಂತ್ರಗಳನ್ನು ಉಪಯೋಗಿಸಿ ದತ್ತಾಂಶಗಳನ್ನು ವಿಶ್ಲೇಷಿಸಲಾಯಿತು.

ಪರಿಣಾಮಗಳು

1. ಪ್ರಸ್ತುತ ಪಂಜಾಬಿನ ವಿವಿಧ ಜಿಲ್ಲೆಗಳಲ್ಲಿ ಇರುವಂತಹ ಬಿ.ಎಡ್. ಕಾರ್ಯಕ್ರಮದ ಪಠ್ಯವಸ್ತುವಿನಲ್ಲಿ ಮೌಲ್ಯಾಧಾರಿತ ಶಿಕ್ಷಣದ ಸಮಕ್ಷತೆಗೆ ಇದನ್ನು ಒಂದು ವಿಷಯವಾಗಿ ಸೇರಿಸಲು ಅದೇ ರೀತಿ ಒಂದು ಚಟುವಟಿಕೆಯಾಗಿ ಸೇರಿಸಲು ವಿಪುಲವಾದ ಅವಕಾಶವಿದೆ.
2. ಸಮಗ್ರ ಮೌಲ್ಯಾಧಾರಿತ ಶಿಕ್ಷಣವನ್ನು ಒದಗಿಸಲು ಹಲವಾರು ವಿಧಾನಗಳನ್ನು ಬಳಸಬಹುದಾಗಿದ್ದಿತು. ಮುಖ್ಯವಾಗಿ ನಿರ್ದಿಷ್ಟೀಕರಣ ವಿಧಾನ, ಅಪ್ರತ್ಯಕ್ಷ ವಿವರಣ ವಿಧಾನ, ಸಮನ್ವಯ ವಿಧಾನ.
3. ಸಮನ್ವಯ ಮೌಲ್ಯಾಧಾರಿತ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಒದಗಿಸಲು ಹಲವಾರು ರೀತಿಯ ಚಟುವಟಿಕೆಗಳನ್ನು ಕೈಗೊಳ್ಳಬಹುದಾಗಿದ್ದಿತು.
4. ಶಿಕ್ಷಕರ ಮೌಲ್ಯ ಪಠ್ಯ ಪ್ರಾಮುಖ್ಯತೆಯು ವಿದ್ಯಾರ್ಥಿಗಳ ಮೌಲ್ಯವರ್ಧನೆಗೆ ಅತ್ಯಂತ ಅವಶ್ಯಕವಾಗಿದ್ದಿತು.
5. ಶಿಕ್ಷಕ ವಿದ್ಯಾರ್ಥಿಗಳು ತಯಾರು ಮಾಡಿದಂತಹ ಮಾದರಿಗಳು ತುಂಬಾ ಪರಿಣಾಮಕಾರಿಯಾಗಿದ್ದವು.

ಎಲ್] ಎಮ್.ಎ.ಟಿ.ಒ. ಮೊಲೋ (1992):

ನೈರೋಬಿ (ಕೀನ್ಯಾ)ಯಲ್ಲಿನ ಮಾಧ್ಯಮಿಕ ಶಾಲೆಗಳ ಪಠ್ಯವಸ್ತುವಿನ ಅಭಿವೃದ್ಧಿ ಕಾರ್ಯಕ್ರಮದಲ್ಲಿನ ತತ್ವಗಳ, ಅಭ್ಯಾಸಗಳು ಮತ್ತು ವಿಧಾನಗಳ ಬಗೆಗೆ ಅಲ್ಲಿನ ಪ್ರೌಢಶಾಲಾ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಮತ್ತು ಶೈಕ್ಷಣಿಕ ಆಡಳಿತಗಾರರು ಹೊಂದಿರುವಂತಹ ಗ್ರಹಿಕೆಯ ಅಧ್ಯಯನ – ಪಿಎಚ್.ಡಿ ಶಿಕ್ಷಣ ಪಂಜಾಬ್ ವಿಶ್ವವಿದ್ಯಾಲಯ.

ಉದ್ದೇಶಗಳು:

1. ಕೀನ್ಯಾದಲ್ಲಿನ ಪ್ರೌಢಶಾಲೆಗಳ ಪಠ್ಯವಸ್ತುವಿನ ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆ ವಿದ್ಯಾರ್ಥಿಗಳ, ಶಿಕ್ಷಕರ, ಪಾಲಕರ ಶೈಕ್ಷಣಿಕ ಆಡಳಿತಗಾರರ ಗ್ರಹಿಕೆಯನ್ನು ನಿರ್ಧರಿಸುವುದು.
2. ಜವಾಬ್ದಾರಿಯುತ ಸ್ಥಾನ ಹೊಂದಿದ ಗುಂಪುಗಳು ಪಠ್ಯವಸ್ತು, ಅಭಿವೃದ್ಧಿ ಕಾರ್ಯಕ್ರಮದ ತತ್ವಗಳು, ಅಭ್ಯಾಸಗಳು ಮತ್ತು ವಿಧಾನಗಳನ್ನು ಹೇಗೆ ಗ್ರಹಿಸುತ್ತಾರೆ ಎಂಬುದನ್ನು ನಿರ್ಧರಿಸುವುದು.
3. ಪಠ್ಯವಸ್ತುವಿನ ಬೆಳವಣಿಗೆಯಲ್ಲಿ ನಾಯಕತ್ವದ ಪಾತ್ರ ವಹಿಸುವಂತಹ ಶೈಕ್ಷಣಿಕ ಅಧಿಕಾರಿಗಳು ವಿವಿಧ ರೀತಿಯ ಗ್ರಹಿಕೆಯನ್ನು ಹೊಂದಿರುತ್ತಾರೆಯೇ ಎಂಬುದನ್ನು ನಿರ್ಧರಿಸುವುದು.

ಅಧ್ಯಯನ ವಿಧಾನ

ಸಮೀಕ್ಷೆ ಆಧಾರಿತ ಅಧ್ಯಯನ ಆಗಿರುವ ಇದು 200 ಪ್ರೌಢಶಾಲಾ ಶಿಕ್ಷಕರನ್ನು, 153 ವಿದ್ಯಾರ್ಥಿಗಳನ್ನು, 200 ಪಾಲಕರನ್ನು 50 ಆಡಳಿತಾಧಿಕಾರಿಗಳನ್ನು ಅಧ್ಯಯನದಲ್ಲಿ ತೆಗೆದುಕೊಂಡಿದೆ.

ಪರಿಣಾಮಗಳು

1. ವಿವಿಧ ಗುಂಪುಗಳ ಅಭಿಪ್ರಾಯಗಳನ್ನು ಪರಿಗಣಿಸುವಾಗ ಶಾಲೆಯ ಒಳಗಿನ ಕಲಿಕಾ ಅನುಭವಗಳನ್ನು ಹಾಗೂ ಶಾಲೆಯ ಹೊರಗಿನ ಅನುಭವಗಳನ್ನು ಒಳಗೊಂಡಂತಹ ಪಠ್ಯವಸ್ತುವು ಸರಿಯಾದ ರೀತಿಯಲ್ಲಿ ಸಂಘಟಿಸಲ್ಪಟ್ಟಿರಬೇಕು ಎಂಬುದು ಕಂಡುಬಂದಿದೆ.
2. ಸಂಬಂಧಿಸಿದವರಲ್ಲಿ ಬಹುತೇಕ ಜನರು ಪಠ್ಯವಸ್ತುವಿನ ಅಭಿವೃದ್ಧಿಯಲ್ಲಿರುವಂತಹ ತತ್ವ ಮತ್ತು ಅಭ್ಯಾಸಗಳ ಅಳವಡಿಕೆಗೆ ಅನುಮತಿಸಿದರು ಅಥವಾ ಪ್ರೋತ್ಸಾಹಿಸಿದರು.
3. ಸಂಬಂಧಿಸಿದವರಲ್ಲಿ ಹಲವಾರು ಜನರು ಪಠ್ಯವಸ್ತುವಿನ ಬೆಳವಣಿಗೆಗೆ ರಾಷ್ಟ್ರೀಯ ಸಮಿತಿಯನ್ನು ರಚಿಸಬೇಕೆಂದು ಸಲಹೆ ಮಾಡಿದರು.

ಎಮ್] ರಾವ್ ಸುಧಾ ಕೆ. (1992)

"ಪಠ್ಯವಸ್ತುವಿನ ಪುನರ್ ಸಂಘಟನೆಯಲ್ಲಿ ರಚನಾತ್ಮಕ ಪ್ರಭಾವ ವೈಯಕ್ತಿಕ ಅಧ್ಯಯನ".

ಉದ್ದೇಶಗಳು

1. ಪಠ್ಯವಸ್ತುವಿನ ಪುನರ್ ಸಂಘಟನೆ ಪ್ರಕ್ರಿಯೆಯಲ್ಲಿ ಪ್ರಭಾವ ಬೀರುವ ರಚನಾತ್ಮಕ ಅಂಶಗಳನ್ನು ಗುರುತಿಸುವುದು.

2. ರಚನಾತ್ಮಕ ಅಂಶಗಳು ಮತ್ತು ಪಠ್ಯವಸ್ತುವಿನ ಬದಲಾವಣೆಗಳು ಇವೆರಡರ ನಡುವಿನ ವಿಶ್ಲೇಷಣೆ ಮಾಡುವುದು.

3. ಸ್ನಾತಕ ಪದವಿ ಕೆಳಹಂತದ ಪಠ್ಯವಸ್ತುವಿನ ಪುನರ್ ಸಂಘಟನೆಗೆ ಬೇಕಾದಂತಹ ಯೋಜನೆ ಮತ್ತು ನಿರ್ವಹಣಾ ಕೌಶಲ್ಯಗಳನ್ನು ಸೂಚಿಸುವುದು.

ಅಧ್ಯಯನದ ವಿಧಾನಗಳು

ಈ ಅಧ್ಯಯನಕ್ಕೆ 3 ಸಂಸ್ಥೆಗಳನ್ನು ತೆಗೆದುಕೊಳ್ಳಲಾಗಿದೆ. ದಾಖಲೆ ವಿಶ್ಲೇಷಣೆ ಜೊತೆಗೆ ವಿಶ್ವವಿದ್ಯಾಲಯ ಮತ್ತು ಸಂಸ್ಥೆಗಳ ಮುಖ್ಯಸ್ಥರೊಡನೆ, ಉಪಕುಲಪತಿಗಳೊಡನೆ ಮತ್ತು ವಿಷಯ ಪರಿಣಿತರೊಡನೆ ಸಂದರ್ಶನ ಮಾಡಲಾಗಿದೆ.

ಪರಿಣಾಮಗಳು

1. ಪಠ್ಯವಸ್ತುವಿನಲ್ಲಿ ಬದಲಾವಣೆ ತರಲು ಶಿಕ್ಷಣ ಸಂಸ್ಥೆಗಳಲ್ಲಿರುವಂತಹ ಶಿಸ್ತು, ಇವುಗಳ ಪ್ರಭಾವ ಹೆಚ್ಚಿಗಿರುತ್ತದೆ.

2. ಪಠ್ಯವಸ್ತುವಿನ ಬದಲಾವಣೆಗೆ ಸರಕಾರದ ಅಥವಾ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಸಂಸ್ಥೆಗಳಿಗಿಂತ ಖಾಸಗಿ ಸಂಸ್ಥೆಗಳು ಸುಲಭವಾಗಿರುತ್ತವೆ.

3. ಸಂಶೋಧನ ಅಂತಸ್ತಿನಲ್ಲಿರುವಂತಹ ಸಂಸ್ಥೆಗಳಿಗೆ ಪಠ್ಯವಸ್ತುವನ್ನು ಬದಲಾಯಿಸುವುದು ಸುಲಭವಾದದ್ದಾಗಿರುತ್ತದೆ.

4. ಆಡಳಿತ ಮಂಡಳಿಗಿಂತ ಬೋಧನಾ ತಂಡವು ಎಲ್ಲಿ ದಕ್ಷವಾಗಿರುತ್ತದೆಯೋ ಅಲ್ಲಿ ಬದಲಾದ ಪಠ್ಯವಸ್ತುವನ್ನು ಅಳವಡಿಸುವುದು ಸುಲಭವಾಗಿರುತ್ತದೆ.

ಎನ್] ಎನ್. ರಾಜನಾಯ್ಕ (2005) ಚಿತ್ರದುರ್ಗ

ಕರ್ನಾಟಕ ರಾಜ್ಯ ಸರಕಾರವು 9ನೆಯ ತರಗತಿಗೆ ನಿಗದಿಪಡಿಸಿರುವ ಸಮಾಜ ವಿಜ್ಞಾನ ಪಠ್ಯಪುಸ್ತಕದ ವಿಮರ್ಶಾತ್ಮಕ ಅಧ್ಯಯನ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಮಂಡಿಸಿದ ಲಘು ಪ್ರಬಂಧ.

ಉದ್ದೇಶಗಳು

1. ಪಠ್ಯಪುಸ್ತಕದ ಗುರಿ – ಉದ್ದೇಶಗಳು
2. ಪಠ್ಯಪುಸ್ತಕದ ರಚನೆ ಹಾಗೂ ಮಂಡನೆ
3. ಭೂಪಟಗಳು ಹಾಗೂ ಚಿತ್ರಪಟಗಳು.
4. ಪ್ರಶ್ನೆಗಳು ಹಾಗೂ ಚಟುವಟಿಕೆಗಳು
5. ಭಾಷೆ
6. ಪಠ್ಯಪುಸ್ತಕದ ರಚನೆ

ಈ ಕುರಿತು 50 ಶಿಕ್ಷಕರನ್ನು ಆಯ್ಕೆ ಮಾಡಿಕೊಂಡು ಚಿತ್ರದುರ್ಗ ಜಿಲ್ಲೆಯಲ್ಲಿ ಕೆಲವು ಆಯ್ದ ಪ್ರೌಢಶಾಲೆಗಳಲ್ಲಿ ಬೋಧಿಸುತ್ತಿರುವ ಸಮಾಜ ವಿಜ್ಞಾನ ಶಿಕ್ಷಕರುಗಳಿಗೆ ಪ್ರಶ್ನಾವಳಿಯನ್ನು ಕೊಟ್ಟು ಅದರಿಂದ ಸಂಗ್ರಹಿಸಲ್ಪಟ್ಟ ಪ್ರತಿಕ್ರಿಯೆಗಳನ್ನು ಇಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಫಲಿತಾಂಶಗಳು

1. ಹಲವಾರು ಜನ ಶಿಕ್ಷಕರು ಪಠ್ಯವಸ್ತುವು ಭಾರದ್ದಾಗಿದ್ದು ವಿಷಯವು ನಿಗದಿಪಡಿಸಿದ ಅವಧಿಯಲ್ಲಿ ಮುಗಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.
2. ಕೆಲವು ಅಧ್ಯಾಯದಲ್ಲಿ ರಾಜರ ಚಿತ್ರಗಳು, ಕೆಲವು ಭೂಪಟಗಳು ಇದ್ದರೆ ಚೆನ್ನಾಗಿತ್ತು ಎಂದು ಹೇಳಿದ್ದಾರೆ.
3. ಪಠ್ಯಪುಸ್ತಕದ ಭಾಷೆಯು ಸರಳವಾಗಿದ್ದು ವಿದ್ಯಾರ್ಥಿಗಳ ಗ್ರಹಿಕೆಗೆ ಸುಲಭವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.
4. ಕೊಟ್ಟಂತಹ ಚಟುವಟಿಕೆಗಳನ್ನು ಕಾರ್ಯರೂಪದಲ್ಲಿ ತರಲು ವೇಳೆಯ ಅಭಾವವಿದೆ ಎಂದು ಹೇಳಿದ್ದಾರೆ.

* * *

ಅಧ್ಯಾಯ – 3

ಸಂಶೋಧನಾ ಅಧ್ಯಯನದ ವಿನ್ಯಾಸ

ಅಧ್ಯಾಯ – 3

ಸಂಶೋಧನಾ ಅಧ್ಯಯನದ ವಿನ್ಯಾಸ

3.1 ಪ್ರಸ್ತಾವನೆ

ಸಂಶೋಧನಾ ಅಧ್ಯಯನದ ವಿನ್ಯಾಸವು ಸಂಶೋಧನೆಯ ನೀಲಿ ನಕ್ಷೆಯಾಗಿದ್ದು, ಸಂಶೋಧನೆಯ ಉದ್ದೇಶಗಳಿಗನುಗುಣವಾಗಿ ಕ್ರಮಬದ್ಧ ಯೋಜನೆಯ ಪ್ರಕಾರ ಸ್ಪಷ್ಟವಾಗಿ ವಿಷಯವನ್ನು ಸಾದರಪಡಿಸುತ್ತದೆ. ಯಾವುದೇ ಕಾರ್ಯವನ್ನು ಯಶಸ್ವಿಗೊಳಿಸಲು ಪ್ರತಿಯೊಂದಕ್ಕೂ ರೂಪರೇಷೆ ವಿಧಾನಗಳು ಅವಶ್ಯ ಅದರಂತೆ ವಿನ್ಯಾಸವು ಒಂದು ಮುಖ್ಯವಾದ ಅಂಗವಾಗಿದೆ. ಪ್ರಸ್ತುತ ಅಧ್ಯಯನವು **ಸಮೀಕ್ಷಾ ವಿಧಾನವನ್ನು** ಅಳವಡಿಸಿಕೊಂಡು ಅಧ್ಯಯನ ಕೈಗೊಳ್ಳಲಾಗಿದೆ.

ಈ ಅಧ್ಯಾಯವು ವಿವಿಧ ಅಧ್ಯಯನದ ಪದ್ಧತಿಗಳು ಮತ್ತು ಪ್ರಕ್ರಿಯೆಗಳನ್ನು ಅಧ್ಯಯನದಲ್ಲಿ ಒಳಗೊಂಡ ವಿಷಯವನ್ನು ನಿರೂಪಿಸುತ್ತದೆ ಇಲ್ಲಿ ಹಾಕಿಕೊಂಡ ಉದ್ದೇಶಗಳನ್ನು ಸಾಧಿಸುವ ಸಲುವಾಗಿ ಕೆಲವು ಪದ್ಧತಿಗಳನ್ನು ಅಧ್ಯಯನದಲ್ಲಿ ಬಳಸಲಾಗಿದೆ. ಈ ಅಧ್ಯಯನಕ್ಕೆ ಬಳಸಲಾದ ವಿನ್ಯಾಸವನ್ನು ಮುಂದಿನ ಪುಟದಲ್ಲಿರುವ ಧಾರಾಪಟದಲ್ಲಿ ನಿರೂಪಿಸಲಾಗಿದೆ.

3.2 ಧಾರಾಪಟ:

ಉದ್ದೇಶಗಳು	ದತ್ತಾಂಶ ಸ್ವರೂಪ	ದತ್ತಾಂಶದ ಸಂಪನ್ಮೂಲಗಳು	ಸಾಧನಗಳು	ಜನಸಂಖ್ಯೆ ಪ್ರತಿದರ್ಶನಗಳು	ದತ್ತಾಂಶ ಸಂಗ್ರಹಣಾ ವಿಧಾನ	ದತ್ತಾಂಶದ ವಿಶ್ಲೇಷಣೆ
ಪಠ್ಯಪುಸ್ತಕದಲ್ಲಿನ ಗದ್ಯ-ಪದ್ಯಭಾಗವು ಭಾಷೆ ಮತ್ತು ಸಾಹಿತ್ಯ ಬೋಧನೆಗೆ ಸಹಾಯಕವಾಗಿದೆಯೇ ಎಂಬುದನ್ನು ವಿಶ್ಲೇಷಿಸುವುದು.	ಪ್ರೌಢಶಾಲೆಗಳಲ್ಲಿ ಕನ್ನಡ ವಿಷಯ ಬೋಧಿಸುತ್ತಿರುವ ಶಿಕ್ಷಕರಿಂದ ಪಡೆದ ಅಭಿಪ್ರಾಯ	ಸರಕಾರಿ ಅನುದಾನಿತ ಮತ್ತು ಅನುದಾನರಹಿತ ಪ್ರೌಢಶಾಲೆಗಳು	ನಮೂನೆಗಳು	30 ಪ್ರೌಢಶಾಲೆಗಳಲ್ಲಿ ಕನ್ನಡ ವಿಷಯ ಬೋಧಿಸುತ್ತಿರುವ 50 ಜನ ಕನ್ನಡ ಶಿಕ್ಷಕರು	ಪ್ರಶ್ನಾವಳಿ ನೀಡಿ ಮುಖತಃ ಭೇಟಿಯ ಮೂಲಕ	ಶೇಕಡವಾರು ಕೋಷ್ಟಕ ಹಾಗೂ ಸ್ತಂಭಾ ಲೇಖನದ ಮೂಲಕ
ಪಠ್ಯಪುಸ್ತಕಗಳಲ್ಲಿರುವ ಪಠ್ಯವಸ್ತುವಿನಿಂದ ನೈತಿಕ ಮೌಲ್ಯಗಳನ್ನು ನಾಡು-ನುಡಿಗಳ ಬಗ್ಗೆ ಅಭಿಮಾನ ಮತ್ತು ಗೌರವವನ್ನು, ಭಾಷಾ ಕೌಶಲಗಳನ್ನು ಬೆಳೆಸಬಹುದೇ ಎಂಬುದನ್ನು ತಿಳಿಯುವುದು.	ಪ್ರೌಢಶಾಲೆಗಳಲ್ಲಿ ಕನ್ನಡ ವಿಷಯ ಬೋಧಿಸುತ್ತಿರುವ ಶಿಕ್ಷಕರಿಂದ ಪಡೆದ ಮಾಹಿತಿ	ವಿಷಯ ತಜ್ಞರೊಂದಿಗೆ ಮತ್ತು ಮಾರ್ಗದರ್ಶಕರೊಂದಿಗೆ ಚರ್ಚಿಸಿ ತಯಾರಿಸಲಾದ ಪ್ರಶ್ನಾವಳಿ	ಪ್ರೌಢಶಾಲೆಗಳಲ್ಲಿರುವ ಕನ್ನಡ ವಿಷಯ ಶಿಕ್ಷಕರಿಗೆ ನೀಡಿದ ಪ್ರಶ್ನಾವಳಿ	ಪ್ರೌಢಶಾಲೆಗಳಲ್ಲಿ ಕನ್ನಡ ವಿಷಯ ಬೋಧಿಸುತ್ತಿರುವ 50 ಜನ ಶಿಕ್ಷಕರು	ಪ್ರಶ್ನಾವಳಿ ನೀಡಿ ಮುಖತಃ ಭೇಟಿಯ ಮೂಲಕ	"
ಪ್ರಥಮ, ದ್ವಿತೀಯ, ತೃತೀಯ ಭಾಷೆಗಳ ಪಠ್ಯಪುಸ್ತಕದಲ್ಲಿ ವ್ಯಾಕರಣಾಂಶಗಳು, ಗಾದೆ ಮಾತು ಒಗಟುಗಳನ್ನು ಬಳಕೆ ಮಾಡಿದ್ದಾರೆಯೇ ಎಂಬುದನ್ನು ಮನಗಾಣುವುದು.	– " –	– " –	– " –	– " –	– " –	– " –
ಸಾಹಿತ್ಯ ಬೋಧನೆಗೆ ಸಹಾಯಕವಾಗುವಂತಹ ಅಂಶಗಳಿವೆಯೇ ಎಂಬುದನ್ನು ಅಧ್ಯಯನ ಮಾಡುವುದು.	– " –	– " –	– " –	– " –	– " –	– " –
ಮಕ್ಕಳ ಮಾನಸಿಕ ಮಟ್ಟಕ್ಕೆ, ಅನುಗುಣವಾಗಿ ಪಠ್ಯಪುಸ್ತಕಗಳು ರಚನೆಗೊಂಡಿದೆಯೇ ಎಂಬುದನ್ನು ಪರೀಕ್ಷಿಸುವುದು.	– " –	– " –	– " –	– " –	– " –	– " –

3.3 ಅಧ್ಯಯನದ ಉದ್ದೇಶಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ

- ಉದ್ದೇಶಗಳು
- ದತ್ತಾಂಶಗಳ ಸ್ವರೂಪ
- ದತ್ತಾಂಶಗಳ ಸಂಗ್ರಹಣೆ
- ಸಾಧನಗಳು
- ಜನಸಂಖ್ಯೆ ಮತ್ತು ನಮೂನೆಗಳು
- ದತ್ತಾಂಶ ಸಂಗ್ರಹಣಾ ಪ್ರಕ್ರಿಯೆ
- ದತ್ತಾಂಶ ವಿಶ್ಲೇಷಣೆ

ಉದ್ದೇಶಗಳು

ಪಠ್ಯಪುಸ್ತಕದಲ್ಲಿನ ಗದ್ಯ-ಪದ್ಯಭಾಗವು ಭಾಷೆ ಮತ್ತು ಸಾಹಿತ್ಯ ಬೋಧನೆಗೆ ಸಹಾಯಕವಾಗಿದೆಯೇ ಎಂಬುದನ್ನು ವಿಶ್ಲೇಷಿಸುವುದು.

ದತ್ತಾಂಶಗಳ ಸ್ವರೂಪ

ಪ್ರೌಢಶಾಲೆಗಳಿಗೆ ಭೇಟಿ ನೀಡಿ ಅಲ್ಲಿರುವ ಕನ್ನಡ ಭಾಷಾ ಶಿಕ್ಷಕರಿಂದ 8, 9 ಮತ್ತು 10 ನೆಯ ತರಗತಿಯ ಪ್ರಥಮ,ದ್ವಿತೀಯ ಹಾಗೂ ತೃತೀಯ ಕನ್ನಡ ಭಾಷಾ ಪಠ್ಯಪುಸ್ತಕದ ಬಗ್ಗೆ ಸ್ಥೂಲವಾಗಿ ಮಾಹಿತಿ ಪಡೆಯುವುದು.

ದತ್ತಾಂಶಗಳ ಸಂಪನ್ಮೂಲಗಳು

ಸರಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರೌಢಶಾಲೆಗಳಲ್ಲಿರುವ ಕನ್ನಡ ಭಾಷಾ ಶಿಕ್ಷಕರಿಂದ ದತ್ತಾಂಶ ಸಂಗ್ರಹಿಸುವುದು.

ಸಾಧನಗಳು

ದತ್ತಾಂಶ ಸಂಗ್ರಹಣೆಗೆ ಬಳಸಿದ ಸಾಧನಗಳು ಪ್ರೌಢಶಾಲೆಗಳಲ್ಲಿ ಕನ್ನಡ ವಿಷಯ ಬೋಧಿಸುತ್ತಿರುವ ಶಿಕ್ಷಕರಿಗೆ ಸಂಶೋಧಕರು ವಿಷಯ ತಜ್ಞರೊಂದಿಗೆ ಶಿಕ್ಷಣ ತಜ್ಞರೊಂದಿಗೆ ಮತ್ತು ಮಾರ್ಗದರ್ಶಕರೊಂದಿಗೆ ಚರ್ಚಿಸಿ ತಯಾರಿಸಲಾದ ಪ್ರಶ್ನಾವಳಿಯನ್ನು ನೀಡುವುದು.

ಜನಸಂಖ್ಯೆಯ ಪ್ರತಿದರ್ಶನಗಳು

30 ಪ್ರೌಢಶಾಲೆಗಳಲ್ಲಿ ಕನ್ನಡ ವಿಷಯ ಬೋಧಿಸುತ್ತಿರುವ 50 ಜನ ಕನ್ನಡ ಭಾಷಾ ಶಿಕ್ಷಕರು.

3.4 ದತ್ತಾಂಶ ಸಂಗ್ರಹಣಾ ವಿಧಾನ

ಬೇರೆ ಬೇರೆ ಪ್ರೌಢಶಾಲೆಗಳಿಗೆ ಭೇಟಿ ನೀಡಿ ಅಲ್ಲಿರುವ ಕನ್ನಡ ಭಾಷಾ ಶಿಕ್ಷಕರನ್ನು ಮುಖತಃ ಭೇಟಿ ಮಾಡಿ ಅವರಿಗೆ ಪ್ರಶ್ನಾವಳಿಯನ್ನು ನೀಡಿ ದತ್ತಾಂಶ ಸಂಗ್ರಹಿಸುವುದು.

ದತ್ತಾಂಶ ವಿಶ್ಲೇಷಣೆ

ಪ್ರೌಢಶಾಲೆಗಳಲ್ಲಿ ಕನ್ನಡ ಭಾಷೆಯನ್ನು ಬೋಧಿಸುತ್ತಿರುವ ಶಿಕ್ಷಕರು ನೀಡಿದ ಮಾಹಿತಿಯನ್ನು ಶೇಕಡವಾರು ಕೋಷ್ಟಕ ಹಾಗೂ ಸ್ತಂಭಾಲೇಖನದ ಮೂಲಕ ವಿಶ್ಲೇಷಣೆ ಮಾಡುವುದು.

ಉದ್ದೇಶಗಳು

- ಪಠ್ಯಪುಸ್ತಕದಲ್ಲಿನ ಗದ್ಯ–ಪದ್ಯಭಾಗವು ಭಾಷೆ ಮತ್ತು ಸಾಹಿತ್ಯ ಬೋಧನೆಗೆ ಸಹಾಯಕವಾಗಿದೆಯೇ ಎಂಬುದನ್ನು ವಿಶ್ಲೇಷಿಸುವುದು.
- ಪಠ್ಯಪುಸ್ತಕಗಳಲ್ಲಿರುವ ಪಠ್ಯವಸ್ತುವಿನಿಂದ ನೈತಿಕ ಮೌಲ್ಯಗಳನ್ನು, ನಾಡು–ನುಡಿಗಳ ಬಗ್ಗೆ ಅಭಿಮಾನ ಮತ್ತು ಗೌರವವನ್ನು, ಭಾಷಾ ಕೌಶಲಗಳನ್ನು ಬೆಳೆಸಬಹುದೇ ಎಂಬುದನ್ನು ತಿಳಿಯುವುದು.
- ಪ್ರಥಮ–ದ್ವಿತೀಯ – ತೃತೀಯ ಭಾಷೆಗಳ ಪಠ್ಯಪುಸ್ತಕದಲ್ಲಿ ವ್ಯಾಕರಣಾಂಶಗಳು, ಗಾದೆ ಮಾತು ಒಗಟುಗಳನ್ನು ಬಳಕೆ ಮಾಡಿದ್ದಾರೆಯೇ ಎಂಬುದನ್ನು ಮನಗಾಣುವುದು.
- ಸಾಹಿತ್ಯ ಬೋಧನೆಗೆ ಸಹಾಯಕವಾಗುವಂತಹ ಅಂಶಗಳಿವೆಯೇ ಎಂಬುದನ್ನು ಅಧ್ಯಯನ ಮಾಡುವುದು.
- ಮಕ್ಕಳ ಮಾನಸಿಕ ಮಟ್ಟಕ್ಕೆ, ಅನುಗುಣವಾಗಿ ಪಠ್ಯಪುಸ್ತಕಗಳು ರಚನೆಗೊಂಡಿದೆಯೇ ಎಂಬುದನ್ನು ಪರೀಕ್ಷಿಸುವುದು.

ದತ್ತಾಂಶದ ಸ್ವರೂಪ

ಪ್ರೌಢಶಾಲೆಗಳಲ್ಲಿ ಕನ್ನಡ ವಿಷಯ ಬೋಧಿಸುತ್ತಿರುವ ಶಿಕ್ಷಕರನ್ನು ಭೇಟಿ ಮಾಡಿ ಅವರಿಂದ 8, 9 ಮತ್ತು 10 ನೆಯ ತರಗತಿಯ ಪ್ರಥಮ, ದ್ವಿತೀಯ ಹಾಗೂ ತೃತೀಯ ಕನ್ನಡ ಭಾಷಾ ಪಠ್ಯಪುಸ್ತಕದ ಬಗ್ಗೆ ಮಾಹಿತಿ ಸಂಗ್ರಹಿಸುವುದು.

ದತ್ತಾಂಶದ ಸಂಪನ್ಮೂಲಗಳು

ಈ ಉದ್ದೇಶಗಳಿಗನುಗುಣವಾಗಿ ವಿಷಯ ತಜ್ಞರೊಂದಿಗೆ, ಶಿಕ್ಷಣ ತಜ್ಞರೊಂದಿಗೆ ಮತ್ತು ಮಾರ್ಗದರ್ಶಕರೊಂದಿಗೆ ಚರ್ಚಿಸಿ ತಯಾರಿಸಲಾದ ಪ್ರಶ್ನಾವಳಿಯ ಮುಖಾಂತರ ಪ್ರೌಢಶಾಲೆಯ ಕನ್ನಡ ಭಾಷಾ ಶಿಕ್ಷಕರಿಂದ ಮಾಹಿತಿ ಸಂಗ್ರಹಿಸಲಾಗುವುದು.

ಸಾಧನಗಳು

ಪ್ರೌಢಶಾಲೆಗಳಲ್ಲಿ 8, 9, 10 ನೆಯ ತರಗತಿಯ ಕನ್ನಡ ಭಾಷೆಯನ್ನು ಬೋಧಿಸುತ್ತಿರುವ ಕನ್ನಡ ಭಾಷಾ ಶಿಕ್ಷಕರಿಗೆ ವಿಷಯ ತಜ್ಞರೊಂದಿಗೆ ಚರ್ಚಿಸಿ ತಯಾರಿಸಲಾದ ಪ್ರಶ್ನಾವಳಿಯನ್ನು ನೀಡುವುದು.

ಜನಸಂಖ್ಯೆಯ ಪ್ರತಿದರ್ಶನಗಳು

ಆಯ್ದುಕೊಳ್ಳಲಾದ ಪ್ರೌಢಶಾಲೆಗಳಲ್ಲಿ ಕನ್ನಡ ವಿಷಯ ಬೋಧಿಸುತ್ತಿರುವ 50 ಜನ ಶಿಕ್ಷಕರನ್ನು ಪಠ್ಯಪುಸ್ತಕದಲ್ಲಿ ಇರುವ ಕನ್ನಡ ಭಾಷೆ ಮತ್ತು ಸಾಹಿತ್ಯ ಬೋಧನೆಯ ಬಗ್ಗೆ ಮಾಹಿತಿ ಸಂಗ್ರಹಿಸಲು ಆಯ್ಕೆ ಮಾಡಿಕೊಳ್ಳಲಾಯಿತು.

ದತ್ತಾಂಶ ಸಂಗ್ರಹಣಾ ವಿಧಾನ

ಪ್ರೌಢಶಾಲೆಗಳಲ್ಲಿಯ ಕನ್ನಡ ಭಾಷಾ ಶಿಕ್ಷಕರನ್ನು ಮುಖತಃ ಭೇಟಿ ಮಾಡಿ 30 ಪ್ರಶ್ನೆಗಳನ್ನೊಳಗೊಂಡ ಪ್ರಶ್ನಾವಳಿಯನ್ನು ಅವರಿಗೆ ಕೊಟ್ಟು ದತ್ತಾಂಶ ಸಂಗ್ರಹಿಸಲಾಯಿತು. ಇದರಲ್ಲಿ ಪ್ರತಿ ಪ್ರಶ್ನೆಗೆ ಹೌದು, ಭಾಗಶಃ ಮತ್ತು ಇಲ್ಲ ಎಂಬ ಖಾಲಿ ಪೆಟ್ಟಿಗೆಗಳನ್ನು ನೀಡಲಾಗಿತ್ತು. ಶಿಕ್ಷಕರು ತಮ್ಮ ಅಭಿಪ್ರಾಯವನ್ನು ಖಾಲಿ ಪೆಟ್ಟಿಗೆಗಳಲ್ಲಿ (✓) ಚಿಹ್ನೆಯಿಂದ ಗುರುತಿಸುವುದರ ಮೂಲಕ ವ್ಯಕ್ತಪಡಿಸಿದ್ದಾರೆ.

3.5 ದತ್ತಾಂಶಗಳ ವಿಶ್ಲೇಷಣೆ

ಪ್ರೌಢಶಾಲೆಗಳಲ್ಲಿ ಕನ್ನಡ ಭಾಷೆ ಪಠ್ಯಪುಸ್ತಕವನ್ನು ಬೋಧಿಸುತ್ತಿರುವ ಶಿಕ್ಷಕರು ನೀಡಿದ ಮಾಹಿತಿಯನ್ನು ಶೇಕಡಾವಾರು ಕೋಷ್ಟಕ ಹಾಗೂ ಸ್ತಂಭಾಲೇಖನದ ಮೂಲಕ ವಿಶ್ಲೇಷಣೆ ಮಾಡುವುದು.

ಸಮಸ್ಯೆಯ ನಿರೂಪಣೆ

"ಪ್ರೌಢಶಾಲಾ ಹಂತದ ಕನ್ನಡ ಭಾಷೆ ಮತ್ತು ಸಾಹಿತ್ಯ ಬೋಧನೆ ಒಂದು ಅಧ್ಯಯನ"

ಈ ಸಂಶೋಧನೆಯು ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರೌಢಶಾಲೆಗಳಿಗೆ ಮಾತ್ರ ಅನ್ವಯಿಸುತ್ತದೆ.

ಅಧ್ಯಯನದ ರೂಪರೇಷೆ

ಈ ರೀತಿಯ ಸಂಶೋಧನೆ ಹಾಗೂ ಅಧ್ಯಯನಕ್ಕೆ **'ವ್ಯಕ್ತಿಗತ ಅಭಿಪ್ರಾಯ ಸಂಗ್ರಹಣಾ ಪದ್ಧತಿ'**ಯನ್ನು ಅನುಸರಿಸಲಾಗಿದೆ. ಈ ಅಧ್ಯಯನದ ವಿಷಯದಲ್ಲಿ ಈ ಕ್ರಮವು ಹೆಚ್ಚು ಸೂಕ್ತವೂ ಮತ್ತು ಸಮರ್ಪಕವೂ ಆಗಿರುವುದರಿಂದ ಈ ಪದ್ಧತಿಯನ್ನು ಅನುಸರಿಸಲಾಗಿದೆ.

ಪ್ರಶ್ನಾವಳಿಯ ತಯಾರಿಕೆ

"ಪ್ರೌಢಶಾಲಾ ಹಂತದ ಕನ್ನಡ ಭಾಷೆ ಮತ್ತು ಸಾಹಿತ್ಯ ಬೋಧನೆ ಒಂದು ಅಧ್ಯಯನ" ಈ ವಿಷಯವನ್ನು ಅಧ್ಯಯನಕ್ಕೆ ತೆಗೆದುಕೊಳ್ಳುವ ಪೂರ್ವದಲ್ಲಿ ಸಂಶೋಧಕರು ಕೆಲವು ಶಿಕ್ಷಣ ತಜ್ಞರು, ವಿಷಯ ಪರಿಣಿತರೊಡನೆ ಚರ್ಚಿಸಿದ್ದರು. ಕೆಲವು ಸಂಶೋಧಕರ ಅನುಭವಗಳನ್ನು ಕೇಳಿ ತಿಳಿದುಕೊಂಡಿದ್ದರು. ಕನ್ನಡ ಭಾಷಾ ಪಠ್ಯಪುಸ್ತಕವನ್ನು ಓದಿ ಅದರಲ್ಲಿರುವ ಕೆಲವು ಕೊರತೆಗಳನ್ನು ಸಮಸ್ಯೆಗಳನ್ನು ಮನಗಂಡು, ಮಕ್ಕಳ ಒಡನಾಟದೊಂದಿಗೆ ಕೆಲವು ವಿಷಯಗಳನ್ನು ತಿಳಿದುಕೊಂಡು ಈ ಎಲ್ಲಾ ವಿಷಯಗಳ ಆಧಾರದ ಮೇಲೆ ಪ್ರಶ್ನಾವಳಿಯನ್ನು ತಯಾರಿಸಲಾಯಿತು.

ಸಾಧನ ಮತ್ತು ತಂತ್ರಗಳು

"ಪ್ರೌಢಶಾಲಾ ಹಂತದ ಕನ್ನಡ ಭಾಷೆ ಮತ್ತು ಸಾಹಿತ್ಯ ಬೋಧನೆ ಒಂದು ಅಧ್ಯಯನ" ಈ ಸಂಶೋಧನೆಯಲ್ಲಿ **'ಪ್ರಶ್ನಾವಳಿಯ ಪದ್ಧತಿ'**ಯನ್ನು ಸಾರ್ವತ್ರಿಕವಾಗಿ ಅನುಸರಿಸಲಾಗುತ್ತದೆ. ಇದೊಂದು ಅತ್ಯಂತ ಸಮರ್ಪಕ, ಉಪಯುಕ್ತವಾದ ಹಾಗೂ ಪರಿಣಾಮಕಾರಿಯಾದ ತಂತ್ರಗಳಲ್ಲೊಂದು ಎಂಬುದಾಗಿ ಸಂಶೋಧಕರು ಹಾಗೂ ಅಧ್ಯಯನಶೀಲರು ಸಮ್ಮತಿಸಿದ್ದಾರೆ. ಈ ಕ್ರಮದಿಂದ ಸಂಖ್ಯಾ ಸಂಗ್ರಹಣೆಯನ್ನು ಮಾಡಲಾಗಿದೆ.

ಪ್ರತಿಚಯನದ ಆಯ್ಕೆ

ಪ್ರಸ್ತುತ ಸಂಶೋಧನಾ ಅಧ್ಯಯನವನ್ನು ಕೈಗೊಳ್ಳಲು 30 ಪ್ರೌಢಶಾಲೆಗಳನ್ನು ಯಾದೃಚ್ಛಿಕವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಇದರಲ್ಲಿ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರೌಢಶಾಲೆಗಳಿವೆ. ಈ ಶಾಲೆಗಳಲ್ಲಿಯ 8,9,10 ನೆಯ ತರಗತಿಯ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾ ವಿಷಯವನ್ನು ಬೋಧನೆ ಮಾಡುವ 50 ಜನ ಶಿಕ್ಷಕರುಗಳಿಗೆ ತಯಾರಿಸಿದ ಪ್ರಶ್ನಾವಳಿಯನ್ನು ನೀಡಿ ಅವರಿಂದ ಅಭಿಪ್ರಾಯ ಸಂಗ್ರಹಿಸಲಾಯಿತು. ಶಿಕ್ಷಕರುಗಳು ತಮ್ಮ ಬೋಧನಾ ಅನುಭವಗಳ ಮೇಲೆ ನೀಡಿದ ಅಭಿಪ್ರಾಯಗಳ ಆಧಾರದ ಮೇಲೆ ಕೆಲವು ನಿರ್ಣಯಗಳಿಗೆ ಬರಲಾಗಿದೆ.

ದತ್ತಾಂಶಗಳ ಸಂಗ್ರಹಣಾ ವಿಧಾನ

ಪ್ರಸ್ತುತ ಸಂಶೋಧನಾ ಅಧ್ಯಯನ ದತ್ತಾಂಶ ಸಂಗ್ರಹಣೆಗಾಗಿ 8, 9, 10 ನೆಯ ತರಗತಿಯ ಕನ್ನಡ ಭಾಷಾ ವಿಷಯವನ್ನು ಬೋಧಿಸುವ ಶಿಕ್ಷಕರುಗಳಿಗೆ ಪ್ರಶ್ನಾವಳಿಯನ್ನು ತಯಾರಿಸಿ ಅವರಿಂದ ಮಾಹಿತಿಯನ್ನು ಸಂಗ್ರಹಿಸಲಾಯಿತು. ಪ್ರಸ್ತುತ ಅಧ್ಯಯನಕ್ಕಾಗಿ 30 ಪ್ರೌಢಶಾಲೆಗಳಲ್ಲಿಯ 8, 9, 10 ನೇ ತರಗತಿಯ ಕನ್ನಡ ಭಾಷಾ ವಿಷಯವನ್ನು ಬೋಧಿಸುವ ಸುಮಾರು 50 ಜನ ಶಿಕ್ಷಕರುಗಳಿಗೆ ಪ್ರಶ್ನಾವಳಿಯನ್ನು ನೀಡಿ ಅವರಿಂದ ಪಡೆಯಲಾದ ಪ್ರತಿಕ್ರಿಯೆಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ಗೌಪ್ಯತೆಯನ್ನು ಕಾಪಾಡಲಾಯಿತು. ಸಂಗ್ರಹಿಸಲ್ಪಟ್ಟ ಒಟ್ಟು ಮಾಹಿತಿಯನ್ನು ಸಂಯೋಜಿಸಿ ದತ್ತಾಂಶ ವಿಶ್ಲೇಷಣೆಯಲ್ಲಿ ಬಳಸಲಾಯಿತು.

ಪ್ರಶ್ನಾವಳಿಯಲ್ಲಿಯ ಪ್ರಶ್ನೆಗಳಿಗೆ ಹೌದು / ಭಾಗಶಃ / ಇಲ್ಲ ಎಂಬುದನ್ನು (✓) ಈ ಚಿಹ್ನೆ ಸೂಚಿಸುವ ಮೂಲಕ ಶಿಕ್ಷಕರ ಅಭಿಪ್ರಾಯವನ್ನು ಪಡೆಯಲಾಯಿತು. ಸುಮಾರು 30 ಪ್ರಶ್ನೆಗಳಿಗೆ ಕನ್ನಡ ಭಾಷಾ ಶಿಕ್ಷಕರಿಂದ ಮಾಹಿತಿ ಸಂಗ್ರಹಿಸಲಾಯಿತು.

ದತ್ತಾಂಶಗಳ ವಿಂಗಡಣಾ ವಿಧಾನ

ಪ್ರಸ್ತುತ ಅಧ್ಯಯನದಲ್ಲಿ ಸಂಗ್ರಹಿಸಲಾದ ಅಂಕಿ ಅಂಶಗಳನ್ನು ಶೇಕಡವಾರು ಮೂಲಕ ಅನುಲಕ್ಷಿಸಿದ್ದು ಇದನ್ನು ಶೇಕಡವಾರು ಕೋಷ್ಟಕ ಹಾಗೂ ಸ್ತಂಭಾಲೇಖನದ ಮೂಲಕ ತೋರಿಸಲಾಗಿದೆ. ಈ ಪ್ರತಿಶತ ವರದಿ ಹಾಗೂ ಸ್ತಂಭಾಲೇಖನವನ್ನು 4ನೇ ಅಧ್ಯಾಯದಲ್ಲಿ ಅಳವಡಿಸಲಾಗಿದೆ.

* * * *

ಅಧ್ಯಾಯ – 4

ದತ್ತಾಂಶಗಳ ವಿಶ್ಲೇಷಣೆ ಮತ್ತು ಅರ್ಥೈಸುವಿಕೆ

ಅಧ್ಯಾಯ – 4

ದತ್ತಾಂಶಗಳ ವಿಶ್ಲೇಷಣೆ ಮತ್ತು ಅರ್ಥೈಸುವಿಕೆ

4.1 ಪ್ರಸ್ತಾವನೆ


ಈ ಅಧ್ಯಾಯವು ಇಡೀ ಸಂಶೋಧನೆಯಲ್ಲಿ ಅತ್ಯಂತ ಮುಖ್ಯವಾದ ಕೇಂದ್ರಬಿಂದುವಾದ ಭಾಗವಾಗಿದೆ. ಏಕೆಂದರೆ ಸಂಗ್ರಹಿಸಿದ ಮಾಹಿತಿಯನ್ನು ಸಂಖ್ಯಾಶಾಸ್ತ್ರದ ಅಥವಾ ಶೇಕಡಾ ಸೂತ್ರ ಆಧಾರದ ಮೇಲೆ ವಿಶ್ಲೇಷಿಸಿ ಒಂದು ನಿರ್ದಿಷ್ಟವಾದ ತೀರ್ಮಾನಕ್ಕೆ ಬರಲು ಕಾರಣವಾಗುವುದು.


ವಿಶ್ಲೇಷಣೆ ಮತ್ತು ಅರ್ಥೈಸುವಿಕೆಯನ್ನು ಈ ಕೆಳಗಿನಂತೆ ಮಾಡಲಾಗಿದೆ.

ಒಟ್ಟು 30 ಪ್ರಶ್ನಾವಳಿಯನ್ನು ರಚಿಸಿ ಒಟ್ಟು 50 ಜನ ಕನ್ನಡ ಭಾಷಾ ಶಿಕ್ಷಕರ ಅಭಿಪ್ರಾಯವನ್ನು ಶೇಕಡಾವಾರು ಕ್ರಮದಲ್ಲಿ ಕೋಷ್ಟಕದ ಮೂಲಕ ತೋರಿಸಲಾಗಿದೆ ಮತ್ತು ಪ್ರತಿಯೊಂದು ಶಿಕ್ಷಕರ ಒಮ್ಮತದ ಹೇಳಿಕೆಯನ್ನು ಸ್ತಂಭಾಲೇಖನದ ಮೂಲಕ ತೋರಿಸಲಾಗಿದೆ. ಪ್ರತಿಯೊಂದು ಉದ್ದೇಶದಲ್ಲಿಯ ಪ್ರಶ್ನೆಗಳ ವಿಶ್ಲೇಷಣೆಯಲ್ಲಿ ಕಂಡು ಬಂದಂತಹ ಅಂಶಗಳನ್ನು ಈ ಅಧ್ಯಾಯದ ಕೊನೆಯಲ್ಲಿ ತಿಳಿಸಲಾಗಿದೆ.

ಲಂಬಾಕೃತಿಯಲ್ಲಿ

1.  ಇದು **ಹೌದು** ಎಂಬುದನ್ನು ಸೂಚಿಸುತ್ತದೆ.

2.  ಇದು **ಭಾಗಶಃ**ವನ್ನು ಸೂಚಿಸುತ್ತದೆ.

3.  ಇದು **ಇಲ್ಲ** ಎಂಬುದನ್ನು ಸೂಚಿಸುತ್ತದೆ.


4.2 ವಿಶ್ಲೇಷಣೆ: ಪ್ರಶ್ನೆ – 1: ಪ್ರೌಢಶಾಲಾ ಹಂತದ ಕನ್ನಡ ಭಾಷಾ ಪಠ್ಯಪುಸ್ತಕದಲ್ಲಿ ಇರುವ ಪಠ್ಯವಸ್ತುವಿನಿಂದ ಭಾಷಾ ಸಾಮರ್ಥ್ಯಗಳನ್ನು ಬೆಳೆಸಬಹುದೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 1

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	42	07	01
ಶೇಕಡಾ	84	14	02

ಆಲೇಖ – 1



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 84ರಷ್ಟು, ಭಾಗಶಃ ಎಂಬುದಕ್ಕೆ ಶೇ. 14ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 02 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದು ಬರುವುದೇನೆಂದರೆ ಪ್ರೌಢಶಾಲಾ ಹಂತದ ಕನ್ನಡ ಭಾಷಾ ಪಠ್ಯಪುಸ್ತಕದಲ್ಲಿ ಇರುವ ಪಠ್ಯವಸ್ತುವಿನಿಂದ ಅಂದರೆ ಗದ್ಯ–ಪದ್ಯ ಭಾಗದಲ್ಲಿ ಸರಳವಾಗಿ ಮಕ್ಕಳನ್ನು ಓದಿಸಿಕೊಂಡು ಹೋಗಿ ಭಾಷಾ ಸಾಮರ್ಥ್ಯಗಳಾದ ಆಲಿಸುವಿಕೆ – ಓದುಗಾರಿಕೆ – ಮಾತುಗಾರಿಕೆ, ಬರವಣಿಗೆಗಳ ಸಾಮರ್ಥ್ಯ ಬೆಳೆಸುವುದಲ್ಲದೆ ತನ್ಮೂಲಕ ವಿಷಯ ಜ್ಞಾನವನ್ನು ಪಡೆಯಲು ಸಮರ್ಥರಾಗುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ. ಇದರಿಂದ ವಿದ್ಯಾರ್ಥಿಗಳು ಪಠ್ಯಪುಸ್ತಕದ ಗದ್ಯ–ಪದ್ಯ ಭಾಗವನ್ನು ಓದುತ್ತಾ ಹೋದಂತೆ ಅಭಿರುಚಿಯನ್ನು ಬೆಳೆಸುವುದಲ್ಲದೆ ಅದಕ್ಕೆ ಸಂಬಂಧಿಸಿದ ಪೂರಕ ಪುಸ್ತಕಗಳನ್ನು ಹೆಚ್ಚು ಹೆಚ್ಚು ಓದುವ ಅಭಿರುಚಿ ಹೊಂದಲು ಸಾಧ್ಯವಾಗುತ್ತದೆ.


ಪ್ರಶ್ನೆ – 2: ಸಾಹಿತ್ಯದ ಮೂಲಕ ಸಂಸ್ಕೃತಿಯ ಬಗ್ಗೆ ಕಳಕಳಿ ನೀಡುವ ಪಾಠ–ಪದ್ಯಗಳಿವೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 2

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	20	26	04
ಶೇಕಡಾ	40	52	08

ಆಲೇಖ – 2



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 40ರಷ್ಟು, ಭಾಗಶಃ ಎಂಬುದಕ್ಕೆ ಶೇ. 52ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 8 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದು ಬರುವುದೇನೆಂದರೆ ಭಾಷಾಭ್ಯಾಸದ ಮೂಲಕ ಮಕ್ಕಳಲ್ಲಿ ಸಾಹಿತ್ಯ ಜ್ಞಾನ ಮತ್ತು ಸಾಹಿತ್ಯಾಭಿರುಚಿ ಬೆಳೆಸಲು ಪಠ್ಯಪುಸ್ತಕವು ನೆರವಾಗುತ್ತದೆ. ಇದರಿಂದ ವಿದ್ಯಾರ್ಥಿಗಳಲ್ಲಿ ಕನ್ನಡ ಸಾಹಿತ್ಯದ ಮೂಲಕ ಕನ್ನಡ ನಾಡಿನ ಕಲೆ, ಸಂಸ್ಕೃತಿಯನ್ನು ಅರಿಯಬಹುದು.


ಪ್ರಶ್ನೆ – 3: ಪ್ರಸ್ತುತ ಪಠ್ಯವಸ್ತುವಿನಿಂದ ಭಾಷೆ ಮತ್ತು ಸಾಹಿತ್ಯದ ಅಭಿರುಚಿಯನ್ನು ವಿದ್ಯಾರ್ಥಿಗಳಲ್ಲಿ ಹೆಚ್ಚಿಸಬಹುದೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 3

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	34	14	02
ಶೇಕಡಾ	68	28	04

ಅಲೇಖ – 3



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 68ರಷ್ಟು, ಭಾಗಶಃ ಎಂಬುದಕ್ಕೆ ಶೇ. 28ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 04 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದು ಬರುವುದೇನೆಂದರೆ ಪಠ್ಯಪುಸ್ತಕದಲ್ಲಿ ಬಳಸುವ ಭಾಷಾ ಶೈಲಿ ಮಕ್ಕಳ ಮಾನಸಿಕ ವಿಕಾಸಕ್ಕೆ ಯೋಗ್ಯವೆನಿಸುವಂತಿರಬೇಕು. ಪ್ರಸ್ತುತ ಪ್ರಥಮ, ದ್ವಿತೀಯ ತೃತೀಯ ಭಾಷೆಗಳ ಪಠ್ಯಪುಸ್ತಕಗಳ ಮೂಲಕ ಭಾಷೆ ಮತ್ತು ಸಾಹಿತ್ಯದ ಅಭಿರುಚಿಯನ್ನು ಬೆಳೆಸಬಹುದು.


ಪ್ರಶ್ನೆ – 4: ಗದ್ಯ–ಪದ್ಯ–ಪಠ್ಯಪೂರಕ ಅಧ್ಯಯನದಿಂದ ವಿಷಯ ಗ್ರಹಣವನ್ನು ಹೆಚ್ಚಿಸಬಹುದೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 4

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	30	15	5
ಶೇಕಡಾ	60	30	10

ಆಲೇಖ – 4



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 60ರಷ್ಟು, ಭಾಗಶಃ ಎಂಬುದಕ್ಕೆ ಶೇ. 30ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 10 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದು ಬರುವುದೇನೆಂದರೆ ಗದ್ಯ–ಪದ್ಯ–ಪಠ್ಯಪೂರಕ ಅಧ್ಯಯನದಿದ ವಿಷಯ ಗ್ರಹಣವನ್ನು ಹೆಚ್ಚಿಸಬಹುದು. ಇದಕ್ಕೆ ಸಂಬಂಧಿಸಿದಂತೆ ಕೆಲವು ಗದ್ಯ–ಪದ್ಯ–ಪಠ್ಯಪೂರಕ ಭಾಗದಲ್ಲಿರುವ ಪಾಠಗಳ ಅಧ್ಯಯನದಿಂದ ವಿದ್ಯಾರ್ಥಿಗಳಲ್ಲಿ ವಿಷಯಗ್ರಹಣ ಉತ್ತಮವಾಗುತ್ತದೆ.


ಪ್ರಶ್ನೆ – 5: ಸಾಹಿತ್ಯಾಭಿರುಚಿ ಮತ್ತು ಭಾಷಾ ಪ್ರೇಮವನ್ನು ಬೆಳೆಸುವ ಕಾರ್ಯಕ್ರಮಗಳಿಗೆ ಪ್ರಸ್ತುತ ಪಠ್ಯವಸ್ತುವಿಂದ ಅವಕಾಶ ಇದೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 4

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	43	5	2
ಶೇಕಡಾ	86	10	4

ಆಲೇಖ – 5



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 86ರಷ್ಟು, ಭಾಗಶಃ ಎಂಬುದಕ್ಕೆ ಶೇ. 10ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 04 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದು ಬರುವುದೇನೆಂದರೆ ಸಾಹಿತ್ಯಾಭಿರುಚಿ ಮತ್ತು ಭಾಷಾ ಪ್ರೇಮ ಬೆಳೆಸುವುದಕ್ಕೆ ಪಠ್ಯಪುಸ್ತಕಗಳ ಪಾಠ–ಪದ್ಯದಲ್ಲಿ ಜೊತೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕವು ಈ ಅಂಶವನ್ನು ನಾವು ಮನಗಾಣಬಹುದು.


ಪ್ರಶ್ನೆ – 6: ಕನ್ನಡ ಸಾಹಿತ್ಯ, ಸಂಸ್ಕೃತಿ, ಕವಿ ಪುಂಗವರ ಬಗ್ಗೆ ವಿಶಿಷ್ಠ ಮಾಹಿತಿಯನ್ನು ಒಳಗೊಂಡ ಪಾಠ-ಪದ್ಯಗಳಿವೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 6

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	33	14	3
ಶೇಕಡಾ	66	28	06

ಆಲೇಖ – 6



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 66ರಷ್ಟು, ಭಾಗಶಃ ಎಂಬುದಕ್ಕೆ ಶೇ. 28ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 06 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದು ಬರುವುದೇನೆಂದರೆ ಕನ್ನಡ ಸಾಹಿತ್ಯ ಸಂಸ್ಕೃತಿ, ಕವಿಪುಂಗವರ ಬಗ್ಗೆ ಮಾಹಿತಿ ಒಳಗೊಂಡಿದೆ. ಕನ್ನಡವು ನಮ್ಮ ನಾಡಿನ ಪ್ರಧಾನ ಭಾಷೆಯಾಗಿದೆ. ನಮ್ಮ ಭಾವನೆಗಳು ನಮ್ಮ ಮಾತೃಭಾಷಾ ಪಠ್ಯಪುಸ್ತಕದಲ್ಲಿ ಹಾಸುಹೊಕ್ಕಾಗಿವೆ.


ಪ್ರಶ್ನೆ – 7: ರಾಮಾಯಣ–ಮಹಾಭಾರತದಂತಹ ಪ್ರಸಿದ್ಧ ಕಾವ್ಯಗಳು, ಅವುಗಳಿಂದ ಪ್ರೇರಿತವಾದ ಸಾಹಿತ್ಯದ ವಿವಿಧ ಪ್ರಕಾರಗಳು ಸಮೃದ್ಧವಾಗಿ ರಚಿತವಾಗಿವೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 7

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	16	28	6
ಶೇಕಡಾ	32	56	12

ಆಲೇಖ – 17



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 32ರಷ್ಟು, ಭಾಗಶಃ ಎಂಬುದಕ್ಕೆ ಶೇ. 56ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 12 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದು ಬರುವುದೇನೆಂದರೆ ಪ್ರೌಢಶಾಲಾಹಂತದ ಪ್ರಥಮ – ದ್ವಿತೀಯ – ತೃತೀಯ ಕನ್ನಡ ಭಾಷಾ ಪಠ್ಯಪುಸ್ತಕಗಳಲ್ಲಿ ರಾಮಾಯಣ – ಮಹಾಭಾರತದಂತಹ ಪ್ರಸಿದ್ಧ ಕಾವ್ಯಗಳಿಂದ ಆಧಾರಿತವಾದ ಗದ್ಯ–ಪದ್ಯಗಳಿಂದ ಮಕ್ಕಳಲ್ಲಿ ಮಾನವೀಯ ಮೌಲ್ಯಗಳಾದ ಸ್ವಾರ್ಥತ್ಯಾಗ, ಪ್ರೇಮ, ಅಹಿಂಸೆ ಮೊದಲಾದವುಗಳನ್ನು ಬೆಳೆಸಬಹುದು. ಈ ಅಂಶಗಳು ನಮ್ಮ ಜೀವನಕ್ಕೆ ದಾರಿದೀಪಗಳಾಗಿವೆ.


ಪ್ರಶ್ನೆ – 8: ಕನ್ನಡ ಸಾಹಿತ್ಯದ ಶ್ರೀಮಂತ ಪರಂಪರೆಯನ್ನು ಪರಿಚಯಿಸಲಾಗಿದೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 8

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	41	8	1
ಶೇಕಡಾ	82	16	2

ಆಲೇಖ – 8



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 82ರಷ್ಟು, ಭಾಗಶಃ ಎಂಬುದಕ್ಕೆ ಶೇ. 16ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 02 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದುಬರುವುದೇನೆಂದರೆ ಪ್ರೌಢಶಾಲಾ ಹಂತದ ಪಠ್ಯಪುಸ್ತಕಗಳಲ್ಲಿ ಕನ್ನಡದ ಶ್ರೀಮಂತ ಪರಂಪರೆಯನ್ನು ನೋಡಲು ಸಾಧ್ಯವಾಗುತ್ತದೆ. ಪಠ್ಯಪುಸ್ತಕಗಳ ವಿಷಯ ವಿದ್ಯಾರ್ಥಿಗಳಿಗೆ ಯೋಜನೆ ಮಾಡುವಂತೆ ಮಾಡಿ, ಆ ಮೂಲಕ ಜ್ಞಾನ ಮತ್ತು ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಕನ್ನಡ ಸಾಹಿತ್ಯದ ಶ್ರೀಮಂತ ಪರಂಪರೆಯನ್ನು ಪರಿಚಯಿಸಲಾಗಿದೆ.


ಪ್ರಶ್ನೆ – 9: ಅಧ್ಯಯನಶೀಲತೆ, ಜ್ಞಾನಾರ್ಜನೆ ಮತ್ತು ವ್ಯಕ್ತಿತ್ವ ವಿಕಾಸಕ್ಕೆ ನೆರವಾಗುವ ಪಾಠ-ಪದ್ಯಗಳು ಇವೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 9

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	28	18	4
ಶೇಕಡಾ	56	36	8

ಆಲೇಖ – 9



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 56ರಷ್ಟು, ಭಾಗಶಃ ಎಂಬುದಕ್ಕೆ ಶೇ. 36ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 08 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದುಬರುವುದೇನೆಂದರೆ ಅಧ್ಯಯನ ಶೀಲತೆ, ಜ್ಞಾನಾರ್ಜನೆ, ವ್ಯಕ್ತಿತ್ವ ವಿಕಾಸಕ್ಕೆ ನೆರವಾಗುವ ಪಾಠಗಳು ಸಂಪೂರ್ಣವಾಗಿ ಇರದಿದ್ದರೂ ಕೆಲವು ಪಾಠ-ಪದ್ಯಗಳು ಇವೆ. ಪಠ್ಯವಸ್ತುವಿನೊಂದಿಗೆ ಅತ್ಯಂತ ಆವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ಪರಿಷ್ಕೃತ ಪಠ್ಯಪುಸ್ತಕಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ.


ಪ್ರಶ್ನೆ – 10: ರಸಾನುಭವ ಮತ್ತು ಕಲ್ಪನಾ ಶಕ್ತಿಯನ್ನು ಬೆಳೆಸುವ ಪಠ್ಯವಸ್ತುವನ್ನು ಹೊಂದಿದೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 10

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	20	20	10
ಶೇಕಡಾ	40	40	20

ಆಲೇಖ – 10



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 40ರಷ್ಟು, ಭಾಗಶಃ ಎಂಬುದಕ್ಕೆ ಶೇ. 40ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 20 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದುಬರುವುದೇನೆಂದರೆ ಪ್ರಸ್ತುತ ಇರುವ ಪಠ್ಯವಸ್ತುವಿನಿಂದ ರಸಾನುಭವ ಮತ್ತು ಕಲ್ಪನಾಶಕ್ತಿಯನ್ನು ಬೆಳೆಸುವ ಪಠ್ಯವಸ್ತುವಿನಿಂದ ಮಕ್ಕಳು ಜ್ಞಾನಾರ್ಜನೆ ಪಡೆಯಬಹುದು. ಭಾಷಾ ಕೌಶಲಗಳ ಜೊತೆಗೆ ಸೌಂದರ್ಯಪ್ರಜ್ಞೆ, ಪ್ರಶಂಸಾ ಮನೋಭಾವ, ಮೌಲ್ಯಗಳ ಸಂವರ್ಧನೆಗೆ ಅನುವು ಮಾಡಿಕೊಡಬೇಕು. ಈ ಭಾವಗಳನ್ನು ಬೆಳೆಸುವ ವಿಷಯ ವಸ್ತುವಿನ ಅವಶ್ಯಕತೆ ಇದೆ.


ಪ್ರಶ್ನೆ – 11: ಸಾಹಿತ್ಯ ಅಧ್ಯಯನ ಸಾಮರ್ಥ್ಯವನ್ನು ಬೆಳೆಸಬಹುದಾದ ಪಾಠಗಳಿವೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 11

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	10	22	18
ಶೇಕಡಾ	20	44	36

ಆಲೇಖ – 11



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 20ರಷ್ಟು, ಭಾಗಶಃ ಎಂಬುದಕ್ಕೆ ಶೇ. 44ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 36 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದುಬರುವುದೇನೆಂದರೆ ಸಾಹಿತ್ಯದ ಅಧ್ಯಯನ ಬೆಳೆಸುವಂತಹ ನೇರವಾದ ಪಾಠಗಳು – ಪದ್ಯಗಳು ಈಗಿರುವ ಪಠ್ಯಪುಸ್ತಕಗಳಲ್ಲಿ ಸಮರ್ಪಕವಾಗಿ ಇಲ್ಲ. ಆದರೆ ಪರೋಕ್ಷವಾಗಿ ಸಾಹಿತ್ಯ ಅಧ್ಯಯನಕ್ಕೆ ಪೂರಕವಾದ ಕೆಲವು ಪಾಠಗಳಿವೆ.


ಪ್ರಶ್ನೆ – 12: ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಶಾಸನಗಳು ಹೇಗೆ ಪೂರಕವಾಗಿವೆ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 12

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	12	17	21
ಶೇಕಡಾ	24	34	42

ಆಲೇಖ – 12



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 24ರಷ್ಟು, ಭಾಗಶಃ ಎಂಬುದಕ್ಕೆ ಶೇ. 34ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 12 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದುಬರುವುದೇನೆಂದರೆ ಶಾಸನಗಳ ಬಗ್ಗೆ 9ನೇ ತರಗತಿಯ ಪ್ರಥಮ ಭಾಷೆಯಲ್ಲಿ ಪರಿಚಯಿಸಿದ್ದರೂ ಪರೋಕ್ಷವಾಗಿ ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಕೆಲವು ಕಡೆ ಬಂದಿದೆ. ಪ್ರಾಚೀನ ಸಮಾಜವನ್ನು ಅರ್ಥಮಾಡಿಕೊಂಡು ಸಾಂಸ್ಕೃತಿಕ ಮಹತ್ವವನ್ನು ಗ್ರಹಿಸಲು ಇರುವ ಆಕರಗಳಲ್ಲಿ ಶಾಸನ ಸಾಹಿತ್ಯವೂ ಒಂದಾಗಿದೆ.


ಪ್ರಶ್ನೆ – 13: ಜೀವನ ಮೌಲ್ಯಗಳಾದ ಸತ್ಯ, ಪ್ರೇಮ, ಅಹಿಂಸೆ, ತ್ಯಾಗ, ನಿಸ್ವಾರ್ಥ ಸೇವೆ ಮೊದಲಾದ ಮೌಲ್ಯಗಳನ್ನು ಪ್ರತಿಪಾದಿಸುವ ಪಾಠಗಳಿವೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 13

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	32	11	7
ಶೇಕಡಾ	64	22	14

ಆಲೇಖ – 13



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 64ರಷ್ಟು, ಭಾಗಶಃ ಎಂಬುದಕ್ಕೆ ಶೇ. 22ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 14 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದುಬರುವುದೇನೆಂದರೆ ಪ್ರೌಢ ಶಾಲಾ ಹಂತದ ಪ್ರಥಮ – ದ್ವಿತೀಯ – ತೃತೀಯ ಕನ್ನಡ ಭಾಷಾ ಪಠ್ಯಪುಸ್ತಕಗಳಲ್ಲಿ ಜೀವನ ಮೌಲ್ಯಗಳನ್ನು ಪ್ರತಿಪಾದಿಸುವಲ್ಲಿ ಸಫಲವಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಜೀವನದ ಬಗ್ಗೆ ಗೌರವ ಭಾವವನ್ನು ಪಡೆಯುವುದಕ್ಕೆ. ಜೀವನದಲ್ಲಿ ಮೌಲ್ಯಗಳ ಅಗತ್ಯತೆಯನ್ನು ಪ್ರತಿಪಾದಿಸಲಿಕ್ಕೆ ಮೌಲ್ಯಗಳ ಸಂವರ್ಧನೆಗೆ ಅನುವು ಮಾಡಿಕೊಡಬೇಕಿದೆ.


ಪ್ರಶ್ನೆ – 14: ಜನಪದ ಸಾಹಿತ್ಯದ ವಿವಿಧ ಪ್ರಕಾರಗಳಾದ ಜನಪದ ಗೀತೆ, ಕತೆ, ಗಾದೆ, ಒಗಟು ಮತ್ತು ಲಾವಣಿಗಳು ಸಮರ್ಪಕವಾಗಿ ಮೂಡಿ ಬಂದಿವೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 14

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	44	6	0
ಶೇಕಡಾ	88	12	0

ಆಲೇಖ – 14



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 88ರಷ್ಟು, ಭಾಗಶಃ ಎಂಬುದಕ್ಕೆ ಶೇ. 12ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 0 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದುಬರುವುದೇನೆಂದರೆ ಭಾಷಾ ಪಠ್ಯಪುಸ್ತಕವು ಕನ್ನಡ ಸಾಹಿತ್ಯದಲ್ಲಿ ಜನಪದ ಸಾಹಿತ್ಯದ ವಿವಿಧ ಪ್ರಕಾರಗಳು ಸಮರ್ಪಕವಾಗಿ ಮೂಡಿಬಂದಿವೆ. ಇದರಿಂದ ವಿದ್ಯಾರ್ಥಿಗಳು ವಸ್ತು ವಿಷಯವನ್ನು ಸುಲಭವಾಗಿ ಮತ್ತು ನಿಖರವಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಜನಪದ ಸಾಹಿತ್ಯವು ಸಾಮೂಹಿಕ ಜೀವನಕ್ಕೆ, ಗ್ರಾಮೀಣ ಸಂಸ್ಕೃತಿಗೆ ಹಿಡಿದ ಕನ್ನಡಿಯಂತಿದೆ.


ಪ್ರಶ್ನೆ – 15: ಭಾಷಾ ಕಲಿಕೆ ಮತ್ತು ಜ್ಞಾನ ಸಂವರ್ಧನೆಗೆ ಅವಕಾಶ ಮಾಡಿಕೊಡಲಾಗಿದೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 15

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	40	8	2
ಶೇಕಡಾ	80	16	4

ಆಲೇಖ – 15



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 80ರಷ್ಟು, ಭಾಗಶಃ ಎಂಬುದಕ್ಕೆ ಶೇ. 16ರಷ್ಟು ಮತ್ತು** ಇಲ್ಲ **ಎಂಬುದಕ್ಕೆ ಶೇ. 04 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದುಬರುವುದೇನೆಂದರೆ ಭಾಷಾ ಪಠ್ಯಪುಸ್ತಕವು ಭಾಷಾ ಕಲಿಕೆಗೆ ನೆರವಾಗುವ ವಿಷಯ ವಸ್ತುವನ್ನು ಒಳಗೊಂಡಿದೆ. ಇದರಿಂದ ವಿದ್ಯಾರ್ಥಿಗಳು ಜ್ಞಾನವನ್ನು ವೃದ್ಧಿಸಿಕೊಂಡು ಸ್ಪಷ್ಟವಾದ ಅರಿವು ಮೂಡುತ್ತದೆ. ಮಿತ್ರರೊಂದಿಗೆ ಚರ್ಚೆಯ ಮೂಲಕ ಅವರ ಅಭಿವ್ಯಕ್ತಿ ಹಾಗೂ ಸಂವಹನ ಕೌಶಲಗಳ ಸಂವರ್ಧನೆಯೇ ಭಾಷಾ ಕಲಿಕೆಯ ಗುರಿ. ತನ್ಮೂಲಕ ಜ್ಞಾನ ಸಂವರ್ಧನೆಯಾಗಿ, ಕಲಿತುದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಶಕ್ತಿಯನ್ನು ಮಕ್ಕಳಲ್ಲಿ ವೃದ್ಧಿ ಮಾಡುತ್ತದೆ.


ಪ್ರಶ್ನೆ – 16: ಭಾಷಾ ಸಾಮರ್ಥ್ಯಗಳನ್ನು ಕ್ಷೇತ್ರಗಳಿಗನುಗುಣವಾಗಿ ಅನ್ವಯಿಸಿ ಸಮರ್ಥ ಕಲಿಕೆಗೆ ಅನುವಾಗುವಂತೆ ಪಠ್ಯವಸ್ತುಗಳಲ್ಲಿ ಅಳವಡಿಸಲಾಗಿದೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 16

ಅಭಿಪ್ರಾಯ	**ಹೌದು**	**ಭಾಗಶಃ**	**ಇಲ್ಲ**
ತಲಾವಾರು	19	30	1
ಶೇಕಡಾ	38	60	02

ಆಲೇಖ – 16



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 38ರಷ್ಟು, ಭಾಗಶಃ ಎಂಬುದಕ್ಕೆ ಶೇ. 60ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 02 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದುಬರುವುದೇನೆಂದರೆ ಭಾಷಾ ಸಾಮರ್ಥ್ಯಗಳನ್ನು ಕ್ಷೇತ್ರಗಳಿಗೆ ಅನ್ವಯಿಸಿ ಸಮರ್ಥ ಕಲಿಕೆ ಎಂದರೆ ಅರ್ಥಪೂರ್ಣವಾದ ಕಲಿಕೆಯನ್ನುಂಟು ಮಾಡುವಲ್ಲಿ ಸಮರ್ಥವಾಗಿವೆ. ಪ್ರಾಥಮಿಕ ಶಾಲಾ ಪಠ್ಯಪುಸ್ತಕಗಳಲ್ಲಿ ಇದು ಚೆನ್ನಾಗಿ ಮೂಡಿ ಬಂದಿದೆ. ಆದರೆ ಪ್ರೌಢಶಾಲಾ ಹಂತದ ಪಠ್ಯಪುಸ್ತಕಗಳಲ್ಲಿ ಇದು ಅಷ್ಟೊಂದು ಸಮರ್ಪಕವಾಗಿಲ್ಲ.


ಪ್ರಶ್ನೆ – 17: ಸಾಮಾಜಿಕ, ಸಾಂಸ್ಕೃತಿಕ, ಪ್ರಾದೇಶಿಕ ಮತ್ತು ಲಿಂಗ ಸಮಾನತೆಯನ್ನು ಕಾಯ್ದುಕೊಂಡಿದೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 17

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	45	4	1
ಶೇಕಡಾ	90	8	2

ಆಲೇಖ – 17



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 90ರಷ್ಟು, ಭಾಗಶಃ ಎಂಬುದಕ್ಕೆ ಶೇ. 8ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 02 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದುಬರುವುದೇನೆಂದರೆ ಕನ್ನಡ ಭಾಷಾ ಪಠ್ಯಪುಸ್ತಕ ನಿರ್ದೇಶನಾಲಯವು ಹಾಕಿಕೊಂಡ ಗುರಿ – ಉದ್ದೇಶಗಳನ್ನು ಈಡೇರಿಸುತ್ತಾ ಸಾಮಾಜಿಕ – ಸಾಂಸ್ಕೃತಿಕ – ಪ್ರಾದೇಶಿಕ – ಲಿಂಗ ಸಮಾನತೆಯನ್ನು ಕಾಯ್ದುಕೊಳ್ಳುವಲ್ಲಿ ಸಫಲವಾಗಿದೆ. ಇದರಿಂದ ವಿದ್ಯಾರ್ಥಿಗಳು ಎಲ್ಲಾ ರೀತಿಯಿಂದಲೂ ಅಭಿವೃದ್ಧಿ ಹೊಂದಲು ಅವಕಾಶ ಸಿಗುತ್ತದೆ ಎಂಬುದು ಗೊತ್ತಾಗುತ್ತದೆ.


ಪ್ರಶ್ನೆ – 18: ಪ್ರಸ್ತುತ ಪಠ್ಯವಸ್ತುವಿನಲ್ಲಿ ಸ್ವ–ಕಲಿಕೆ ಹಾಗೂ ಬೋಧನಾ ಕೌಶಲಕ್ಕೆ ಸೂಕ್ತವಾಗಿದೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 18

ಅಭಿಪ್ರಾಯ	**ಹೌದು**	**ಭಾಗಶಃ**	**ಇಲ್ಲ**
ತಲಾವಾರು	28	18	4
ಶೇಕಡಾ	56	36	8

ಆಲೇಖ – 18



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 56ರಷ್ಟು, ಭಾಗಶಃ ಎಂಬುದಕ್ಕೆ ಶೇ. 36ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 08 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದುಬರುವುದೇನೆಂದರೆ ಪ್ರಸ್ತುತ ಪಠ್ಯವಸ್ತುವಿನಲ್ಲಿ ಸ್ವ–ಕಲಿಕೆಗೆ ಅನುಕೂಲವಾಗುವಂತಹ ಪಠ್ಯವಸ್ತು ಇದ್ದು, ಬೋಧನಾ ಕೌಶಲ್ಯಕ್ಕೆ ಸೂಕ್ತವಾಗಿದೆ. ಭಾಷೆಯ ಮೂಲಕ ಮಕ್ಕಳು ಮಾತು, ಮನಸ್ಸು ಭಾವನೆ ಆಲೋಚನೆಗಳಿಂದ ವ್ಯಕ್ತಿತ್ವ ವಿಕಾಸವಾಗುತ್ತದೆ.


ಪ್ರಶ್ನೆ – 19: ಕಲಿಕಾರ್ಥಿಗಳ ಆಸಕ್ತಿ ಮತ್ತು ಉಲ್ಲಾಸವನ್ನು ಹೆಚ್ಚಿಸುವ ಉದ್ದೇಶದಿಂದ ರಚಿಸಿರುವ ಪಾಠಗಳಲ್ಲಿ ವೈವಿಧ್ಯತೆ ಇದೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 19

ಅಭಿಪ್ರಾಯ	**ಹೌದು**	**ಭಾಗಶಃ**	**ಇಲ್ಲ**
ತಲಾವಾರು	32	17	1
ಶೇಕಡಾ	64	34	2

ಆಲೇಖ – 19



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 64ರಷ್ಟು, ಭಾಗಶಃ ಎಂಬುದಕ್ಕೆ ಶೇ. 34ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 02 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದುಬರುವುದೇನೆಂದರೆ ವಿದ್ಯಾರ್ಥಿಗಳ ಆಸಕ್ತಿ ಮತ್ತು ಉಲ್ಲಾಸವನ್ನು ಹೆಚ್ಚಿಸುವ ಕಥೆ–ಕವನಗಳು ಪೂರಕವಾಗಿದ್ದು ಪಾಠಗಳಲ್ಲಿ ವೈವಿಧ್ಯತೆ ಇದ್ದು ಇದರಿಂದ ಮಕ್ಕಳು ಉಲ್ಲಾಸಭರಿತವಾಗಿ ಕಲಿಯುವರು.


ಪ್ರಶ್ನೆ – 20: ಬೋಧನೆ ಹಾಗೂ ಭಾಷಾ ಕಲಿಕೆಯ ಭಾಗಗಳನ್ನು ಅರ್ಥೈಸಿಕೊಳ್ಳಲು ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಕ್ರಿಯಾತ್ಮಕ ಭಾಷಿಕ ಕ್ರಮಗಳನ್ನು ವ್ಯವಸ್ಥಿತವಾಗಿ ಅಳವಡಿಸಲಾಗಿದೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 20

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	43	5	2
ಶೇಕಡಾ	86	10	4

ಆಲೇಖ – 20



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 86ರಷ್ಟು, ಭಾಗಶಃ ಎಂಬುದಕ್ಕೆ ಶೇ. 10ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 04 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದುಬರುವುದೇನೆಂದರೆ ಕನ್ನಡ ಭಾಷಾ ಪಠ್ಯಪುಸ್ತಕವು ವ್ಯಾಕರಣದ ವಿವಿಧ ಅಂಶಗಳನ್ನು ಒಳಗೊಂಡಿರುವುದು ಸ್ಪಷ್ಟವಾಗುತ್ತದೆ. ವ್ಯಾಕರಣ ಜ್ಞಾನವನ್ನು ವಿದ್ಯಾರ್ಥಿಗಳಿಗೆ ತಿಳಿಸುವುದರಿಂದ, ವಿದ್ಯಾರ್ಥಿಗಳ ವಾಕ್ಯಗಳ, ಪದಗಳ, ಕಾಲಗಳ, ನಿಯಮ, ಕ್ರಮಬದ್ಧತೆ ಬಗ್ಗೆ ಸ್ಪಷ್ಟವಾದ ಅರಿವು ಮೂಡುತ್ತದೆ.

ಪ್ರಶ್ನೆ – 21: ಭಾಷಾ ಹಾಗೂ ಜ್ಞಾನ ಗ್ರಹಿಕೆಗೆ ಸಂಬಂಧಿಸಿದಂತೆ ಸೂಕ್ತ ಅಭ್ಯಾಸ, ಭಾಷಾಭ್ಯಾಸ ಮತ್ತು ಚಟುವಟಿಕಾ ಮಾದರಿಗಳನ್ನು, ನಮೂನೆಗಳನ್ನು ಸಮರ್ಪಕವಾಗಿ ನೀಡಿದ್ದಾರೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 21

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	14	21	15
ಶೇಕಡಾ	28	42	30

ಆಲೇಖ – 21



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 28ರಷ್ಟು, ಭಾಗಶಃ ಎಂಬುದಕ್ಕೆ ಶೇ. 42ರಷ್ಟು ಮತ್ತು** ಇಲ್ಲ **ಎಂಬುದಕ್ಕೆ ಶೇ. 30 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದುಬರುವುದೇನೆಂದರೆ ಭಾಷಾ ಹಾಗೂ ಜ್ಞಾನಗ್ರಹಿಕೆಗೆ ಸಂಬಂಧಿಸಿದಂತೆ ಸೂಕ್ತ ಅಭ್ಯಾಸ, ಭಾಷಾಭ್ಯಾಸಗಳು ಸಮರ್ಪಕವಾಗಿವೆ. ಆದರೆ ಚಟುವಟಿಕಾ ಮಾದರಿಗಳು, ನಮೂನೆಗಳು ಸಮರ್ಪಕವಾಗಿಲ್ಲ. ಇವೆಲ್ಲವೂ ಸಮರ್ಪಕವಾಗಿದ್ದರೆ, ವಿದ್ಯಾರ್ಥಿಗಳ ಕಲಿಕೆಗೆ ಸಹಾಯಕವಾಗಿದೆ.


ಪ್ರಶ್ನೆ – 22: ಸಾಹಿತ್ಯ ಪ್ರಕಾರ, ಭಾಷಾ ಕ್ರಿಯಾತ್ಮಕ ವಿಚಾರ, ಅವಸ್ಥಾ ಘಟಕಾಂಶ ಬೋಧನಾ ಆಶಯದ ಮಾಹಿತಿಗಳನ್ನು ಒಳಗೊಂಡಿದೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 22

ಅಭಿಪ್ರಾಯ	**ಹೌದು**	**ಭಾಗಶಃ**	**ಇಲ್ಲ**
ತಲಾವಾರು	23	26	1
ಶೇಕಡಾ	46	52	2

ಆಲೇಖ – 22



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 46ರಷ್ಟು, ಭಾಗಶಃ ಎಂಬುದಕ್ಕೆ ಶೇ. 52ರಷ್ಟು ಮತ್ತು** ಇಲ್ಲ **ಎಂಬುದಕ್ಕೆ ಶೇ. 02 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದುಬರುವುದೇನೆಂದರೆ ಇವೆಲ್ಲವುಗಳನ್ನು ಆಧರಿಸಿಯೇ ಪಠ್ಯಪುಸ್ತಕಗಳನ್ನು ರಚನಾ ಸಮಿತಿಯವರು ಪಠ್ಯವಸ್ತುವನ್ನು ಹೊಂದಿಸಿ ಸಂಯೋಜನೆ ಮಾಡುತ್ತಾರೆ. ಕಲಿಯುವ ಕ್ರಮಕ್ಕೆ ಒಪ್ಪುವಂತೆ ವ್ಯವಸ್ಥೆಗೊಳಿಸಲಾಗಿರುತ್ತದೆ.


ಪ್ರಶ್ನೆ – 23: ಪಠ್ಯಪುಸ್ತಕದಲ್ಲಿರುವ ಗದ್ಯಪಾಠಗಳಲ್ಲಿ ಅವಶ್ಯಕ ನಿದರ್ಶನ, ಹೋಲಿಕೆಗಳು, ವ್ಯತ್ಯಾಸಗಳು ಹಾಗೂ ಚಟುವಟಿಕೆಗಳನ್ನು ಕುರಿತ ಸೂಚನೆಗಳಿವೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 23

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	14	21	15
ಶೇಕಡಾ	28	42	30

ಆಲೇಖ – 23



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 28ರಷ್ಟು, ಭಾಗಶಃ ಎಂಬುದಕ್ಕೆ ಶೇ. 42ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 30 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದುಬರುವುದೇನೆಂದರೆ ಮಕ್ಕಳೆ ಸ್ವಯಂ ಅಧ್ಯಯನ ಮಾಡಿ ಅಭ್ಯಾಸಗಳು ಮತ್ತು ಪ್ರಶ್ನೆಗಳ ಮೂಲಕ ತಾವೇ ಕಲಿಯಲು ಅನುಕೂಲವಾಗುವ ಸ್ವರೂಪದಲ್ಲಿ ರಚಿಸಿರುವ ಕಲಿಕಾ ಸಾಮಗ್ರಿಯೇ ಈ ಪಠ್ಯಪುಸ್ತಕ.


ಪ್ರಶ್ನೆ – 24: ನಾಡು-ನುಡಿಗಳ ಬಗ್ಗೆ ಅಭಿಮಾನವನ್ನು ಮೂಡಿಸುವ ಮಹಾನ್ ವ್ಯಕ್ತಿಗಳ ಜೀವನದ ಮಾಹಿತಿಗಳನ್ನು ಒಳಗೊಂಡಿದೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 24

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	39	9	2
ಶೇಕಡಾ	78	18	4

ಅಲೇಖ – 24



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 78ರಷ್ಟು, ಭಾಗಶಃ ಎಂಬುದಕ್ಕೆ ಶೇ. 18ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 04 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದು ಬರುವುದೇನೆಂದರೆ ಕನ್ನಡ ಭಾಷೆ ಮತ್ತು ಸಾಹಿತ್ಯ ಬೆಳೆದು ಬಂದ ದಾರಿಯನ್ನು ತಿಳಿಯಲು ಆಸಕ್ತಿ ಹೊಂದಿ, ಕನ್ನಡ ಭಾಷೆ, ಸಾಹಿತ್ಯ, ಜನಪರ ಸಂಗೀತ, ಸಾಹಿತ್ಯ ಸಾಂಸ್ಕೃತಿಕ ಉತ್ಸವದಲ್ಲಿ ಭಾಗಿಯಾಗಿ ನಾಡಿನ ಪ್ರವಾಸಿ ತಾಣಗಳ ಬಗ್ಗೆ, ಕನ್ನಡ ನಾಡಿನ ಹೆಸರಾಂತ ಕವಿಗಳ – ಲೇಖಕರ ಮಾಹಿತಿ ಸಂಗ್ರಹಿಸುವರು.


ಪ್ರಶ್ನೆ – 25: ಪಠ್ಯಪುಸ್ತಕಗಳಲ್ಲಿ ಭಾಷಾ ಬಳಕೆಯು ಸರಳ ಮತ್ತು ಸ್ಪಷ್ಟವಾಗಿದೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 25

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	43	6	1
ಶೇಕಡಾ	86	12	2

ಆಲೇಖ – 25



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 86ರಷ್ಟು, ಭಾಗಶಃ ಎಂಬುದಕ್ಕೆ ಶೇ. 12ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 02 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ಮನುಷ್ಯ ಮಾತನಾಡುವುದನ್ನು ಕಲಿತಾಗಲೇ ಭಾಷೆಯು ಸಮರ್ಪಕವಾಗಿ ಮೂಡಿ ಬರುತ್ತದೆ. ಭಾಷಾ ಕೌಶಲಗಳ ರಚನೆ ಮತ್ತು ಪ್ರಯೋಗವನ್ನು ಶಾಲಾ ಹಂತದಲ್ಲಿ ಅರಿತು ಪ್ರೌಢ ಹಂತದ ಪಠ್ಯಪುಸ್ತಕಗಳಿಂದ ಸರಳ ಹಾಗೂ ಸ್ಪಷ್ಟವಾದ ಮಾಹಿತಿ ಪಡೆಯುವರು.


ಪ್ರಶ್ನೆ – 26: ಪಠ್ಯಪುಸ್ತಕಗಳಲ್ಲಿ ರಾಷ್ಟ್ರೀಯ ಮೌಲ್ಯಗಳನ್ನು ಪ್ರತಿಬಿಂಬಿಸುವ ಸಂದೇಶಗಳನ್ನು ಮುದ್ರಿಸಲಾಗಿದೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 26

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	26	21	3
ಶೇಕಡಾ	52	42	6

ಆಲೇಖ – 26



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 52ರಷ್ಟು, ಭಾಗಶಃ ಎಂಬುದಕ್ಕೆ ಶೇ. 42ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 06 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದು ಬರುವುದೇನೆಂದರೆ ರಾಷ್ಟ್ರೀಯ ಶಿಕ್ಷಣ ನೀತಿಯು ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆ ಹಾಗೂ ರಾಷ್ಟ್ರೀಯ ಪಠ್ಯಕ್ರಮದ ಅಳವಡಿಕೆಯನ್ನು ಸಲಹೆ ಮಾಡಿದೆ. ಈ ಹಿನ್ನಲೆಯಲ್ಲಿ ರಾಷ್ಟ್ರೀಯ ಪಠ್ಯಕ್ರಮದಲ್ಲಿ ಭಾರತದ ಇಂದಿನ ಮತ್ತು ನಾಳಿನ ಅಗತ್ಯತೆ, ಆಶಯಗಳನ್ನು ಒಳಗೊಂಡಿದೆ.


ಪ್ರಶ್ನೆ – 27: ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ಮತ್ತು ಕೆ.ಸಿ.ಎಫ್ 2007 ರ ನೀತಿ ನಿಯಮಗಳನ್ನು ಒಳಗೊಂಡಿದೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 27

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	35	10	5
ಶೇಕಡಾ	70	20	10

ಆಲೇಖ – 27



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 70ರಷ್ಟು, ಭಾಗಶಃ ಎಂಬುದಕ್ಕೆ ಶೇ. 20ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 10 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದು ಬರುವುದೇನೆಂದರೆ 2005 ರ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿಗೆ ಅನುಗುಣವಾಗಿ 2010ನೇ ಸಾಲಿನಿಂದ ಈ ನಿಯಮಗಳನ್ನು ಒಳಗೊಂಡು ಪರಿಷ್ಕೃತ ಪಠ್ಯಪುಸ್ತಕಗಳನ್ನು ರಚಿಸಲಾಗಿದೆ.


ಪ್ರಶ್ನೆ – 28: ಪಠ್ಯಪುಸ್ತಕ ಕೇವಲ ಪರೀಕ್ಷಾ ದೃಷ್ಟಿಯಿಂದ ಕೂಡಿದೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 28

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	17	3	15
ಶೇಕಡಾ	60	34	6

ಆಲೇಖ – 28



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 60ರಷ್ಟು, ಭಾಗಶಃ ಎಂಬುದಕ್ಕೆ ಶೇ. 34ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 6 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದು ಬರುವುದೇನೆಂದರೆ ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾಪೂರಕ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಭಾರತದ ಉತ್ತಮ ನಾಗರಿಕರನ್ನಾಗಿ ಮಾಡುವ ಪ್ರಯತ್ನ ನಡೆದಿದೆ.


ಪ್ರಶ್ನೆ – 29: ಪ್ರಸ್ತುತ ಪಠ್ಯಪುಸ್ತಕಗಳಿಂದ ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಕೌಶಲ್ಯ ಬೆಳೆಸಬಹುದೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 29

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	31	17	2
ಶೇಕಡಾ	62	34	4

ಆಲೇಖ – 29



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 62ರಷ್ಟು, ಭಾಗಶಃ ಎಂಬುದಕ್ಕೆ ಶೇ. 34ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 04 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದುಬರುವುದೇನೆಂದರೆ ಕನ್ನಡ ಭಾಷಾ ಪಠ್ಯಪುಸ್ತಕಗಳು ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಕೌಶಲ್ಯ ಬೆಳೆಸುವಲ್ಲಿ ಯಶಸ್ವಿಯಾಗಿದೆ ಎಂಬುದು ಸ್ಪಷ್ಟವಾಗಿದೆ. ಇದರಿಂದ ವಿದ್ಯಾರ್ಥಿಗಳು ವಿಮರ್ಶೆ, ಸೃಜನಶೀಲತೆಯನ್ನು ಹೆಚ್ಚಿಸಿಕೊಳ್ಳುವಲ್ಲಿ ಹಾಗೂ ಅನೇಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಪಠ್ಯಪುಸ್ತಕದಲ್ಲಿರುವ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿವೆ.


ಪ್ರಶ್ನೆ – 30: ಪಠ್ಯಪುಸ್ತಕದಲ್ಲಿನ ಚಿತ್ರಗಳು ಮಕ್ಕಳಿಗೆ ಸುಲಭವಾಗಿ ಅರ್ಥವಾಗುವಂತಿವೆಯೇ?

ಈ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೋಷ್ಟಕ – 30

ಅಭಿಪ್ರಾಯ	ಹೌದು	ಭಾಗಶಃ	ಇಲ್ಲ
ತಲಾವಾರು	18	15	2
ಶೇಕಡಾ	36	60	4

ಆಲೇಖ – 30



ಈ ಮೇಲಿನ ಪ್ರಶ್ನೆಗೆ ಕನ್ನಡ ಭಾಷಾ ಶಿಕ್ಷಕರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಶೇಕಡಾವಾರು ಕೋಷ್ಟಕ ಮತ್ತು ಆಲೇಖದ ಮೂಲಕ ನೋಡಲಾಗಿ **ಹೌದು ಎಂಬುದಕ್ಕೆ ಶೇ. 36ರಷ್ಟು, ಭಾಗಶಃ ಎಂಬುದಕ್ಕೆ ಶೇ. 60ರಷ್ಟು ಮತ್ತು ಇಲ್ಲ ಎಂಬುದಕ್ಕೆ ಶೇ. 04 ರಷ್ಟು** ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದರಿಂದ ತಿಳಿದು ಬರುವುದೇನೆಂದರೆ ಪಠ್ಯಪುಸ್ತಕದಲ್ಲಿ ಇರುವ ಚಿತ್ರಗಳು ಕಪ್ಪುಬಣ್ಣದಿಂದ ಕೂಡಿವೆ. ಕೆಲವು ಚಿತ್ರಗಳು ಸಮರ್ಪಕವಾಗಿ ಅರ್ಥವಾಗುವಂತಿದ್ದರೂ, ಬಣ್ಣ–ಬಣ್ಣದಿಂದ ಕೂಡಿದ್ದರೆ ಮಕ್ಕಳಿಗೆ ಸುಲಭವಾಗಿ ಅರ್ಥವಾಗುತ್ತಿದ್ದವು.

4.3 ಅಧ್ಯಯನದಿಂದ ಕಂಡುಬಂದ ಫಲಿತಾಂಶಗಳು

1ನೆಯ ಉದ್ದೇಶದ ಫಲಿತಾಂಶಗಳು

1. 8, 9, 10ನೇ ವರ್ಗದ ಭಾಷಾ ಪಠ್ಯಪುಸ್ತಕದ ಮೂಲಕ ಗದ್ಯ ಭಾಗವು ಸರಳವಾಗಿ ಮಕ್ಕಳನ್ನು ಓದಿಸಿಕೊಂಡು ಹೋಗಿ ಓದುಗಾರಿಕೆಯ ಸಾಮರ್ಥ್ಯ ಬೆಳೆಸುವುದಲ್ಲದೆ ತನ್ಮೂಲಕ ವಿಷಯ ಜ್ಞಾನವನ್ನು ಪಡೆಯಲು ಸಮರ್ಥರಾಗುತ್ತಾರೆಂಬುದು ಸ್ಪಷ್ಟವಾಗುತ್ತದೆ. ಅದರಂತೆ ಗದ್ಯಭಾಗವು ಓದುತ್ತಾ ಹೋದಂತೆ ಅಭಿರುಚಿಯನ್ನು ಬೆಳೆಸುವುದಲ್ಲದೆ, ಅದಕ್ಕೆ ಸಂಬಂಧಿಸಿದ ಪೂರಕ ಪುಸ್ತಕಗಳನ್ನು ಹೆಚ್ಚೆಚ್ಚು ಓದುವ ಅಭಿರುಚಿ ಬೆಳೆಸುವುದು.

2. ಪಠ್ಯದಲ್ಲಿ ಬಳಸುವ ಭಾಷಾ ಶೈಲಿ ಮಕ್ಕಳ ಮಾನಸಿಕ ವಿಕಾಸಕ್ಕೆ ಯೋಗ್ಯವೆನಿಸುವಂತಿರಬೇಕು. ಗದ್ಯದಲ್ಲಿಯೂ ಅನೇಕ ರೀತಿಯ ಪದಗಳು ಪ್ರಯೋಗಿಸಲ್ಪಡಬೇಕು. ಗದ್ಯವು ವಿದ್ಯಾರ್ಥಿಗಳಲ್ಲಿ ಶಬ್ದಭಂಡಾರವನ್ನು ಅಧಿಕಗೊಳಿಸುವ ಅಕ್ಷಯ ಪಾತ್ರೆಯಿದ್ದಂತೆ.

3. ಪಠ್ಯಪುಸ್ತಕವು ಮಕ್ಕಳನ್ನು ಮಾನವೀಯ ಮೌಲ್ಯಗಳ ಸಾಕಾರ ಮೂರ್ತಿಗಳನ್ನಾಗಿಸಲು ತನ್ನದೇ ಆದ ಅಳಿಲು ಸೇವೆ ಸಲ್ಲಿಸುವಂತಿದೆ. ಇದು ವಿದ್ಯಾರ್ಥಿಗಳಲ್ಲಿ ಸ್ವಾರ್ಥತ್ಯಾಗ, ಪ್ರೇಮ, ಅಹಿಂಸೆ, ದಯೆ ಮುಂತಾದ ಮಾನವೀಯ ಮೌಲ್ಯಗಳನ್ನು ಬೆಳೆಸುತ್ತದೆ.

4. ಪಾಠ ಬೆಳವಣಿಗೆಯ ಹಂತವು ಇಡೀ ಗದ್ಯ ಬೋಧನೆಯ ಜೀವಾಳವಿದ್ದಂತೆ. ಈ ಹಂತದಲ್ಲಿ ಮೊದಲು ಲೇಖಕನ ಸಂಕ್ಷಿಪ್ತ ಪರಿಚಯ ಮಾಡಿಕೊಡಬೇಕು. ಅವನ ಕಾಲ ಜೀವನ, ಕೃತಿ, ಸಾಧನೆಗಳ ಕುರಿತು ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಕೊಟ್ಟಂತಾಗುತ್ತದೆ.

5. ಪಠ್ಯಪುಸ್ತಕವು ಮಕ್ಕಳನ್ನು ವಿವಿಧ ರೀತಿಯ ಭಾಷಾಭ್ಯಾಸ ಚಟುವಟಿಕೆಗಳಲ್ಲಿ ತೊಡಗಿಸುವಲ್ಲಿ ಯಶಸ್ವಿಯಾಗಿದೆ. ಇದರಿಂದ ವಿದ್ಯಾರ್ಥಿಗಳಲ್ಲಿ ಭಾಷಾ ಸಾಮರ್ಥ್ಯ ಬೆಳೆಯುತ್ತದೆ.

6. ಭಾಷಾ ಪಠ್ಯಪುಸ್ತಕವು ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷೆಯ ಬಗೆಗೆ ಅಭಿಮಾನ, ಪ್ರೀತಿ ಆಸಕ್ತಿಯನ್ನು ಬೆಳೆಸುತ್ತದೆ. ಇದರಲ್ಲಿರುವ ಗದ್ಯಪಾಠಗಳು ಕನ್ನಡ ಭಾಷೆಯ ಇತಿಹಾಸಗಳನ್ನು ಪ್ರತಿಬಿಂಬಿಸುತ್ತವಲ್ಲದೆ ಅದರ ಹಿರಿಮೆಯನ್ನು ತಿಳಿಸುತ್ತದೆ.

2ನೆಯ ಉದ್ದೇಶದ ಫಲಿತಾಂಶಗಳು

1. ಪಠ್ಯಪುಸ್ತಕವು ವಿದ್ಯಾರ್ಥಿಗಳಲ್ಲಿ ಗಾಯನ ಕಲೆ ಸಾಮರ್ಥ್ಯವನ್ನು ಬೆಳೆಸುವಲ್ಲಿ ಸಫಲವಾಗಿದೆ. ಇದರಿಂದ ವಿದ್ಯಾರ್ಥಿಗಳು ಉತ್ತಮ ಗಾಯಕರಾಗಲು ಸೂಕ್ತ ತರಬೇತಿ ದೊರೆಯುತ್ತದೆ. ವಚನ, ಜನಪದ ಗೀತೆ, ತ್ರಿಪದಿಗಳನ್ನು ಸುಶ್ರಾವ್ಯವಾಗಿ ಹಾಡಲು ಸಾಧ್ಯವಿದೆ.

2. ಭಾಷಾ ಪಠ್ಯಪುಸ್ತಕವು ಕನ್ನಡ ನಾಡು ನುಡಿಯ ಮಹತ್ವ, ವೈಶಿಷ್ಟತೆಯನ್ನು ಎತ್ತಿ ಹಿಡಿದಿದೆ. ಕನ್ನಡ ನಾಡುನುಡಿಯ ಶ್ರೇಷ್ಠತೆ ಹಿರಿಮೆ-ಗರಿಮೆಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುವುದರ ಮೂಲಕ ಅವರಲ್ಲಿ ಕನ್ನಡ ನಾಡು ನುಡಿಯ ಬಗ್ಗೆ ಅಭಿಮಾನ ಮತ್ತು ಗೌರವವನ್ನು ಬೆಳೆಸುತ್ತದೆ.

3. ಪಠ್ಯಪುಸ್ತಕವು ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳ ಜೀವನ ಸಾಧನೆಗಳನ್ನು, ಅವರು ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ತಿಳಿಸುವುದಕ್ಕೆ ಸಹಕಾರಿಯಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಕನ್ನಡದ ಶ್ರೇಷ್ಠ ಸಾಹಿತಿಗಳ ಪರಿಚಯವನ್ನು ಮಾಡಿಕೊಡಲು ಸಾಧ್ಯವಾಗಿದೆ.

4. ಪಠ್ಯಪುಸ್ತಕದಲ್ಲಿರುವ ನೈತಿಕ ಮೌಲ್ಯಗಳು ಜೀವನ ಮಾರ್ಗ ಕುರಿತು ಹೇಳುವಂತೆ, ಮಕ್ಕಳ ಭಾವನೆಗಳ ಉದಾತ್ತೀಕರಣಕ್ಕೆ ಸಹಾಯಕವಾಗುವಂತೆ ಇವೆ.

5. ಪಠ್ಯಪುಸ್ತಕವು ಪದ್ಯಗಳಲ್ಲಿರುವ ವಿಷಯಕ್ಕೆ ತಕ್ಕ ಸರಳವಾದ ಮತ್ತು ದಿನನಿತ್ಯದ ಜೀವನಕ್ಕೆ ಸಂಬಂಧಿಸಿದ ಘಟನೆಗಳ ಉದಾಹರಣೆಗಳನ್ನು ಒಳಗೊಂಡಿರುವುದರಿಂದ ವಿದ್ಯಾರ್ಥಿಗಳು ವಿಷಯವನ್ನು ಸರಿಯಾಗಿ ಗ್ರಹಿಸಲು ಸಾಧ್ಯವಾಗುತ್ತದೆ.

6. ಪಠ್ಯಪುಸ್ತಕದಲ್ಲಿರುವ ಎಲ್ಲಾ ಪದ್ಯಗಳಿಗೂ ಸೂಕ್ತವಾದ ತಲೆಬರಹವನ್ನು ನೀಡಲಾಗಿದೆ ಇದರಿಂದ ವಿದ್ಯಾರ್ಥಿಗಳು ಕೇವಲ ತಲೆಬರಹವನ್ನು ನೋಡಿಯೇ ಪದ್ಯದ ವಿಷಯ ವಸ್ತುವನ್ನು ತಿಳಿದುಕೊಳ್ಳಲು ಸಮರ್ಥರಾಗುವರು.

7. ಪಠ್ಯಪುಸ್ತಕದಲ್ಲಿ ಪದ್ಯದ ಕೊನೆಗೆ ಸಾರಾಂಶವನ್ನು ಸಾಕಷ್ಟು ಪ್ರಮಾಣದಲ್ಲಿ ನೀಡದಿರುವುದು ಕಂಡು ಬರುತ್ತದೆ. ಸಾರಾಂಶ ನೀಡಿದರೆ ವಿದ್ಯಾರ್ಥಿಗಳು ಕಠಿಣವಾದ ಹಳಗನ್ನಡ ಪದ್ಯಗಳನ್ನು, ನಡುಗನ್ನಡ ಪದ್ಯಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

3ನೆಯ ಉದ್ದೇಶದ ಫಲಿತಾಂಶಗಳು

1. ಪಠ್ಯಪುಸ್ತಕವು ಸರಳ ಮತ್ತು ಸ್ಪಷ್ಟವಾದ ಭಾಷಾ ಬಳಕೆಯನ್ನು ಒಳಗೊಂಡಿದೆ. ಇದರಿಂದ ವಿದ್ಯಾರ್ಥಿಗಳು ವಸ್ತು ವಿಷಯವನ್ನು ಸುಲಭವಾಗಿ ಮತ್ತು ನಿಖರವಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

2. ಪಠ್ಯಪುಸ್ತಕವು ಸಮರ್ಪಕವಾದ ಲೇಖನ ಚಿಹ್ನೆಗಳ ಬಳಕೆಯನ್ನು ಹೊಂದಿದೆ. ಭಾಷೆಯಲ್ಲಿ ಚಿಹ್ನೆಗಳಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ವಿದ್ಯಾರ್ಥಿಗಳಿಗೆ ವಾಕ್ಯದ ಸ್ಪಷ್ಟ ಅರ್ಥಕ್ಕೆ ಇವು ತುಂಬಾ ಸಹಾಯಕಾರಿ ಓದುವಾಗ ಬರೆಯುವಾಗ, ಮಾತನಾಡುವಾಗ ಎಲ್ಲಿ ನಿಲ್ಲಿಸಬೇಕೆಂದು ತಿಳಿಯುತ್ತದೆ.

3. ಪಠ್ಯಪುಸ್ತಕದಲ್ಲಿ ರಗಳೆ, ತ್ರಿಪದಿ ಮತ್ತು ಷಟ್ಪದಿಗಳನ್ನು ಪರಿಚಯಿಸಿರುವುದರಿಂದ ದೇಶೀ ಛಂದಸ್ಸಿನ ಪ್ರಕಾರಗಳಾದ ಇವುಗಳು ವಿದ್ಯಾರ್ಥಿಗಳಿಗೆ ವಿಷಯವನ್ನು ಅದರಲ್ಲೂ ಪದ್ಯಪಾಠಗಳನ್ನು ತಿಳಿಸಲು ತುಂಬಾ ಸಹಾಯಕಾರಿಯಾಗಿವೆ. ಏಕೆಂದರೆ ಪದ್ಯವು ಛಂದೋನಿಯಮಗಳಿಗೆ ಮತ್ತು ಕ್ರಮಬದ್ಧತೆಗೆ ಒಳಪಟ್ಟಿರುತ್ತದೆ.

4. 8, 9, 10ನೇ ವರ್ಗದ ಪಠ್ಯಪುಸ್ತಕದಲ್ಲಿ ಗಾದೆ ಮಾತುಗಳು ಹಾಗೂ ಒಗಟುಗಳ ಕೊರತೆಯು ಎದ್ದು ಕಾಣುತ್ತದೆ. ಗಾದೆ ಮಾತುಗಳು ಹಾಗೂ ಒಗಟುಗಳು ಗ್ರಾಮೀಣ ಜನರ ಜೀವನದ ವಿಧಾನವನ್ನು ಹಾಗೂ ಗೂಢಾರ್ಥವನ್ನು ಪ್ರತಿಬಿಂಬಿಸುವುದರಿಂದ ಅವುಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುವುದರ ಅವಶ್ಯಕತೆ ಇದೆ.

5. ಪಠ್ಯಪುಸ್ತಕವು ಸಂಧಿಗಳು, ಸಮಾಸಗಳು, ಹಾಗೂ ಅಲಂಕಾರಗಳನ್ನು ಒಳಗೊಂಡಿದೆ. ವ್ಯಾಕರಣ ಜ್ಞಾನದಿಂದ ಮಾತ್ರ ವಿದ್ಯಾರ್ಥಿಗಳಿಗೆ ಭಾಷೆಯ ರಚನೆ ಮತ್ತು ಪದ ಪ್ರಯೋಗವನ್ನು ಮಾಡಲು ಸುಲಭವಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳಿಗೆ ವ್ಯಾಕರಣದ ಜ್ಞಾನವನ್ನು ನೀಡುವಲ್ಲಿ ಪಠ್ಯಪುಸ್ತಕವು ಯಶಸ್ವಿಯಾಗಿದೆ.

6. ಭಾಷಾ ಪಠ್ಯಪುಸ್ತಕದಲ್ಲಿ **ಅನುಗಮನ** ಮತ್ತು **ನಿಗಮನ ಪದ್ಧತಿ**ಯನ್ನು ವ್ಯಾಕರಣ ಬೋಧನೆ ಮಾಡುವಾಗ ಉಪಯೋಗಿಸಲು ಅವಕಾಶವಿದೆ. ಈ ಎರಡು ಪದ್ಧತಿಗಳು ಅಂದರೆ ನಿಯಮದ ಮೂಲಕ ಉದಾಹರಣೆ ಮತ್ತು ಉದಾಹರಣೆಯ ಮೂಲಕ ನಿಯಮವನ್ನು ವಿದ್ಯಾರ್ಥಿಗಳಿಗೆ ತಿಳಿಸಲು ಬಹಳ ಉಪಯುಕ್ತವೂ ಪರಿಣಾಮಕಾರಿಯೂ ಆಗಿವೆ.

4ನೆಯ ಉದ್ದೇಶದ ಫಲಿತಾಂಶಗಳು

1. ಭಾಷಾ ಪಠ್ಯಪುಸ್ತಕವು ಸಾಹಿತ್ಯ ಬೋಧನೆಗೆ ಸಹಾಯಕವಾದ ಸಾಹಿತ್ಯದ ವಿವಿಧ ಪ್ರಕಾರಗಳಾದ ರಗಳೆ, ತ್ರಿಪದಿ, ವಚನಸಾಹಿತ್ಯ ಸಾಕಷ್ಟು ಪ್ರಮಾಣದಲ್ಲಿ ಮೂಡಿಬಂದಿದೆ.

2. ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಾದ ಕಾದಂಬರಿ, ಕಾವ್ಯ, ವ್ಯಕ್ತಿ ಚಿತ್ರಣ, ಆತ್ಮಕತೆ ಮೊದಲಾದ ಸಾಹಿತ್ಯ ಪ್ರಕಾರಗಳು ಸಮೃದ್ಧವಾಗಿ ಇರದೆ ಹೋದರೂ ಪರಿಚಯಾತ್ಮಕ ರೀತಿಯಲ್ಲಿವೆ.

3. ಕನ್ನಡ ಸಾಹಿತ್ಯದ ಶ್ರೀಮಂತ ಪರಂಪರೆ ಹಾಗೂ ನಾಡು-ನುಡಿಗಳ ಅಭಿಮಾನ ಮೂಡಿಸುವ ಸಾಹಿತ್ಯವು ವಿವಿಧ ಪ್ರಕಾರಗಳಲ್ಲಿ ಸಮರ್ಪಕವಾಗಿ ಬಂದಿದೆ.

4. ಪಠ್ಯಪುಸ್ತಕದಲ್ಲಿ ಕಡಿಮೆ ಪ್ರಮಾಣದಲ್ಲಿ ಚಿತ್ರಗಳನ್ನು ನೀಡಿದ್ದು, ಅವುಗಳು ಮಕ್ಕಳಿಗೆ ಸುಲಭವಾಗಿ ಅರ್ಥವಾಗುವಂತೆ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಪಠ್ಯಪುಸ್ತಕದಲ್ಲಿ ವರ್ಣದ ಹೆಚ್ಚಿನ

ಚಿತ್ರಗಳನ್ನು ಅರ್ಥವಾಗುವ ಹಾಗೆ ಮುದ್ರಿಸಿದರೆ ವಿದ್ಯಾರ್ಥಿಗಳು ಪರಿಕಲ್ಪನೆಯನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

5ನೆಯ ಉದ್ದೇಶದ ಫಲಿತಾಂಶಗಳು

1. ಪಠ್ಯಪುಸ್ತಕದಲ್ಲಿರುವ ಗದ್ಯ ಹಾಗೂ ಪದ್ಯ ಪಾಠಗಳು ಭಾಗಶಃ ಮಕ್ಕಳ ಕಲಿಕಾ ಮಟ್ಟಕ್ಕೆ ಅನುಗುಣವಾಗಿದೆ ಎಂಬುದು ಕಂಡು ಬರುತ್ತದೆ. ಗದ್ಯ ಹಾಗೂ ಪದ್ಯಪಾಠಗಳು ಮಕ್ಕಳ ಕಲಿಕಾ ಮಟ್ಟಕ್ಕೆ ಅನುಗುಣವಾಗಿ ರಚನೆಯಾಗಬೇಕಿದೆ. ಇದರಿಂದ ವಿದ್ಯಾರ್ಥಿಗಳು ಸುಲಭವಾಗಿ ವಿಷಯವಸ್ತುವನ್ನು ತಿಳಿದುಕೊಳ್ಳಲು ಸಾಧ್ಯವಿದೆ.

2. ಪಠ್ಯಪುಸ್ತಕ ಕೇವಲ ಪರೀಕ್ಷಾ ದೃಷ್ಟಿಯಿಂದ ಕೂಡಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಪಠ್ಯಪುಸ್ತಕವು ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ರಚನೆಯಾಗಿದೆ.

3. ಕನ್ನಡ ಭಾಷಾ ಪಠ್ಯಪುಸ್ತಕವು ವಿದ್ಯಾರ್ಥಿಗಳಲ್ಲಿ ವಿಚಾರವಂತಿಕೆ, ವಿಮರ್ಶೆ, ಸೃಜನಶೀಲತೆಯನ್ನು ಬೆಳೆಸುವಲ್ಲಿ ಯಶಸ್ವಿಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಇದರಿಂದ ವಿದ್ಯಾರ್ಥಿಗಳು ವಿವಿಧ ಕೌಶಲ್ಯಗಳನ್ನು ಬೆಳೆಸಿಕೊಳ್ಳುವುದಲ್ಲದೆ ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ.

4. ಪಠ್ಯಪುಸ್ತಕದಲ್ಲಿ ವಿಷಯವು ವಿದ್ಯಾರ್ಥಿಗಳ ಬೌದ್ಧಿಕ ಮತ್ತು ಕಲಿಕಾ ಸಾಮರ್ಥ್ಯದ ಮೇಲೆ ರಚಿತವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಇದರಿಂದ ವಿದ್ಯಾರ್ಥಿಗಳು ವಿಷಯವನ್ನು ನಿಖರವಾಗಿ ಕಲಿಯಲು ಮತ್ತು ಭಾಷೆಯ ಬಗೆಗೆ ಪ್ರಭುತ್ವ ಹೊಂದಲು ಸಾಧ್ಯವಾಗುತ್ತದೆ.

5. ಭಾಷಾ ಪಠ್ಯಪುಸ್ತಕದಲ್ಲಿ, ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಕಡಿಮೆ ಪ್ರಮಾಣದಲ್ಲಿ ಸೂಚನೆಗಳನ್ನು ನೀಡಲಾಗಿದೆ ಅವಶ್ಯಕ ಸೂಚನೆಗಳು ಪಠ್ಯಪುಸ್ತಕದಲ್ಲಿದ್ದರೆ ಶಿಕ್ಷಕರಿಗೆ ವಿಷಯವನ್ನು ಪರಿಣಾಮಕಾರಿಯಾಗಿ ಬೋಧಿಸಲು ಹಾಗೂ ವಿದ್ಯಾರ್ಥಿಗಳಿಗೆ ವಿಷಯವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

* * * *

ಅಧ್ಯಾಯ – 5

ಸಾರಾಂಶ ಮತ್ತು ತೀರ್ಮಾನಗಳು

ಅಧ್ಯಾಯ – 5

ಸಾರಾಂಶ ಮತ್ತು ತೀರ್ಮಾನಗಳು

5.1 ಪಠ್ಯಪುಸ್ತಕದ ಅರ್ಥ

"ತರಗತಿಯಲ್ಲಿ ಉಪಯೋಗಿಸುವ ಸಲುವಾಗಿ ಪರಿಣಿತರು ಎಚ್ಚರಿಕೆಯಿಂದ ಸಿದ್ಧಗೊಳಿಸಿದ ವಸ್ತು ಹಾಗೂ ಬೋಧನೆಗೆ ಅಗತ್ಯವಾದ ಸಹಾಯಕ ಸಾಮಗ್ರಿಗಳನ್ನು ಒಳಗೊಂಡ ಪುಸ್ತಕವೇ ಪಠ್ಯಪುಸ್ತಕ".

ತರಗತಿಯಲ್ಲಿ ಬೇರೆ ಬೇರೆ ವಿಷಯಗಳೊಂದಿಗೆ ಮಗು ಭಾಷೆಯನ್ನು ಕಲಿಯುತ್ತದೆ. ವಿವಿಧ ವಿಷಯಗಳಿಗೆ ಭಾಷಾಕಲಿಕೆಯೇ ಹೆಬ್ಬಾಗಿಲು. ಹೀಗೆ ಭಾಷಾ ಬೋಧನೆಗೆ ಮೀಸಲಾದ ಭಾಷಾ ಸಾಹಿತ್ಯವನ್ನು ಪ್ರಮುಖ ಗುರಿಯಾಗಿಸಿಕೊಂಡ ಪಠ್ಯಪುಸ್ತಕಗಳು **'ಭಾಷಾ ಪಠ್ಯಪುಸ್ತಕಗಳು'** ಎಂದು ಕರೆಯುತ್ತೇವೆ.

5.2 ಪಠ್ಯಪುಸ್ತಕದ ಮಹತ್ವ

ಪಠ್ಯಪುಸ್ತಕವು ಬೋಧನೆಗೆ ಪ್ರಮುಖ ಸಾಧನ, ಶಿಕ್ಷಕ ವಿದ್ಯಾರ್ಥಿಗಳಿಬ್ಬರಿಗೂ ಪಠ್ಯಪುಸ್ತಕಗಳು ಅವಶ್ಯಕ ಆಧಾರಗಳು. ವಿದ್ಯಾರ್ಥಿಗಳು ತರಗತಿಯಲ್ಲಿ ಭಾಷೆಯನ್ನು ಕಲಿತ ನಂತರ ಉಳಿದ ವಿಷಯಗಳನ್ನು ಕಲಿಯುತ್ತಾರೆ. ಮಗುವಿನ ಉತ್ತಮ ಶಿಕ್ಷಣಕ್ಕೆ ಭಾಷಾ ಪಠ್ಯಪುಸ್ತಕವು ಈ ಕೆಳಗಿನಂತೆ ಸಿದ್ಧಪಡಿಸಬೇಕು.

- ಪಠ್ಯಪುಸ್ತಕ ವಿಷಯ ಹಾಗೂ ಅರ್ಥ ಗ್ರಹಣಕ್ಕೆ ಸಹಾಯಕವಾಗುವಂತಿರಬೇಕು.
- ಪಠ್ಯಪುಸ್ತಕ ಅಧ್ಯಯನ ಸಂಘಟನಾಕಾರನಾಗಿ ಕೆಲಸ ನಿರ್ವಹಿಸುವಂತಿರಬೇಕು.
- ತರಗತಿಯ ಉದ್ದೇಶಗಳ ಸಂಬಂಧಿತ ಚಟುವಟಿಕೆಗಳನ್ನು ಪಠ್ಯಪುಸ್ತಕ ತಿಳಿಸಿಕೊಡುವಂತಿರಬೇಕು.
- ವಿದ್ಯಾರ್ಥಿ ಏನನ್ನು ಕಲಿಯಬೇಕು ಹಾಗೂ ಶಿಕ್ಷಕರಿಗೆ ಏನನ್ನು ಕಲಿಸಬೇಕು ಎಂಬುದನ್ನು ಸೂಚಿಸುವಂತಿರಬೇಕು.
- ಭಾಷಾ ಪಠ್ಯಪುಸ್ತಕವು ಶಿಕ್ಷಕನ ನಿರಂತರ ಕೈಪಿಡಿಯಾಗುವಂತಿರಬೇಕು.
- ಶಿಕ್ಷಕ ಮತ್ತು ವಿದ್ಯಾರ್ಥಿಗಳಲ್ಲಿ ಓದುವ ಕೌಶಲ್ಯವನ್ನು ಪಠ್ಯಪುಸ್ತಕ ಬೆಳೆಸಬೇಕು.
- ಪಾಠ ಬೋಧನೆಗೆ ಪೂರ್ವ ಸಿದ್ಧತೆ ಮತ್ತು ವಿಷಯ ಜ್ಞಾನ ಹೊಂದಲು ಪಠ್ಯಪುಸ್ತಕ ಸಹಾಯಕವಾಗಬೇಕು.

- ವಿದ್ಯಾರ್ಥಿಗಳಲ್ಲಿ ನಾಡು ನುಡಿಯ ಬಗ್ಗೆ ಗೌರವ ಹೆಚ್ಚಿಸುವಲ್ಲಿ ಪಠ್ಯಪುಸ್ತಕಗಳು ಮಹತ್ವವೆನಿಸಬೇಕು.
- ಮಗುವಿನ ವ್ಯಕ್ತಿತ್ವ ವಿಕಾಸದಲ್ಲಿ ಪಠ್ಯಪುಸ್ತಕಗಳು ಪ್ರಮುಖ ಪಾತ್ರವಹಿಸುತವಂತಿರಬೇಕು.
- ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಒಂದು ನಿರ್ದಿಷ್ಟ ಹಾದಿಯಲ್ಲಿ ಸಾಗಲು ಅವಕಾಶ ಮಾಡಿಕೊಡಬೇಕು.
- ಮೌಲ್ಯಮಾಪನ ಮತ್ತು ವಿವಿಧ ವಿಷಯಗಳ ಕುರಿತು ಸರಿಯಾದ ಮಾರ್ಗ ತೋರಿಸುವಂತಿರಬೇಕು.
- ಶಿಕ್ಷಣವು ನಿರ್ದಿಷ್ಟವಾಗಿ ಸಾಗಲು ನಿರಂತರತೆಯನ್ನು ಕಾಯ್ದುಕೊಳ್ಳಲು ಹಾಗೂ ತನ್ನ ಗುರಿ ತಲುಪಲು ಪಠ್ಯಪುಸ್ತಕಗಳು ಬೇಕೇ ಬೇಕು.
- ಮಕ್ಕಳಲ್ಲಿ ಅಭಿವ್ಯಕ್ತಿ ಸಾಮರ್ಥ್ಯ ಬೆಳೆಸಲು ಭಾಷಾ ಪಠ್ಯಪುಸ್ತಕ ಅತ್ಯುತ್ತಮ ಸಾಧನವಾಗಿದೆ.
- ಪಠ್ಯಪುಸ್ತಕಗಳು ವಿದ್ಯಾರ್ಥಿಗಳ ಕಾಮಧೇನು ಆಗಿದ್ದು ವಿದ್ಯಾರ್ಥಿ, ಶಿಕ್ಷಕರ ನಡುವಿನ ಸಂಪರ್ಕ ಸಾಧನವಾಗಿದೆ.
- ಭಾಷಾ ಪಠ್ಯ ಪುಸ್ತಕದಿಂದ ವಿದ್ಯಾರ್ಥಿಗಳು ಜ್ಞಾನಾಭಿವೃದ್ಧಿ ಹೊಂದುವುದಲ್ಲದೆ ವಿಷಯದ ಬಗ್ಗೆ ಸ್ಪಷ್ಟ ಕಲ್ಪನೆ ಮೂಡಿಸುವಂತಿರಬೇಕು.
- ಭಾಷಾ ಪಠ್ಯಪುಸ್ತಕಗಳು ಮಕ್ಕಳಲ್ಲಿ ಉತ್ತಮ ಮೌಲ್ಯಗಳನ್ನು ಬೆಳೆಸುವುದಲ್ಲದೇ ಅವರನ್ನು ಸತ್ಪ್ರಜೆಗಳಾಗಿ ನಿರ್ಮಾಣ ಮಾಡುವಂತಿರಬೇಕು.
- ಭಾಷಾ ಪಠ್ಯಪುಸ್ತಕವು ವಿದ್ಯಾರ್ಥಿಗಳ ಜ್ಞಾನವನ್ನು ಶ್ರೀಮಂತಗೊಳಿಸುವಂತಿರಬೇಕು.
- ಭಾಷಾ ಪಠ್ಯಪುಸ್ತಕವು ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡಗಳಿಗೆ ಸ್ಥಾನ ನೀಡಿರುವುದರಿಂದ ವಿದ್ಯಾರ್ಥಿಗಳಿಗೆ ಕನ್ನಡ ಸಾಹಿತ್ಯ ಬೆಳೆದು ಬಂದ ಬಗೆಯನ್ನು ತಿಳಿಯಲು ಸಹಾಯಕವಾಗುತ್ತದೆ.
- ವಿದ್ಯಾರ್ಥಿಗಳಿಗೆ ಭಾಷೆ, ಸಾಹಿತ್ಯ, ಸಂಸ್ಕೃತಿ, ಜೀವನಕ್ಕೆ ಬೇಕಾಗಿರುವ ವಿಷಯಾಂಶಗಳು ವ್ಯವಸ್ಥಿತ ರೀತಿಯಲ್ಲಿ ಬರೆಯಲ್ಪಟ್ಟ ವಿಷಯ ಕೋಶವೇ ಪಠ್ಯಪುಸ್ತಕ.

ಒಟ್ಟಿನಲ್ಲಿ ಹೇಳುವುದಾದರೆ **"ಹುಟ್ಟಿದ ಮಗುವಿಗೆ ತಾಯಿಯ ಆಸರೆ ಎಷ್ಟು ಪ್ರಮುಖವೋ ಅಷ್ಟೇ ಪ್ರಮುಖವಾಗಿ ಕಲಿಸುವ ಶಿಕ್ಷಕನಿಗೆ ಮತ್ತು ಕಲಿಯುವ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು ಮಹತ್ವ ಎನಿಸಿವೆ"** ಎಂದು ಹೇಳಬಹುದು.

"ಪಠ್ಯಪುಸ್ತಕವು ಆ ನಾಡಿನ ಸಂಸ್ಕೃತಿಯ ಪ್ರತೀಕವಿದ್ದಂತೆ"

5.3 ಅಧ್ಯಯನದ ತಲೆಬರಹ

"ಪ್ರೌಢಶಾಲಾ ಹಂತದ ಕನ್ನಡ ಭಾಷೆ ಮತ್ತು ಸಾಹಿತ್ಯ ಬೋಧನೆ ಒಂದು ಅಧ್ಯಯನ"

5.4 ಅಧ್ಯಯನದ ಪ್ರಾಮುಖ್ಯತೆ

- ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಪಠ್ಯಪುಸ್ತಕಗಳ ಪಾತ್ರ ಮಹತ್ವದ್ದಾಗಿದೆ. ಪಠ್ಯಪುಸ್ತಕಗಳಿಲ್ಲದ ಬೋಧನೆ ಇಂದು ದುಸ್ತರವಾಗಿದೆ.
- ಪಠ್ಯಪುಸ್ತಕಗಳು ಶಾಲೆಯ ಒಳಗೆ ಮತ್ತು ಹೊರಗೆ ಪಡೆಯುವ ವಿವಿಧ ರೀತಿಯ ಅನುಭವಗಳನ್ನು ಒಳಗೊಂಡಿದ್ದು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಗಳಾಗಿವೆ.
- ಕಲಿಕಾ ಸಾಮರ್ಥ್ಯ ಬೋಧನಾ ಪರಿಣಾಮ ಗುಣಾತ್ಮಕ ಕಾಣಲು ಪಠ್ಯಪುಸ್ತಕಗಳು ಸಹಕಾರಿಗಳಾಗಿವೆ.

5.5 ಅಧ್ಯಯನದ ಉದ್ದೇಶಗಳು

- ಪಠ್ಯಪುಸ್ತಕದಲ್ಲಿನ ಗದ್ಯ-ಪದ್ಯಭಾಗವು ಭಾಷೆ ಮತ್ತು ಸಾಹಿತ್ಯ ಬೋಧನೆಗೆ ಸಹಾಯಕವಾಗಿದೆಯೇ ಎಂಬುದನ್ನು ವಿಶ್ಲೇಷಿಸುವುದು.
- ಪಠ್ಯಪುಸ್ತಕಗಳಲ್ಲಿರುವ ಪಠ್ಯವಸ್ತುವಿನಿಂದ ನೈತಿಕ ಮೌಲ್ಯಗಳನ್ನು ನಾಡು-ನುಡಿಗಳ ಬಗ್ಗೆ ಅಭಿಮಾನ ಮತ್ತು ಗೌರವವನ್ನು, ಭಾಷಾ ಕೌಶಲಗಳನ್ನು ಬೆಳೆಸಬಹುದೇ ಎಂಬುದನ್ನು ತಿಳಿಯುವುದು.
- ಪ್ರಥಮ, ದ್ವಿತೀಯ, ತೃತೀಯ ಭಾಷೆಗಳ ಪಠ್ಯಪುಸ್ತಕದಲ್ಲಿ ವ್ಯಾಕರಣಾಂಶಗಳು, ಗಾದೆ ಮಾತು ಒಗಟುಗಳನ್ನು ಬಳಕೆ ಮಾಡಿದ್ದಾರೆಯೇ ಎಂಬುದನ್ನು ಮನಗಾಣುವುದು.
- ಸಾಹಿತ್ಯ ಬೋಧನೆಗೆ ಸಹಾಯಕವಾಗುವಂತಹ ಅಂಶಗಳಿವೆಯೇ ಎಂಬುದನ್ನು ಅಧ್ಯಯನ ಮಾಡುವುದು.
- ಮಕ್ಕಳ ಮಾನಸಿಕ ಮಟ್ಟಕ್ಕೆ ಅನುಗುಣವಾಗಿ ಪಠ್ಯಪುಸ್ತಕಗಳು ರಚನೆಗೊಂಡಿದೆಯೇ ಎಂಬುದನ್ನು ಪರೀಕ್ಷಿಸುವುದು.

5.6 ಅಧ್ಯಯನದ ಇತಿಮಿತಿಗಳು

"ಪ್ರೌಢಶಾಲಾ ಹಂತದ ಕನ್ನಡ ಭಾಷೆ ಮತ್ತು ಸಾಹಿತ್ಯ ಬೋಧನೆ ಒಂದು ಅಧ್ಯಯನ" ಎಂಬ ಸಂಶೋಧನಾ ಅಧ್ಯಯನವು ಸರಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರೌಢಶಾಲೆಗಳಿಗೆ ಮಾತ್ರ ಅನ್ವಯ.

5.7 ಅಧ್ಯಯನದ ವಿಭಾಗಗಳು

1. ಅರ್ಥ, ವ್ಯಾಪ್ತಿ, ಉದ್ದೇಶ, ಸ್ವರೂಪ ಮತ್ತು ಪ್ರಾಮುಖ್ಯತೆ
2. ಸಾಹಿತ್ಯಾವಲೋಕನ
3. ಅಧ್ಯಯನದ ವಿನ್ಯಾಸ
4. ದತ್ತಾಂಶಗಳ ವಿಶ್ಲೇಷಣೆ ಮತ್ತು ಅರ್ಥೈಸುವಿಕೆ
5. ಸಾರಾಂಶ ಮತ್ತು ತೀರ್ಮಾನ

5.8 ಸಂಬಂಧಿತ ಸಾಹಿತ್ಯಾವಲೋಕನ

ಸಾಹಿತ್ಯಾವಲೋಕನವೆಂಬುದು ಒಂದು ಸಂಶೋಧನಾ ಅಧ್ಯಯನದ ಮೂಲ ತಳಹದಿ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಅಧ್ಯಯನ ಮಾಡಿದ ಅನೇಕ ಶಿಕ್ಷಣ ತಜ್ಞರ ಸಂಬಂಧ ಕಲ್ಪಿಸುವ ಸಾಹಿತ್ಯ ಗ್ರಂಥಗಳ ಪುನರ್ ವಿಮರ್ಶೆ ಮತ್ತು ಸಂಬಂಧಿತ ಅಧ್ಯಯನದ ಸಮೀಕ್ಷೆ ಮಾಡಲಾಗಿದೆ.

- ❖ ಜವಳಿ ವಿ.ಕೆ. (1949)
- ❖ ತಿಯೋಡರ್, ಕೆ. (1957)
- ❖ ಜೋಷಿ, ಎಂ.ಎನ್. (1972)
- ❖ ಧರ್ಮಾಧಿಕಾರಿ, ವಿ.ವಿ. (1973)
- ❖ ಶುಕ್ಲಾ ಜಿ.ಬಿ. (1975)
- ❖ ಮುಥಕಿ, ಐ.ವಿ. (1981)
- ❖ ಮೋದಿ ಬಾಕ್ವೆರ್ (1988)
- ❖ ಸೇನಾಪತಿ, ಟಿ. (1989)
- ❖ ಜಾನ್ ಓ.ಟಿ. (1991)
- ❖ ಶುಕ್ಲಾ ನಂದಿತ (1991)
- ❖ ಎಮ್. ಎ.ಟಿ. ಒಮೊಲೋ (1992)
- ❖ ಎನ್. ರಾಜನಾಯ್ಕ (2005)

ಇವರ ಅಧ್ಯಯನವನ್ನು ಸಂಪೂರ್ಣವಾಗಿ ಮನನ ಮಾಡಿಕೊಂಡಾಗ ಇದೇ ರೀತಿಯಾಗಿ ನನ್ನ ಸಂಶೋಧನಾ ವಿಷಯಕ್ಕೆ ಉದ್ದೇಶವನ್ನು ಮತ್ತು ಮುಖ್ಯಾಂಶಗಳನ್ನು ಕಂಡುಕೊಂಡಿದ್ದೇನೆ.

5.9 ಅಧ್ಯಯನದ ವಿನ್ಯಾಸ

❖ **ಪ್ರಸ್ತಾವನೆ**

ಸಂಶೋಧನಾ ಅಧ್ಯಯನದ ವಿನ್ಯಾಸವು ಸಂಶೋಧನೆಯ ನೀಲಿ ನಕ್ಷೆಯಾಗಿದ್ದು ಸಂಶೋಧನೆಯ ಉದ್ದೇಶಗಳಿಗನುಗುಣವಾಗಿ ಕ್ರಮಬದ್ಧ ಯೋಜನೆಯ ಪ್ರಕಾರ ಸ್ಪಷ್ಟವಾಗಿ ವಿಷಯವನ್ನು ಸಾದರಪಡಿಸುತ್ತದೆ. ಯಾವುದೇ ಕಾರ್ಯವನ್ನು ಯಶಸ್ವಿಗೊಳಿಸಲು ಪ್ರತಿಯೊಂದಕ್ಕೂ ರೂಪರೇಷ ವಿಧಾನಗಳು ಅವಶ್ಯ ಅದರಂತೆ ವಿನ್ಯಾಸವು ಒಂದು ಮುಖ್ಯವಾದ ಅಂಗವಾಗಿದೆ.

5.9.1 ಸಮಸ್ಯೆಯ ನಿರೂಪಣೆ

"ಪ್ರೌಢಶಾಲಾ ಹಂತದ ಕನ್ನಡ ಭಾಷೆ ಮತ್ತು ಸಾಹಿತ್ಯ ಬೋಧನೆಯ ಒಂದು ಅಧ್ಯಯನ"

ಈ ಸಂಶೋಧನೆಯು ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರೌಢಶಾಲೆಗಳಿಗೆ ಮಾತ್ರ ಸೀಮಿತ.

5.9.2 ಅಧ್ಯಯನದ ರೂಪರೇಷೆ

ಈ ರೀತಿಯ ಸಂಶೋಧನೆ ಹಾಗೂ ಅಧ್ಯಯನಕ್ಕೆ **'ವ್ಯಕ್ತಿಗತ ಅಭಿಪ್ರಾಯ ಸಂಗ್ರಹಣಾ ಪದ್ಧತಿ'**ಯನ್ನು ಅನುಸರಿಸಲಾಗಿದೆ. ಈ ಅಧ್ಯಯನದ ವಿಷಯದಲ್ಲಿ ಈ ಕ್ರಮವು ಹೆಚ್ಚು ಸೂಕ್ತವೂ ಮತ್ತು ಸಮರ್ಪಕವೂ ಆಗಿರುವುದರಿಂದ ಈ ಪದ್ಧತಿಯನ್ನು ಅನುಸರಿಸಲಾಗಿದೆ.

5.9.3 ಪ್ರಶ್ನಾವಳಿಯ ತಯಾರಿಕೆ

"ಪ್ರೌಢಶಾಲಾ ಹಂತದ ಕನ್ನಡ ಭಾಷೆ ಮತ್ತು ಸಾಹಿತ್ಯ ಬೋಧನೆಯ ಒಂದು ಅಧ್ಯಯನ" ಈ ವಿಷಯವನ್ನು ಅಧ್ಯಯನಕ್ಕೆ ತೆಗೆದುಕೊಳ್ಳುವ ಪೂರ್ವದಲ್ಲಿ ಸಂಶೋಧಕರು ಕೆಲವು ಶಿಕ್ಷಣ ತಜ್ಞರು, ವಿಷಯ ಪರಿಣಿತರೊಡನೆ ಚರ್ಚಿಸಿದ್ದರು. ಕೆಲವು ಸಂಶೋಧಕರ ಅನುಭವಗಳನ್ನು ಕೇಳಿ ತಿಳಿದುಕೊಂಡಿದ್ದರು. ಕನ್ನಡ ಭಾಷಾ ಪಠ್ಯಪುಸ್ತಕವನ್ನು ಓದಿ ಅದರಲ್ಲಿರುವ ಕೆಲವು ಕೊರತೆಗಳನ್ನು ಸಮಸ್ಯೆಗಳನ್ನು ಮನಗಂಡು ಮಕ್ಕಳ ಒಡನಾಟದೊಂದಿಗೆ ಕೆಲವು ವಿಷಯಗಳನ್ನು ತಿಳಿದುಕೊಂಡು ಈ ಎಲ್ಲಾ ವಿಷಯಗಳ ಆಧಾರದ ಮೇಲೆ ಪ್ರಶ್ನಾವಳಿಯನ್ನು ತಯಾರಿಸಲಾಯಿತು.

5.9.4 ಸಾಧನ ಮತ್ತು ತಂತ್ರಗಳು

ಈ ಅಧ್ಯಯನದಲ್ಲಿ **'ಪ್ರಶ್ನಾವಳಿಯ ಪದ್ಧತಿ'**ಯನ್ನು ಸಾರ್ವತ್ರಿಕವಾಗಿ ಅನುಸರಿಸಲಾಗುತ್ತದೆ. ಇದೊಂದು ಅತ್ಯಂತ ಸಮರ್ಪಕ, ಉಪಯುಕ್ತವಾದ ಹಾಗೂ ಪರಿಣಾಮಕಾರಿಯಾದ ತಂತ್ರಗಳಲ್ಲೊಂದು ಎಂಬುದಾಗಿ ಸಂಶೋಧಕರು ಹಾಗೂ ಅಧ್ಯಯನಶೀಲರು ಸಮ್ಮತಿಸಿದ್ದಾರೆ. ಈ ಕ್ರಮದಿಂದ ಸಂಖ್ಯಾ ಸಂಗ್ರಹಣಾ ಕಾರ್ಯದಲ್ಲಿ ಅದರಲ್ಲೂ ವಿಶೇಷವಾಗಿ ಸಂಶೋಧನಾ ಕಾರ್ಯದಲ್ಲಿ ಅತ್ಯಂತ ಫಲದಾಯಕ, ಆಶಾದಾಯಕ ಹಾಗೂ ಕ್ರಿಯಾಶೀಲ ವಿಧಾನವಾಗಿದೆ. ಆದ್ದರಿಂದ ನೇರ ಹಾಗೂ ಸಮರ್ಪಕ ಪ್ರಶ್ನಾವಳಿಯನ್ನು ರೂಪಿಸುವುದು ಅತ್ಯಂತ ಮಹತ್ವ ಪೂರ್ಣವಾಗಿದೆ.

5.9.5 ಪ್ರತಿಚಯನದ ಆಯ್ಕೆ

ಪ್ರಸ್ತುತ ಸಂಶೋಧನಾ ಅಧ್ಯಯನವನ್ನು ಕೈಗೊಳ್ಳಲು 30 ಪ್ರೌಢಶಾಲೆಗಳನ್ನು ಯಾದೃಚ್ಛಿಕವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಇದರಲ್ಲಿ ಸರ್ಕಾರಿ ಅನುದಾನಿತ ಮತ್ತು, ಅನುದಾನರಹಿತ ಪ್ರೌಢಶಾಲೆಗಳಿವೆ. ಈ ಶಾಲೆಗಳಲ್ಲಿಯ 8, 9, 10ನೇ ತರಗತಿಯ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾ ವಿಷಯವನ್ನು ಬೋಧನೆ ಮಾಡುವ 50 ಜನ ಶಿಕ್ಷಕರುಗಳಿಗೆ ತಯಾರಿಸಿದ ಪ್ರಶ್ನಾವಳಿಯನ್ನು ನೀಡಿ ಅವರಿಂದ ಅಭಿಪ್ರಾಯ ಸಂಗ್ರಹಿಸಲಾಯಿತು. ಶಿಕ್ಷಕರುಗಳು ತಮ್ಮ ಬೋಧನಾ ಅನುಭವಗಳ ಮೇಲೆ ನೀಡಿದ ಅಭಿಪ್ರಾಯಗಳ ಆಧಾರದ ಮೇಲೆ ಕೆಲವು ನಿರ್ಣಯಗಳಿಗೆ ಬರಲಾಗಿದೆ.

5.9.6 ದತ್ತಾಂಶಗಳ ಸಂಗ್ರಹಣಾ ವಿಧಾನ

ಪ್ರಸ್ತುತ ಸಂಶೋಧನಾ ಅಧ್ಯಯನದ ದತ್ತಾಂಶ ಸಂಗ್ರಹಣೆಗಾಗಿ 8, 9, 10ನೇ ತರಗತಿಯ ಕನ್ನಡ ಭಾಷಾ ವಿಷಯವನ್ನು ಬೋಧಿಸುವ ಶಿಕ್ಷಕರುಗಳಿಗೆ ಪ್ರಶ್ನಾವಳಿಯನ್ನು ತಯಾರಿಸಿ ಅವರಿಂದ ಮಾಹಿತಿಯನ್ನು ಸಂಗ್ರಹಿಸಲಾಯಿತು. ಶಿಕ್ಷಕರಿಂದ ಪಡೆದ ಪ್ರತಿಕ್ರಿಯೆಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ಗೌಪ್ಯತೆಯನ್ನು ಕಾಪಾಡಲಾಯಿತು. ಸಂಗ್ರಹಿಸಲ್ಪಟ್ಟ ಒಟ್ಟು ಮಾಹಿತಿಯನ್ನು ಸಂಯೋಜಿಸಿ ದತ್ತಾಂಶ ವಿಶ್ಲೇಷಣೆಯಲ್ಲಿ ಬಳಸಲಾಯಿತು.

ಪ್ರಶ್ನಾವಳಿಯಲ್ಲಿಯ ಪ್ರಶ್ನೆಗಳಿಗೆ ಹೌದು / ಭಾಗಶಃ / ಇಲ್ಲ ಎಂಬುದನ್ನು (✓) ಈ ಚಿಹ್ನೆ ಸೂಚಿಸುವ ಮೂಲಕ ಶಿಕ್ಷಕರ ಅಭಿಪ್ರಾಯವನ್ನು ಪಡೆಯಲಾಯಿತು. 30 ಪ್ರಶ್ನೆಗಳಿಗೆ ಪ್ರೌಢಶಾಲೆಗಳಲ್ಲಿಯ ಕನ್ನಡ ಭಾಷಾ ಶಿಕ್ಷಕರಿಂದ ಮಾಹಿತಿ ಸಂಗ್ರಹಿಸಲಾಯಿತು.

5.9.7 ದತ್ತಾಂಶಗಳ ವಿಂಗಡಣಾ ವಿಧಾನ

ಪ್ರಸ್ತುತ ಅಧ್ಯಯನದಲ್ಲಿ ಸಂಗ್ರಹಿಸಲಾದ ಅಂಕಿ ಅಂಶಗಳನ್ನು **ಶೇಕಡವಾರು, ಕೋಷ್ಟಕ** ಹಾಗೂ **ಸ್ತಂಭಾಲೇಖದ** ಮೂಲಕ ತೋರಿಸಲಾಗಿದೆ. ಈ **ಪ್ರತಿಶತ ವರದಿ** ಹಾಗೂ **ಸ್ತಂಭಾಲೇಖನವನ್ನು 4ನೇ ಅಧ್ಯಾಯದಲ್ಲಿ** ಅಳವಡಿಸಲಾಗಿದೆ.

5.9.8 ವಿಶ್ಲೇಷಣೆ ಮತ್ತು ನಿರೂಪಣೆ:

ಅಧ್ಯಯನದಿಂದ ಕಂಡು ಬಂದ ಅಂಶಗಳು

1. 8, 9, 10ನೇ ವರ್ಗದ ಭಾಷಾ ಪಠ್ಯಪುಸ್ತಕದ ಮೂಲಕ ಗದ್ಯ ಭಾಗವು ಸರಳವಾಗಿ ಮಕ್ಕಳನ್ನು ಓದಿಸಿಕೊಂಡು ಹೋಗಿ ಓದುಗಾರಿಕೆಯ ಸಾಮರ್ಥ್ಯ ಬೆಳೆಸುವುದಲ್ಲದೆ ತನ್ಮೂಲಕ ವಿಷಯ ಜ್ಞಾನವನ್ನು ಪಡೆಯಲು ಸಮರ್ಥರಾಗುತ್ತಾರೆಂಬುದು ಸ್ಪಷ್ಟವಾಗುತ್ತದೆ. ಅದರಂತೆ ಗದ್ಯಭಾಗವು ಓದುತ್ತಾ ಹೋದಂತೆ ಅಭಿರುಚಿಯನ್ನು ಬೆಳೆಸುವುದಲ್ಲದೆ ಅದಕ್ಕೆ ಸಂಬಂಧಿಸಿದ ಪೂರಕ ಪುಸ್ತಕಗಳನ್ನು ಹೆಚ್ಚೆಚ್ಚು ಓದುವ ಅಭಿರುಚಿ ಬೆಳೆಸುವುದು.

2. ಪಠ್ಯದಲ್ಲಿ ಬಳಸುವ ಭಾಷಾ ಶೈಲಿ, ಮಕ್ಕಳ ಮಾನಸಿಕ ವಿಕಾಸಕ್ಕೆ ಯೋಗ್ಯವೆನಿಸುವಂತಿರಬೇಕು. ಗದ್ಯದಲ್ಲಿಯೂ ಅನೇಕ ರೀತಿಯ ಪದಗಳು ಪ್ರಯೋಗಿಸಲ್ಪಡಬೇಕು. ಗದ್ಯವು ಶಬ್ದ ಭಂಡಾರವನ್ನು ವಿದ್ಯಾರ್ಥಿಗಳಲ್ಲಿ ಅಧಿಕಗೊಳಿಸುವ ಅಕ್ಷಯ ಪಾತ್ರೆಯಿದ್ದಂತೆ.

3. ಪಠ್ಯಪುಸ್ತಕವು ಮಕ್ಕಳನ್ನು ಮಾನವೀಯ ಮೌಲ್ಯಗಳ ಸಾಕಾರ ಮೂರ್ತಿಗಳನ್ನಾಗಿಸಲು ತನ್ನದೇ ಆದ ಅಳಿಲು ಸೇವೆ ಸಲ್ಲಿಸುವಂತಿದೆ. ಇದು ವಿದ್ಯಾರ್ಥಿಗಳಲ್ಲಿ ಸ್ವಾರ್ಥತ್ಯಾಗ, ಪ್ರೇಮ, ಅಹಿಂಸೆ, ದಯೆ ಮುಂತಾದ ಮಾನವೀಯ ಮೌಲ್ಯಗಳನ್ನು ಬೆಳೆಸುತ್ತದೆ.

4. ಪಾಠ ಬೆಳವಣಿಗೆಯ ಹಂತವು ಇಡೀ ಗದ್ಯ ಬೋಧನೆಯ ಜೀವಾಳವಿದ್ದಂತೆ. ಈ ಹಂತದಲ್ಲಿ ಮೊದಲು ಲೇಖಕನ ಸಂಕ್ಷಿಪ್ತ ಪರಿಚಯ ಮಾಡಿಕೊಡಬೇಕು. ಅವನ ಕಾಲ ಜೀವನ, ಕೃತಿ, ಸಾಧನೆಗಳ ಕುರಿತು ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಕೊಟ್ಟಂತಾಗುತ್ತದೆ.

5. ಪಠ್ಯಪುಸ್ತಕವು ವಿದ್ಯಾರ್ಥಿಗಳು ಗದ್ಯಪಾಠಗಳಲ್ಲಿ ಓದಿದ ವಿಚಾರಗಳನ್ನು ಇದ್ದಕ್ಕಿದ್ದಂತೆಯೇ ಅರ್ಥಮಾಡಿಕೊಳ್ಳಲು ಸ್ವಲ್ಪ ಮಟ್ಟಿಗೆ ಸಹಕಾರಿಯಾಗಿದೆ. ಇದರಿಂದ ವಿದ್ಯಾರ್ಥಿಗಳಲ್ಲಿ **'ಸ್ವಯಂ ಅಧ್ಯಯನ'** ಮಾಡುವ ಸಾಮರ್ಥ್ಯವು ಹೆಚ್ಚಾಗುವುದು.

6. ಪಠ್ಯಪುಸ್ತಕವು ಮಕ್ಕಳನ್ನು ವಿವಿಧ ರೀತಿಯ ಭಾಷಾಭ್ಯಾಸ ಚಟುವಟಿಕೆಗಳಲ್ಲಿ ತೊಡಗಿಸುವಲ್ಲಿ ಯಶಸ್ವಿಯಾಗಿದೆ. ಇದರಿಂದ ವಿದ್ಯಾರ್ಥಿಗಳಲ್ಲಿ ಭಾಷಾ ಸಾಮರ್ಥ್ಯ ಬೆಳೆಯುತ್ತದೆ.

7. ಭಾಷಾ ಪಠ್ಯಪುಸ್ತಕವು ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷೆಯ ಬಗೆಗೆ ಅಭಿಮಾನ, ಪ್ರೀತಿ ಆಸಕ್ತಿಯನ್ನು ಬೆಳೆಸುತ್ತದೆ. ಇದರಲ್ಲಿರುವ ಗದ್ಯಪಾಠಗಳು ಕನ್ನಡ ಭಾಷೆಯ ಇತಿಹಾಸಗಳನ್ನು ಪ್ರತಿಬಿಂಬಿಸುತ್ತವಲ್ಲದೆ ಅದರ ಹಿರಿಮೆಯನ್ನು ತಿಳಿಸುತ್ತದೆ.

8. ಪಠ್ಯಪುಸ್ತಕವು ವಿದ್ಯಾರ್ಥಿಗಳಲ್ಲಿ ಗಾಯನ ಕಲೆ ಸಾಮರ್ಥ್ಯವನ್ನು ಬೆಳೆಸುವಲ್ಲಿ ಸಫಲವಾಗಿದೆ. ಇದರಿಂದ ವಿದ್ಯಾರ್ಥಿಗಳು ಉತ್ತಮ ಗಾಯಕರಾಗಲು ಸೂಕ್ತ ತರಬೇತಿ ದೊರೆಯುತ್ತದೆ. ವಚನ, ಜನಪದ ಗೀತೆ, ತ್ರಿಪದಿಗಳನ್ನು ಸುಶ್ರಾವ್ಯವಾಗಿ ಹಾಡಲು ಸಾಧ್ಯವಿದೆ.

9. ಭಾಷಾ ಪಠ್ಯಪುಸ್ತಕವು ಕನ್ನಡ ನಾಡು ನುಡಿಯ ಮಹತ್ವ, ವೈಶಿಷ್ಟತೆಯನ್ನು ಎತ್ತಿ ಹಿಡಿದಿದೆ. ಕನ್ನಡ ನಾಡುನುಡಿಯ ಶ್ರೇಷ್ಠತೆ ಹಿರಿಮೆ-ಗರಿಮೆಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುವುದರ ಮೂಲಕ ಅವರಲ್ಲಿ ಕನ್ನಡ ನಾಡು ನುಡಿಯ ಬಗ್ಗೆ ಅಭಿಮಾನ ಮತ್ತು ಗೌರವವನ್ನು ಬೆಳೆಸುತ್ತದೆ.

10. ಪಠ್ಯಪುಸ್ತಕವು ಪದ್ಯದಲ್ಲಿರುವ ವಿಷಯ ಸ್ಪಷ್ಟತೆ, ಸೌಂದರ್ಯ ಮತ್ತು ವಿದ್ಯಾರ್ಥಿಗಳಿಗೆ ಸಂದೇಶಗಳನ್ನು ನೀಡವಲ್ಲಿ ಸಮರ್ಥವಾಗಿದೆ. ಇದರಿಂದ ವಿದ್ಯಾರ್ಥಿಗಳು ಪದ್ಯಪಾಠಗಳನ್ನು ಮುಕ್ತ ಮನಸ್ಸಿನಿಂದ ಆಸ್ವಾದಿಸಲು ಸಾಧ್ಯವಾಗಿದೆ.

11. ಪಠ್ಯಪುಸ್ತಕವು ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳ ಜೀವನ ಸಾಧನೆಗಳನ್ನು, ಅವರು ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ತಿಳಿವುದಕ್ಕೆ ಸಹಕಾರಿಯಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಕನ್ನಡದ ಶ್ರೇಷ್ಠ ಸಾಹಿತಿಗಳ ಪರಿಚಯವನ್ನು ಮಾಡಿಕೊಡಲು ಸಾಧ್ಯವಾಗಿದೆ.

12. ಪಠ್ಯಪುಸ್ತಕದಲ್ಲಿರುವ ನೈತಿಕ ಮೌಲ್ಯಗಳು ಜೀವನ ಮಾರ್ಗ ಕುರಿತು ಹೇಳುವಂತೆ, ಮಕ್ಕಳ ಭಾವನೆಗಳ ಉದಾತ್ತೀಕರಣಕ್ಕೆ ಸಹಾಯಕವಾಗುವಂತೆ ಇವೆ.

13. ಪಠ್ಯಪುಸ್ತಕವು ಪದ್ಯಗಳಲ್ಲಿರುವ ವಿಷಯಕ್ಕೆ ತಕ್ಕ ಸರಳವಾದ ಮತ್ತು ದಿನನಿತ್ಯದ ಜೀವನಕ್ಕೆ ಸಂಬಂಧಿಸಿದ ಘಟನೆಗಳ ಉದಾಹರಣೆಗಳನ್ನು ಒಳಗೊಂಡಿರುವುದು ಸ್ಪಷ್ಟವಾಗುತ್ತದೆ. ಇದರಿಂದ ವಿದ್ಯಾರ್ಥಿಗಳು ವಿಷಯವನ್ನು ಸರಿಯಾಗಿ ಗ್ರಹಿಸಲು ಸಾಧ್ಯವಾಗುತ್ತದೆ.

14. ಪಠ್ಯಪುಸ್ತಕದಲ್ಲಿರುವ ಎಲ್ಲಾ ಪದ್ಯಗಳಿಗೂ ಸೂಕ್ತವಾದ ತಲೆಬರಹವನ್ನು ನೀಡಲಾಗಿದೆ ಎಂಬುದು ಗೊತ್ತಾಗುತ್ತದೆ. ಇದರಿಂದ ವಿದ್ಯಾರ್ಥಿಗಳು ಕೇವಲ ತಲೆಬರಹವನ್ನು ನೋಡಿಯೇ ಪದ್ಯದ ವಿಷಯ ವಸ್ತುವನ್ನು ತಿಳಿದುಕೊಳ್ಳಲು ಸಮರ್ಥರಾಗುವರು.

15. ಪಠ್ಯಪುಸ್ತಕದಲ್ಲಿ ಪದ್ಯದ ಕೊನೆಗೆ ಸಾರಾಂಶವನ್ನು ಸಾಕಷ್ಟು ಪ್ರಮಾಣದಲ್ಲಿ ನೀಡದಿರುವುದು ಕಂಡು ಬರುತ್ತದೆ. ಸಾರಾಂಶ ನೀಡಿದರೆ ವಿದ್ಯಾರ್ಥಿಗಳು ಕಠಿಣವಾದ ಹಳೆಗನ್ನಡ ಪದ್ಯಗಳನ್ನು, ನಡುಗನ್ನಡ ಪದ್ಯಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

16. ಪಠ್ಯಪುಸ್ತಕವು ಸರಳ ಮತ್ತು ಸ್ಪಷ್ಟವಾದ ಭಾಷಾ ಬಳಕೆಯನ್ನು ಒಳಗೊಂಡಿದೆ. ಇದರಿಂದ ವಿದ್ಯಾರ್ಥಿಗಳು ವಸ್ತು ವಿಷಯವನ್ನು ಸುಲಭವಾಗಿ ಮತ್ತು ನಿಖರವಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

17. ಪಠ್ಯಪುಸ್ತಕವು ಸಮರ್ಪಕವಾದ ಲೇಖನ ಚಿಹ್ನೆಗಳ ಬಳಕೆಯನ್ನು ಹೊಂದಿದೆ. ಭಾಷೆಯಲ್ಲಿ ಚಿಹ್ನೆಗಳಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ವಿದ್ಯಾರ್ಥಿಗಳಿಗೆ ವಾಕ್ಯದ ಸ್ಪಷ್ಟ ಅರ್ಥಕ್ಕೆ ಇವು ತುಂಬಾ ಸಹಾಯಕಾರಿ ಓದುವಾಗ ಬರೆಯುವಾಗ, ಮಾತನಾಡುವಾಗ ಎಲ್ಲಿ ನಿಲ್ಲಬೇಕೆಂಬ ಪರಿಕಲ್ಪನೆ ತಿಳಿಸುತ್ತದೆ.

18. ಪಠ್ಯಪುಸ್ತಕದಲ್ಲಿ ರಗಳೆ, ತ್ರಿಪದಿ ಮತ್ತು ಷಟ್ಪದಿಗಳನ್ನು ಪರಿಚಯಿಸಿರುವುದು ಕಂಡುಬರುತ್ತದೆ. ದೇಶೀ ಛಂದಸ್ಸಿನ ಪ್ರಕಾರಗಳಾದ ಇವುಗಳು ವಿದ್ಯಾರ್ಥಿಗಳಿಗೆ ವಿಷಯವನ್ನು ಅದರಲ್ಲೂ ಪದ್ಯಪಾಠಗಳನ್ನು ತಿಳಿಸಲು ತುಂಬಾ ಸಹಾಯಕಾರಿಯಾಗಿವೆ. ಏಕೆಂದರೆ ಪದ್ಯವು ಛಂದೋನಿಯಮಗಳಿಗೆ ಮತ್ತು ಕ್ರಮಬದ್ಧತೆಗೆ ಒಳಪಟ್ಟಿರುತ್ತದೆ.

19. 8, 9, 10ನೇ ವರ್ಗದ ಪಠ್ಯಪುಸ್ತಕದಲ್ಲಿ ಗಾದೆ ಮಾತುಗಳು ಹಾಗೂ ಒಗಟುಗಳ ಕೊರತೆಯು ಎದ್ದು ಕಾಣುತ್ತದೆ. ಗಾದೆ ಮಾತುಗಳು ಹಾಗೂ ಒಗಟುಗಳು ಗ್ರಾಮೀಣ ಜನರ ಜೀವನದ ವಿಧಾನವನ್ನು ಹಾಗೂ ಗೂಢಾರ್ಥವನ್ನು ಪ್ರತಿಬಿಂಬಿಸುವುದರಿಂದ ಅವುಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುವುದರ ಅವಶ್ಯಕತೆ ಇದೆ.

20. ಪಠ್ಯಪುಸ್ತಕವು ಸಂಧಿಗಳು, ಸಮಾಸಗಳು, ಹಾಗೂ ಅಲಂಕಾರಗಳನ್ನು ಒಳಗೊಂಡಿದೆ. ವ್ಯಾಕರಣ ಜ್ಞಾನದಿಂದ ಮಾತ್ರ ವಿದ್ಯಾರ್ಥಿಗಳಿಗೆ ಭಾಷೆಯ ರಚನೆ ಮತ್ತು ಪದ ಪ್ರಯೋಗವನ್ನು ಮಾಡಲು ಸುಲಭವಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳಿಗೆ ವ್ಯಾಕರಣದ ಜ್ಞಾನವನ್ನು ನೀಡುವಲ್ಲಿ ಪಠ್ಯಪುಸ್ತಕವು ಯಶಸ್ವಿಯಾಗಿದೆ.

21. ಭಾಷಾ ಪಠ್ಯಪುಸ್ತಕದಲ್ಲಿ **ಅನುಗಮನ** ಮತ್ತು **ನಿಗಮನ ಪದ್ಧತಿ**ಯನ್ನು ವ್ಯಾಕರಣ ಬೋಧನೆ ಮಾಡುವಾಗ ಉಪಯೋಗಿಸಲು ಅವಕಾಶವಿದೆ. ಈ ಎರಡು ಪದ್ಧತಿಗಳು ಅಂದರೆ ನಿಯಮದ ಮೂಲಕ ಉದಾಹರಣೆ ಮತ್ತು ಉದಾಹರಣೆಯ ಮೂಲಕ ನಿಯಮವನ್ನು ವಿದ್ಯಾರ್ಥಿಗಳಿಗೆ ತಿಳಿಸಲು ಬಹಳ ಉಪಯುಕ್ತವೂ ಪರಿಣಾಮಕಾರಿಯೂ ಆಗಿವೆ.

22. ಪಠ್ಯಪುಸ್ತಕದಲ್ಲಿ ವ್ಯಾಕರಣವನ್ನು ವಿದ್ಯಾರ್ಥಿಗಳಿಗೆ ಕಲಿಸಲು ಉದಾಹರಣೆಗಳನ್ನು ಸಾಕಷ್ಟು ಕೊಡಲಾಗಿದೆ ಎಂಬುದು ಕಂಡು ಬರುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ವ್ಯಾಕರಣದ ಜ್ಞಾನವನ್ನು ಸ್ಪಷ್ಟವಾಗಿ ಕೊಡುವುದರ ಮೂಲಕ ಪರಿಕಲ್ಪನೆಯನ್ನು ಸುಲಭವಾಗಿ ತಿಳಿಸಬಹುದು.

23. ಪಠ್ಯಪುಸ್ತಕದಲ್ಲಿ ಉತ್ತಮ ಗುಣಮಟ್ಟದ ಕಾಗದ ಸಮರ್ಪಕವಾಗಿಲ್ಲ ಹಾಗೂ ಇತರ ಅಂಶಗಳನ್ನು ಒಳಗೊಂಡಿರುವುದು. ಸ್ಪಷ್ಟವಾಗುತ್ತದೆ. ಇದರಿಂದ ವಿದ್ಯಾರ್ಥಿಗಳ ಮನಸ್ಸನ್ನು ಪಠ್ಯಪುಸ್ತಕವು ಆಕರ್ಷಿಸುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂದು ಹೇಳಬಹುದು.

24. ಭಾಷಾ ಪಠ್ಯಪುಸ್ತಕವು ದೀರ್ಘಕಾಲ ಬಾಳಿಕೆ ಬರುವಂತಹ ರಕ್ಷಾಕವಚವನ್ನು ಭಾಗಶಃ ಹೊಂದಿರುವುದು ತಿಳಿದುಬರುತ್ತದೆ. ಉತ್ತಮ ರಕ್ಷಾಕವಚವನ್ನು ಪಠ್ಯಪುಸ್ತಕಕ್ಕೆ ತಯಾರಿಸುವುದು ಅವಶ್ಯಕವಾಗಿದೆ ಇದರಿಂದ ಪಠ್ಯಪುಸ್ತಕವು ಬಹಳ ದಿನಗಳವರೆಗೆ ಬಾಳಿಕೆ ಬರುತ್ತದೆ.

25. ಭಾಷಾ ಪಠ್ಯಪುಸ್ತಕಕ್ಕೆ ಉತ್ತಮ ಗುಣಮಟ್ಟದ ಕಾಗದವನ್ನು ಬಳಸಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಸರಿಯಾದ ಬಿಳುಪಿನ ಗುಣಮಟ್ಟದ ಕಾಗದ ಬಳಸುವುದರಿಂದ ಮುದ್ರಣ ಸರಿಯಾಗಿ ಮಾಡಲು ಸಾಧ್ಯವಾಗುವುದು ಮತ್ತು ವಿದ್ಯಾರ್ಥಿಗಳಿಗೆ ಓದಲು ಅನುಕೂಲವಾಗುವುದು.

26. ಪಠ್ಯಪುಸ್ತಕ ನಾಡಗೀತೆ, ರಾಷ್ಟ್ರಗೀತೆ ಹಾಗೂ ರಾಷ್ಟ್ರೀಯ ಮೌಲ್ಯಗಳು ಮತ್ತು ಸಂದೇಶಗಳನ್ನು ಹೊಂದಿದೆ ಎಂಬ ಅಂಶ ಸ್ಪಷ್ಟವಾಗುತ್ತದೆ. ವಿದ್ಯಾರ್ಥಿಗಳಿಗೆ ಇವುಗಳನ್ನು ತಿಳಿಸುವುದರಿಂದ ಅವರನ್ನು ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ನಿರ್ಮಾಣ ಮಾಡಲು ಸಾಧ್ಯವಿದೆ.

27. ಭಾಷಾ ಪಠ್ಯಪುಸ್ತಕದಲ್ಲಿರುವ ಅಕ್ಷರಗಳ ಗಾತ್ರವು ವಿದ್ಯಾರ್ಥಿಗಳು ಓದಿ ಗ್ರಹಿಸಲು ಅನುಕೂಲವಾಗುವಂತಿದೆ ಇದರಿಂದ ವಿದ್ಯಾರ್ಥಿಗಳು ವಿಷಯ ವಸ್ತುವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ ಹಾಗೂ ವಿದ್ಯಾರ್ಥಿಗಳ ಮನಸ್ಸನ್ನು ಆಕರ್ಷಿಸುತ್ತದೆ.

28. ಪಠ್ಯಪುಸ್ತಕವನ್ನು ಕಪ್ಪು ಶಾಹಿಯಿಂದ ಸ್ಪಷ್ಟವಾಗಿ ಮುದ್ರಿಸಿರುವುದು ಕಂಡು ಬರುತ್ತದೆ. ಇದರಿಂದ ವಿದ್ಯಾರ್ಥಿಗಳು ಪಠ್ಯಪುಸ್ತಕದಲ್ಲಿನ ಅಕ್ಷರಗಳನ್ನು ಸುಲಭವಾಗಿ ಗುರುತಿಸಿ ಅರ್ಥ ಗ್ರಹಿಸಲು ಸಾಧ್ಯವಾಗುವುದು.

29. ಭಾಷಾ ಪಠ್ಯಪುಸ್ತಕದ ಬೆಲೆಯು ಎಲ್ಲ ವರ್ಗದ ವಿದ್ಯಾರ್ಥಿಗಳಿಗೆ ಕೈಗೆಟುಕುವಂತಿದೆ. ಇದರಿಂದ ಬಡವರ್ಗದ ವಿದ್ಯಾರ್ಥಿಗಳು ಪುಸ್ತಕವನ್ನು ಕೊಂಡು ಓದಿಕೊಳ್ಳಲು ಸಹಕಾರಿಯಾಗುತ್ತದೆ. ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಮುಂದುವರೆಯಲು ಸಾಧ್ಯವಾಗುತ್ತದೆ.

30. 8, 9, 10ನೇ ವರ್ಗದ ಭಾಷಾ ಪಠ್ಯಪುಸ್ತಕವು ನಿಗದಿಪಡಿಸಿರುವ ಗುರಿಯನ್ನು ತಕ್ಕ ಮಟ್ಟಿಗೆ ತಲುಪುವಲ್ಲಿ ಯಶಸ್ವಿಯಾಗಿವೆ ಎಂಬುದು ಸ್ಪಷ್ಟವಾಗುತ್ತದೆ. ಭಾಷಾ ಪಠ್ಯಪುಸ್ತಕದಿಂದ ವಿದ್ಯಾರ್ಥಿಗಳು ಭಾಷೆಯ ವಿವಿಧ ಕೌಶಲ್ಯಗಳಾದ ಓದುಗಾರಿಕೆ, ಅರ್ಥಗ್ರಹಣ ಹಾಗೂ ಆಲಿಸುವಿಕೆಯ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವರು.

31. ಪಠ್ಯಪುಸ್ತಕದಲ್ಲಿರುವ ಗದ್ಯ ಹಾಗೂ ಪದ್ಯ ಪಾಠಗಳು ಭಾಗಶಃ ಮಕ್ಕಳ ಕಲಿಕಾ ಮಟ್ಟಕ್ಕೆ ಅನುಗುಣವಾಗಿದೆ ಎಂಬುದು ಕಂಡು ಬರುತ್ತದೆ. ಗದ್ಯ ಹಾಗೂ ಪದ್ಯಪಾಠಗಳು ಮಕ್ಕಳ ಕಲಿಕಾ ಮಟ್ಟಕ್ಕೆ ಅನುಗುಣವಾಗಿ ರಚನೆಯಾಗಬೇಕಿದೆ. ಇದರಿಂದ ವಿದ್ಯಾರ್ಥಿಗಳು ಸುಲಭವಾಗಿ ವಿಷಯವಸ್ತುವನ್ನು ತಿಳಿದುಕೊಳ್ಳಲು ಸಾಧ್ಯವಿದೆ.

32. ಪಠ್ಯಪುಸ್ತಕ ಕೇವಲ ಪರೀಕ್ಷಾ ದೃಷ್ಟಿಯಿಂದ ಕೂಡಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಪಠ್ಯಪುಸ್ತಕವು ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ರಚನೆಯಾಗಿದೆ.

33. ಕನ್ನಡ ಭಾಷಾ ಪಠ್ಯಪುಸ್ತಕವು ವಿದ್ಯಾರ್ಥಿಗಳಲ್ಲಿ ವಿಚಾರವಂತಿಕೆ, ವಿಮರ್ಶೆ, ಸೃಜನಶೀಲತೆಯನ್ನು ಬೆಳೆಸುವಲ್ಲಿ ಯಶಸ್ವಿಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಇದರಿಂದ ವಿದ್ಯಾರ್ಥಿಗಳು ವಿವಿಧ ಕೌಶಲ್ಯಗಳನ್ನು ಬೆಳೆಸಿಕೊಳ್ಳುವುದಲ್ಲದೆ ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ.

34. ಪಠ್ಯಪುಸ್ತಕದಲ್ಲಿ ವಿಷಯವು ವಿದ್ಯಾರ್ಥಿಗಳ ಬೌದ್ಧಿಕ ಮತ್ತು ಕಲಿಕಾ ಸಾಮರ್ಥ್ಯದ ಮೇಲೆ ಇದೆ ಎಂಬುದು ಸ್ಪಷ್ಟವಾಗುತ್ತದೆ. ಇದರಿಂದ ವಿದ್ಯಾರ್ಥಿಗಳು ವಿಷಯವನ್ನು ನಿಖರವಾಗಿ ಕಲಿಯಲು ಮತ್ತು ಪ್ರಭುತ್ವ ಹೊಂದಲು ಸಾಧ್ಯವಾಗುತ್ತದೆ.

35. ಭಾಷಾ ಪಠ್ಯಪುಸ್ತಕದಲ್ಲಿ, ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಕಡಿಮೆ ಪ್ರಮಾಣದಲ್ಲಿ ಸೂಚನೆಗಳನ್ನು ನೀಡಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಅವಶ್ಯಕ ಸೂಚನೆಗಳು ಪಠ್ಯಪುಸ್ತಕದಲ್ಲಿದ್ದರೆ ಶಿಕ್ಷಕರಿಗೆ ವಿಷಯವನ್ನು ಪರಿಣಾಮಕಾರಿಯಾಗಿ ಬೋಧಿಸಲು ಹಾಗೂ ವಿದ್ಯಾರ್ಥಿಗಳಿಗೆ ವಿಷಯವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

5.9.9 ತೀರ್ಮಾನಗಳು

❖ ಪಠ್ಯಪುಸ್ತಕವು ರಾಷ್ಟ್ರೀಯ ಮೌಲ್ಯಗಳನ್ನು, ಮಾನವೀಯ ಮೌಲ್ಯಗಳನ್ನು, ಜೀವನ ಮೌಲ್ಯಗಳನ್ನು, ಕೋಮು ಮತ್ತು ಭಾಷಾ ಸಾಮರಸ್ಯವನ್ನು ಮೂಡಿಸುವ ಸಾಧನವಿದ್ದಂತೆ. ಆದ್ದರಿಂದ ಪಠ್ಯಪುಸ್ತಕವು ಸರಕಾರದ ಅಧೀನದ ಇಲಾಖೆಯಿಂದ ಭಾಷಾ ತಜ್ಞರ ಮಾರ್ಗದರ್ಶನವಲ್ಲಿ ರಚಿತಗೊಳ್ಳಬೇಕು.

- ಬಡಪಾಲಕರ ಮಕ್ಕಳಿಗೆ ಎಟುಕುವ ರೀತಿಯಲ್ಲಿ ಅದರ ಬೆಲೆಯನ್ನು ನಿರ್ಧರಿಸಿ ವಿತರಣೆ ಮಾಡುವ ಕಾರ್ಯವನ್ನು ಸರ್ಕಾರ ನಿರ್ವಹಿಸಬೇಕು. ಪಠ್ಯಪುಸ್ತಕದ ರಾಷ್ಟ್ರೀಕರಣದಿಂದಾಗಿ ಮಾರುಕಟ್ಟೆಯಲ್ಲಿ ಅನಗತ್ಯ ಅಪಾಯಕಾರಿ ಪೈಪೋಟಿಯನ್ನು ತಪ್ಪಿಸಬಹುದು.
- ಸಾಹಿತ್ಯದ ಮೂಲಕ ಸಂಸ್ಕೃತಿಯ ಬೆಳಕನ್ನು ಚೆಲ್ಲುವ ಗದ್ಯಪಾಠಗಳು ಹೆಚ್ಚಾಗಿ ಪಠ್ಯಪುಸ್ತಕದಲ್ಲಿ ರಚನೆಯಾಗಬೇಕು.
- ಮಕ್ಕಳಲ್ಲಿ ಕನ್ನಡ ಭಾಷೆಯ ಬಗೆಗೆ ಅಭಿಮಾನ ಮತ್ತು ಗೌರವ ಬೆಳೆಯುವಂತಹ ಗದ್ಯಪಾಠಗಳು ರಚನೆಯಾಗಬೇಕಿದೆ.
- ಪ್ರತಿಯೊಂದು ಪದ್ಯದ ಕೊನೆಗೆ ಸಾರಾಂಶವನ್ನು ನೀಡಿದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ.
- ಕನ್ನಡ ನಾಡಿನ ಶ್ರೇಷ್ಠ ಕವಿಗಳ, ಸಾಹಿತಿಗಳ ಜೀವನ ಸಾಧನೆಗಳನ್ನು ಪಠ್ಯಪುಸ್ತಕವು ಸಮಗ್ರವಾಗಿ ಒಳಗೊಂಡಿರಬೇಕು.
- ಕೆಲವೊಂದು ಪದ್ಯಗಳಿಗೆ ಸೂಕ್ತವಾದ ತಲೆಬರಹವನ್ನು ನೀಡಬೇಕು. ಉದಾ: ಸಣ್ಣ ಸಂಗತಿ.
- ವ್ಯಾಕರಣವನ್ನು ವಿದ್ಯಾರ್ಥಿಗಳಿಗೆ ಕಲಿಸಲು ಸಾಕಷ್ಟು ಉದಾಹರಣೆಗಳನ್ನು ನೀಡಬೇಕು.
- ಪಠ್ಯಪುಸ್ತಕದಲ್ಲಿ ಚಿತ್ರಗಳು ಮಕ್ಕಳಿಗೆ ಸುಲಭವಾಗಿ ಅರ್ಥವಾಗುವಂತಿರಬೇಕು ಮತ್ತು ಬಣ್ಣದ ಚಿತ್ರಗಳನ್ನು ಮುದ್ರಿಸಬೇಕು. ಇದರಿಂದ ವಿದ್ಯಾರ್ಥಿಗಳಿಗೆ ವಿಷಯ ಮನನವಾಗುತ್ತದೆ.
- ಪಠ್ಯಪುಸ್ತಕ ನಿರ್ದೇಶನಾಲಯವು ಹಾಕಿಕೊಂಡ ಗುರಿ ಮತ್ತು ಉದ್ದೇಶಗಳನ್ನು ಈಡೇರಿಸುವಂತೆ ಪಠ್ಯಪುಸ್ತಕವು ರಚನೆಯಾಗಬೇಕು.
- ಪಠ್ಯಪುಸ್ತಕದಲ್ಲಿರುವ ಗದ್ಯ ಹಾಗೂ ಪದ್ಯಗಳನ್ನು ಬೋಧಿಸಲು ಶಿಕ್ಷಕರಿಗೆ ಹೆಚ್ಚಿನ ಅವಧಿಗಳ ಅವಶ್ಯಕತೆ ಇದೆ.
- ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಅವಶ್ಯಕ ಸೂಚನೆಗಳನ್ನು ಪಠ್ಯಪುಸ್ತಕದಲ್ಲಿ ನೀಡಬೇಕು.

5.9.10 ಮುಂದಿನ ಸಂಶೋಧನೆಗೆ ಸಲಹೆಗಳು

ಮಾನವನ ಆಸಕ್ತಿಯ ಅಧ್ಯಯನದ ಕ್ಷೇತ್ರಗಳಲ್ಲಿ ಭಾಷೆಯ ಮಹತ್ವಪೂರ್ಣವಾದುದರಿಂದ ಕನ್ನಡದಲ್ಲಿ ಬಹಳಷ್ಟು ಸಂಶೋಧನೆಗೆ ಅವಕಾಶಗಳಿವೆ.

- ಭಾಷಾ ಪಠ್ಯಪುಸ್ತಕದಲ್ಲಿ ಆಗುವ ದೋಷಗಳನ್ನು ಕುರಿತು ಅಧ್ಯಯನ ಮಾಡಬಹುದಾಗಿದೆ.
- ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಪಠ್ಯಪುಸ್ತಕಗಳ ಪಾತ್ರ ಕುರಿತು ಒಂದು ಅಧ್ಯಯನ ಮಾಡಬಹುದಾಗಿದೆ.

❖ ಭಾಷಾ ವಿಜ್ಞಾನದ ತಳಹದಿಯ ಮೇಲೆ ರೂಪಿಸಿ, ಪ್ರಾದೇಶಿಕ ಭಾಷಾ ವೈವಿಧ್ಯತೆಗೆ ಅವಕಾಶ ನೀಡಲಾಗಿದೆ ಎಂಬುದರ ಬಗ್ಗೆ ತೌಲನಿಕ ಅಧ್ಯಯನ ಕೈಗೊಳ್ಳಬಹುದು.

❖ ಶಾಲೆ ಒಳಗೆ ಮತ್ತು ಹೊರಗೆ ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಪಠ್ಯಪುಸ್ತಕದ ಪಾತ್ರ ಕುರಿತು ಒಂದು ವಿಮರ್ಶಾತ್ಮಕ ಅಧ್ಯಯನ ನಡೆಸಬಹುದು.

❖ ಪ್ರಾಥಮಿಕ ಹಾಗೂ ಮಾಧ್ಯಮಿಕ ತರಗತಿಗಳ ಕನ್ನಡ ಭಾಷಾ ಪಠ್ಯಪುಸ್ತಕವನ್ನು ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಬಹುದು.

❖ ಪದವಿ ಪೂರ್ವ ಹಾಗೂ ಪದವಿ ತರಗತಿಗಳ ಕನ್ನಡ ಭಾಷಾ ಪಠ್ಯಪುಸ್ತಕವನ್ನು ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಬಹುದು.

ಉಪಸಂಹಾರ

ವಿವಿಧ ತರಗತಿಯಲ್ಲಿ ಬೋಧಿಸಲು ವ್ಯವಸ್ಥಿತ ರೀತಿಯಲ್ಲಿ ವಿಷಯ ಸೂಚನೆಗಳನ್ನು ಹೊಂದಿರುವ ಪುಸ್ತಕಗಳಿಗೆ **'ಪಠ್ಯಪುಸ್ತಕಗಳೆಂದು'** ಕರೆಯುವರು. ಕನ್ನಡ ಭಾಷೆಯನ್ನು ಪ್ರಥಮ ಭಾಷೆ, ದ್ವಿತೀಯ, ತೃತೀಯ ಭಾಷೆಯಾಗಿ ಬೋಧಿಸುವಾಗ ಭಾಷಾ ಕೌಶಲ್ಯಗಳ ಕಲಿಕೆಯಾಗಬೇಕು. ಈ ಉದ್ದೇಶಗಳ ಸಾಧನೆಗೆ ಪಠ್ಯಪುಸ್ತಕ ಕ್ರೀಡೆ, ಯೋಜನೆ, ನಾಟಕ ಪದ್ಧತಿಗಳನ್ನು ಪರಿಣಾಮಕಾರಿಯಾಗಿ ಬಳಸುವ ಬಗೆ ಮುಖ್ಯ. ಗದ್ಯ ಬೋಧನೆ ಹಾಗೂ ಪದ್ಯ ಬೋಧನೆ ಉದ್ದೇಶ, ಬೋಧನಾ ಕ್ರಮ ಇವುಗಳಲ್ಲಿ ಭಿನ್ನತೆ ಇದ್ದು ಗದ್ಯ ಭಾಷಾಂಶ ಕಲಿಕೆಗೆ ಒತ್ತು ಕೊಟ್ಟರೆ, ಪದ್ಯ ಭಾವಾಂಶ ಗ್ರಹಣಕ್ಕೆ ಒತ್ತು ಕೊಡುತ್ತದೆ.

ವ್ಯಾಕರಣ ಕಲಿಕೆ ಭಾಷಾ ಕಲಿಕೆಗಾಗಿಯೇ. ಆದ್ದರಿಂದ ಕ್ರಿಯಾತ್ಮಕ ವ್ಯಾಕರಣ ಬೋಧನೆಯಲ್ಲಿ ಪ್ರಯೋಗಕ್ಕೆ ಪ್ರಾಧಾನ್ಯ ಸಲ್ಲಿಸುವುದು ಮುಖ್ಯ. ವಿದ್ಯಾರ್ಥಿಗಳು ಸ್ವತಂತ್ರ ಶೈಲಿ, ಸೃಜನ ಶೀಲತೆ ಬೆಳೆಸಿಕೊಳ್ಳಲು ಪ್ರಬಂಧ ಬೋಧನೆ, ಪತ್ರ ಲೇಖನ, ಕಥಾರಚನೆ, ಸಂಭಾಷಣೆ ರಚನಾ ಶಕ್ತಿಗಳನ್ನು ಬೆಳೆಸಲು ಚಟುವಟಿಕೆಗಳನ್ನು ಬಳಸಬೇಕು.

ಒಟ್ಟಿನಲ್ಲಿ ಪರಿಷ್ಕೃತ ರಾಷ್ಟ್ರೀಯ ಶಿಕ್ಷಣ ನೀತಿ ಒತ್ತು ನೀಡಿರುವ ಸಾಮರ್ಥ್ಯ ಆಧಾರಿತ ಬೋಧನೆ ಕ್ರಮವನ್ನು ಅನುಸರಿಸಿ ಪಠ್ಯಪುಸ್ತಕದ ಪಾಠಗಳಿಗೆ ಆರಂಭ ಹಂತಗಳಲ್ಲಿ ಚಟುವಟಿಕೆಗಳ ಮೂಲಕ **'ನಲಿಯುತ್ತ ಕಲಿತು, ಕಲಿತು ನಲಿಯುವುದನ್ನೇ ನಲಿಯುವುದಕ್ಕೆ'** ಪಠ್ಯಪುಸ್ತಕವು ಅನುವು ಮಾಡಬೇಕು.

"ಪಠ್ಯಪುಸ್ತಕಗಳು ಆಯಾ ಕಾಲದ ಸಂಸ್ಕೃತಿಯ ಜೀವಂತ ಪ್ರತೀಕ"

ಭಾಷೆಯನ್ನು ಸಾಮಾಜಿಕ, ಭಾವನಾತ್ಮಕ, ಸೃಜನಶೀಲ, ಸಾಹಿತ್ಯ ಹಾಗೂ ಸಾಂಸ್ಕೃತಿಕ ನೆಲೆಗಳಿಂದ ಕಲಿಸಬೇಕು. ಭಾಷಾ ಕಲಿಕೆ ಮತ್ತು ಪ್ರಯೋಗದ ಮೂಲಕ ಸ್ವತಂತ್ರ ಚಿಂತನೆ, ಸೃಜನಶೀಲತೆ, ಕಲೆ,

ಸಾಹಿತ್ಯ, ಸಂಸ್ಕೃತಿ, ಬುದ್ಧಿ ಮತ್ತು ಭಾವಗಳು ವಿಕಾಸವಾಗಬೇಕು. ಭಾಷಾ ಉಪಾಧ್ಯಾಯರು ಭಾಷಾ ಪುಸ್ತಕ ಹಾಗೂ ಕೊಠಡಿಗಳ ಎಲ್ಲೆಗಳನ್ನು ದಾಟಿ ಭಾಷೆಯನ್ನು ಕಲಿಸಬೇಕು. ಇದರ ಜೊತೆಗೆ ಉಳಿದೆಲ್ಲ ವಿಷಯ ಬೋಧಕರು ಸಹ ಭಾಷಾ ಕಲಿಕೆಗೆ ಬೆಂಬಲ ನೀಡಬೇಕು. ಮಕ್ಕಳು ಭಾಷೆಯನ್ನು ಹೇಗೆ ಕಲಿಯುತ್ತಾರೆ? ಹೇಗೆ ಕಲಿಸಬಹುದು? ಅನುಸರಿಸಬೇಕಾದ ತಂತ್ರ, ಸಾಧನಗಳು, ಚಟುವಟಿಕೆಗಳು ಹಾಗೂ ಅಭ್ಯಾಸಗಳು ಮುಂತಾದ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕು.

ಮಾತೃಭಾಷೆಯೇ ಮಕ್ಕಳ ಶಿಕ್ಷಣ ಮಾಧ್ಯಮವಾಗಬೇಕು ಎಂಬ ಕೂಗು ನಿರಂತರ ಕೇಳಿಬರುತ್ತಿದೆ. ಮತ್ತೊಂದು ಕಡೆ ಆಂಗ್ಲಮಾಧ್ಯಮದ ಗೀಳು ಬೆಳೆಯುತ್ತಲೇ ಇದೆ. ಮಕ್ಕಳಿಗೆ ಕನ್ನಡ ಭಾಷೆ ಕೊಡಲಾರದನ್ನು ಆಂಗ್ಲಭಾಷೆ ಹೇಗೆ ಕೊಡುತ್ತದೆ? ಮಕ್ಕಳಿಗೆ ಅಗತ್ಯವಿರುವ ಎಲ್ಲ ವಿಷಯಗಳನ್ನು ಕನ್ನಡ ಭಾಷೆಯ ಮೂಲಕ ನೀಡಲಾಗುವುದಿಲ್ಲವೇ? ಎಂಬ ಸವಾಲುಗಳನ್ನು ಉಪಾಧ್ಯಾಯರು ಅರ್ಥಮಾಡಿಕೊಂಡು ಕನ್ನಡ ಮಾಧ್ಯಮದ ಸತ್ತ್ವವನ್ನು ಹೆಚ್ಚಿಸುವ ಪ್ರಾಮಾಣಿಕ ಪ್ರಯತ್ನಗಳಾಗಬೇಕು. ಯಾಕೋ ಏನೋ ನಮ್ಮ ವಿದ್ಯಾರ್ಥಿಗಳು ಭಾಷೆ ಮತ್ತು ಸಾಹಿತ್ಯವನ್ನು ಆಸಕ್ತಿಯಿಂದ ಕಲಿಯುತ್ತಿಲ್ಲ. ಈ ವಿಷಯವನ್ನು ಕುರಿತು ಆಳವಾಗಿ ಯೋಚಿಸಬೇಕಾದ ಅಗತ್ಯವಿದೆ. ಮಕ್ಕಳು ಭಾಷಾ ತರಗತಿಗಳಲ್ಲಿ ಸಂತಸವಾಗಿ ಪಾಲ್ಗೊಂಡು ಕಲಿಯುವ ವಾತಾವರಣ ಸೃಷ್ಟಿ ಮಾಡುವ ಮಾರ್ಗೋಪಾಯಗಳನ್ನು ಅಭಿವೃದ್ಧಿಗೊಳಿಸಿಕೊಳ್ಳಬೇಕು. ಭಾಷೆಯ ಮೂಲಕ ವಿದ್ಯಾರ್ಥಿಗಳ ಚಿಂತನೆ, ಚರ್ಚೆ ಹಾಗೂ ಅಭಿವ್ಯಕ್ತಿಗಳು ಗಟ್ಟಿಗೊಳ್ಳಲು ಕ್ರಮಗಳನ್ನು ಕೈಗೊಳ್ಳಬೇಕು.

* * * *

ಅನುಬಂಧಗಳು

ಅನುಬಂಧ – 1

ಪರವಾನಿಗೆ ಪತ್ರ

ಗೆ,

____

____

____

ಶ್ರೀ ಈರಪ್ಪ ಮಹಾಲಿಂಗಪೂರ ಇವರು ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು ಅಧ್ಯಯನ ಕೇಂದ್ರದ ವಿದ್ಯಾರ್ಥಿಯಾಗಿದ್ದು ನನ್ನ ಮಾರ್ಗದರ್ಶನದಲ್ಲಿ ಈ ಕೆಳಗಿನ ಸಂಶೋಧನಾ ವಿಷಯವನ್ನು ಅಧ್ಯಯನಕ್ಕೆ ಆಯ್ದುಕೊಂಡಿದ್ದಾರೆ.

ವಿಷಯ: "ಪ್ರೌಢಶಾಲಾ ಹಂತದ ಕನ್ನಡ ಭಾಷೆ ಮತ್ತು ಸಾಹಿತ್ಯ ಬೋಧನೆ ಒಂದು ಅಧ್ಯಯನ"

ಈ ಕುರಿತು ಇವರಿಗೆ ಬೇಕಾದ ಮಾಹಿತಿಯನ್ನು ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ನೀವು ಕೊಟ್ಟಂತಹ ಮಾಹಿತಿಯನ್ನು ಗೌಪ್ಯವಾಗಿಡುವುದಲ್ಲದೇ, ಇದನ್ನು ಸಂಶೋಧನೆಗಾಗಿ ಮಾತ್ರ ಬಳಸಿಕೊಳ್ಳಲಾಗುವುದು. ಇದಕ್ಕೆ ತಮ್ಮ ಸೂಕ್ತ ಸಹಕಾರ ಕೋರಲಾಗಿದೆ.

ಧನ್ಯವಾದಗಳೊಂದಿಗೆ,

ಸ್ಥಳ : ಬೆಂಗಳೂರು

ದಿನಾಂಕ:

ಮುಖ್ಯಸ್ಥರು

ಅನುಬಂಧ – 2

"ಪ್ರೌಢಶಾಲಾ ಹಂತದ ಕನ್ನಡ ಭಾಷೆ ಮತ್ತು ಸಾಹಿತ್ಯ ಬೋಧನೆ ಒಂದು ಅಧ್ಯಯನ"

❖ ಶಿಕ್ಷಕರ ಹೆಸರು :

❖ ಶಾಲೆಯ ಹೆಸರು :

❖ ಶಿಕ್ಷಕರ ಸಹಿ :

ಸೂಚನೆಗಳು:

ಈ ಪ್ರಶ್ನಾವಳಿಯ ಮಾಹಿತಿಯನ್ನು ಕೇವಲ ಎಂ.ಫಿಲ್. ಸಂಶೋಧನಾ ಅಧ್ಯಯನಕ್ಕೆ ಮಾತ್ರ ಬಳಸಲಾಗುವುದು. ನೀವು ಕೊಟ್ಟ ಮಾಹಿತಿಯನ್ನು ಗೌಪ್ಯವಿಡಲಾಗುತ್ತದೆ. ಮುಕ್ತ ಮನಸ್ಸಿನಿಂದ ಈ ಕೆಳಗಿನ ಪ್ರಶ್ನೆಗಳಿಗೆ **ಹೌದು, ಭಾಗಶಃ** ಮತ್ತು ಇಲ್ಲ ಎಂದು (✓) ಚಿಹ್ನೆಯನ್ನು ಗುರುತು ಹಾಕಿ ಉತ್ತರವನ್ನು ಸೂಚಿಸಿರಿ.

ಸಂಶೋಧನಾ ವಿದ್ಯಾರ್ಥಿ

ಅನುಬಂಧ – 3

ಪ್ರೌಢಶಾಲಾ ಹಂತದ ಕನ್ನಡ ಭಾಷೆ ಮತ್ತು ಸಾಹಿತ್ಯ ಬೋಧನೆಯ ಒಂದು ಅಧ್ಯಯನ

ಪ್ರಶ್ನಾವಳಿ

ಅ.ಸಂ.	ಪ್ರಶ್ನೆಗಳು	ಹೌದು	ಭಾಗಶಃ	ಇಲ್ಲ
1.	ಪ್ರೌಢಶಾಲಾ ಹಂತದ ಕನ್ನಡ ಭಾಷಾ ಪಠ್ಯಪುಸ್ತಕದಲ್ಲಿ ಇರುವ ಪಠ್ಯವಸ್ತುವಿನಿಂದ ಭಾಷಾ ಸಾಮರ್ಥ್ಯಗಳನ್ನು ಬೆಳೆಸಬಹುದೇ?			
2.	ಸಾಹಿತ್ಯದ ಮೂಲಕ ಸಂಸ್ಕೃತಿಯ ಬಗ್ಗೆ ಕಳಕಳಿ ನೀಡುವ ಪಾಠ–ಪದ್ಯಗಳಿವೆಯೇ?			
3.	ಪ್ರಸ್ತುತ ಪಠ್ಯವಸ್ತುವಿನಿಂದ ಭಾಷೆ ಮತ್ತು ಸಾಹಿತ್ಯದ ಅಭಿರುಚಿಯನ್ನು ವಿದ್ಯಾರ್ಥಿಗಳಲ್ಲಿ ಹೆಚ್ಚಿಸಬಹುದೇ?			
4.	ಗದ್ಯ–ಪದ್ಯ–ಪಠ್ಯಪೂರಕ ಅಧ್ಯಯನದಿಂದ ವಿಷಯ ಗ್ರಹಣವನ್ನು ಹೆಚ್ಚಿಸಬಹುದೇ?			
5.	ಸಾಹಿತ್ಯಾಭಿರುಚಿ ಮತ್ತು ಭಾಷಾ ಪ್ರೇಮವನ್ನು ಬೆಳೆಸುವ ಕಾರ್ಯಕ್ರಮಗಳಿಗೆ ಪ್ರಸ್ತುತ ಪಠ್ಯವಸ್ತುವಿಂದ ಅವಕಾಶ ಇದೆಯೇ?			
6.	ಕನ್ನಡ ಸಾಹಿತ್ಯ, ಸಂಸ್ಕೃತಿ, ಕವಿ ಪುಂಗವರ ಬಗ್ಗೆ ವಿಶಿಷ್ಟ ಮಾಹಿತಿಯನ್ನು ಒಳಗೊಂಡ ಪಾಠ–ಪದ್ಯಗಳಿವೆಯೇ?			
7.	ರಾಮಾಯಣ–ಮಹಾಭಾರತದಂತಹ ಪ್ರಸಿದ್ಧ ಕಾವ್ಯಗಳು, ಅವುಗಳಿಂದ ಪ್ರೇರಿತವಾದ ಸಾಹಿತ್ಯದ ವಿವಿಧ ಪ್ರಕಾರಗಳು ಸಮೃದ್ಧವಾಗಿ ರಚಿತವಾಗಿವೆಯೇ?			
8.	ಕನ್ನಡ ಸಾಹಿತ್ಯದ ಶ್ರೀಮಂತ ಪರಂಪರೆಯನ್ನು ಪರಿಚಯಿಸಲಾಗಿದೆಯೇ?			
9.	ಅಧ್ಯಯನಶೀಲತೆ, ಜ್ಞಾನಾರ್ಜನೆ ಮತ್ತು ವ್ಯಕ್ತಿತ್ವ ವಿಕಾಸಕ್ಕೆ ನೆರವಾಗುವ ಪಾಠ–ಪದ್ಯಗಳು ಇವೆಯೇ?			
10.	ರಸಾನುಭವ ಮತ್ತು ಕಲ್ಪನಾ ಶಕ್ತಿಯನ್ನು ಬೆಳೆಸುವ ಪಠ್ಯವಸ್ತುವನ್ನು ಹೊಂದಿದೆಯೇ?			


11.	ಸಾಹಿತ್ಯ ಅಧ್ಯಯನ ಸಾಮರ್ಥ್ಯವನ್ನು ಬೆಳೆಸಬಹುದಾದ ಪಾಠಗಳಿವೆಯೇ?			
12.	ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಶಾಸನಗಳು ಹೇಗೆ ಪೂರಕವಾಗಿವೆ?			
13.	ಜೀವನ ಮೌಲ್ಯಗಳಾದ ಸತ್ಯ, ಪ್ರೇಮ, ಅಹಿಂಸೆ, ತ್ಯಾಗ, ನಿಸ್ವಾರ್ಥ ಸೇವೆ ಮೊದಲಾದ ಮೌಲ್ಯಗಳನ್ನು ಪ್ರತಿಪಾದಿಸುವ ಪಾಠಗಳಿವೆಯೇ?			
14.	ಜನಪದ ಸಾಹಿತ್ಯದ ವಿವಿಧ ಪ್ರಕಾರಗಳಾದ ಜನಪದ ಗೀತೆ, ಕತೆ, ಗಾದೆ, ಒಗಟು ಮತ್ತು ಲಾವಣಿಗಳು ಸಮರ್ಪಕವಾಗಿ ಮೂಡಿ ಬಂದಿವೆಯೇ?			
15.	ಭಾಷಾ ಕಲಿಕೆ ಮತ್ತು ಜ್ಞಾನ ಸಂವರ್ಧನೆಗೆ ಅವಕಾಶ ಮಾಡಿಕೊಡಲಾಗಿದೆಯೇ?			
16.	ಭಾಷಾ ಸಾಮರ್ಥ್ಯಗಳನ್ನು ಕ್ಷೇತ್ರಗಳಿಗನುಗುಣವಾಗಿ ಅನ್ವಯಿಸಿ ಸಮರ್ಥ ಕಲಿಕೆಗೆ ಅನುವಾಗುವಂತೆ ಪಠ್ಯವಸ್ತುಗಳಲ್ಲಿ ಅಳವಡಿಸಲಾಗಿದೆಯೇ?			
17.	ಸಾಮಾಜಿಕ, ಸಾಂಸ್ಕೃತಿಕ, ಪ್ರಾದೇಶಿಕ ಮತ್ತು ಲಿಂಗ ಸಮಾನತೆಯನ್ನು ಕಾಯ್ದುಕೊಂಡಿದೆಯೇ?			
18.	ಪ್ರಸ್ತುತ ಪಠ್ಯವಸ್ತುವಿನಲ್ಲಿ ಸ್ವ-ಕಲಿಕೆ ಹಾಗೂ ಬೋಧನಾ ಕೌಶಲಕ್ಕೆ ಸೂಕ್ತವಾಗಿದೆಯೇ?			
19.	ಕಲಿಕಾರ್ಥಿಗಳ ಆಸಕ್ತಿ ಮತ್ತು ಉಲ್ಲಾಸವನ್ನು ಹೆಚ್ಚಿಸುವ ಉದ್ದೇಶದಿಂದ ರಚಿಸಿರುವ ಪಾಠಗಳಲ್ಲಿ ವೈವಿಧ್ಯತೆ ಇದೆಯೇ?			
20.	ಬೋಧನೆ ಹಾಗೂ ಭಾಷಾ ಕಲಿಕೆಯ ಭಾಗಗಳನ್ನು ಅರ್ಥೈಸಿಕೊಳ್ಳಲು ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಕ್ರಿಯಾತ್ಮಕ ಭಾಷಿಕ ಕ್ರಮಗಳನ್ನು ವ್ಯವಸ್ಥಿತವಾಗಿ ಅಳವಡಿಸಲಾಗಿದೆಯೇ?			
21.	ಭಾಷಾ ಹಾಗೂ ಜ್ಞಾನ ಗ್ರಹಿಕೆಗೆ ಸಂಬಂಧಿಸಿದಂತೆ ಸೂಕ್ತ ಅಭ್ಯಾಸ, ಭಾಷಾಭ್ಯಾಸ ಮತ್ತು ಚಟುವಟಿಕಾ ಮಾದರಿಗಳನ್ನು, ನಮೂನೆಗಳನ್ನು ಸಮರ್ಪಕವಾಗಿ ನೀಡಿದ್ದಾರೆಯೇ?			
22.	ಸಾಹಿತ್ಯ ಪ್ರಕಾರ, ಭಾಷಾ ಕ್ರಿಯಾತ್ಮಕ ವಿಚಾರ, ಅವಸ್ಥಾ ಘಟಕಾಂಶ ಬೋಧನಾ ಆಶಯದ ಮಾಹಿತಿಗಳನ್ನು ಒಳಗೊಂಡಿದೆಯೇ?			

23.	ಪಠ್ಯಪುಸ್ತಕದಲ್ಲಿರುವ ಗದ್ಯಪಾಠಗಳಲ್ಲಿ ಅವಶ್ಯಕ ನಿದರ್ಶನ, ಹೋಲಿಕೆಗಳು, ವ್ಯತ್ಯಾಸಗಳು ಹಾಗೂ ಚಟುವಟಿಕೆಗಳನ್ನು ಕುರಿತ ಸೂಚನೆಗಳಿವೆಯೇ?			
24.	ನಾಡು-ನುಡಿಗಳ ಬಗ್ಗೆ ಅಭಿಮಾನವನ್ನು ಮೂಡಿಸುವ ಮಹಾನ್ ವ್ಯಕ್ತಿಗಳ ಜೀವನದ ಮಾಹಿತಿಗಳನ್ನು ಒಳಗೊಂಡಿದೆಯೇ?			
25.	ಪಠ್ಯಪುಸ್ತಕಗಳಲ್ಲಿ ಭಾಷಾ ಬಳಕೆಯು ಸರಳ ಮತ್ತು ಸ್ಪಷ್ಟವಾಗಿದೆಯೇ?			
26.	ಪಠ್ಯಪುಸ್ತಕಗಳಲ್ಲಿ ರಾಷ್ಟ್ರೀಯ ಮೌಲ್ಯಗಳನ್ನು ಪ್ರತಿಬಿಂಬಿಸುವ ಸಂದೇಶಗಳನ್ನು ಮುದ್ರಿಸಲಾಗಿದೆಯೇ?			
27.	ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ಮತ್ತು ಕೆ.ಸಿ.ಎಫ್ 2007 ರ ನೀತಿ ನಿಯಮಗಳನ್ನು ಒಳಗೊಂಡಿದೆಯೇ?			
28.	ಪಠ್ಯಪುಸ್ತಕ ಕೇವಲ ಪರೀಕ್ಷಾ ದೃಷ್ಟಿಯಿಂದ ಕೂಡಿದೆಯೇ?			
29.	ಪ್ರಸ್ತುತ ಪಠ್ಯಪುಸ್ತಕಗಳಿಂದ ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಕೌಶಲ್ಯ ಬೆಳೆಸಬಹುದೇ?			
30.	ಪಠ್ಯಪುಸ್ತಕದಲ್ಲಿನ ಚಿತ್ರಗಳು ಮಕ್ಕಳಿಗೆ ಸುಲಭವಾಗಿ ಅರ್ಥವಾಗುವಂತಿವೆಯೇ?			


ಅನುಬಂಧ – 4

ಅಧ್ಯಯನಕ್ಕೆ ಒಳಪಡಿಸಿದ ಪ್ರೌಢಶಾಲಾ ಕನ್ನಡ ಭಾಷಾ ಪಠ್ಯಪುಸ್ತಕಗಳು


ಪ್ರಥಮ ಭಾಷೆ



ದ್ವಿತೀಯ ಭಾಷೆ





ತೃತೀಯ ಭಾಷೆ



ಅನುಬಂಧ – 5

ಕನ್ನಡ ಭಾಷಾ ಪಠ್ಯಪುಸ್ತಕಗಳ ಬಗ್ಗೆ ಮಾಧ್ಯಮಗಳಲ್ಲಿ ಪ್ರಕಟವಾದ ಆಕ್ಷೇಪಗಳು





ಅನುಬಂಧ – 6

8 ರಿಂದ 10ನೇ ತರಗತಿ ಕನ್ನಡ ಪ್ರಥಮ, ದ್ವಿತೀಯ, ತೃತೀಯ ಭಾಷಾ ಪಠ್ಯಪುಸ್ತಕಗಳಲ್ಲಿನ

ತಿದ್ದುಪಡಿ ವಿವರಗಳು

ತರಗತಿ	ಪಾಠದ ಸಂಖ್ಯೆ ಮತ್ತು ಹೆಸರು	ಪುಟ ಸಂಖ್ಯೆ	ಪ್ಯಾರಾ ಸಂಖ್ಯೆ	ಸಾಲಿನ ಸಂಖ್ಯೆ	ತಪ್ಪು (ಮುದ್ರಣ ದೋಷ)	ಒಪ್ಪು (ಪಠ್ಯಪುಸ್ತಕದಲ್ಲಿ ತಿದ್ದುಪಡಿ ಮಾಡಿಕೊಳ್ಳಬೇಕಾಗಿರುವುದು)
8	5. ಹೂವಾದ ಹುಡುಗಿ	45	4	5	ನಿಷ್ಠರವಾಗಿ ಮಾತನಾಡಿದಳು	ನಿಷ್ಠುರವಾಗಿ ಮಾತನಾಡಿದಳು.
8	1. ಕನ್ನಡಿಗರ ತಾಯಿ	87	(ಪ್ರವೇಶ)	5	ಕರ್ನಾಟಕದ ಏಕೀಕರಣರಣದ	ಕರ್ನಾಟಕ ಏಕೀಕರಣದ
8	1. ಕನ್ನಡಿಗರ ತಾಯಿ	90	1	6	ಸಮ್ಮೇಳದ	**ಸಮ್ಮೇಳನದ**
8	5. ವಚನಾಮೃತ	115	ಉ	ಪ್ರಶ್ನೆ 1	ಬುದ್ಧಿಯನ್ನು ಕಲಿಸುತ್ತಿದ್ದ ಇದಾಗಿತ್ತು	ಬುದ್ಧಿಯನ್ನು ಹೀಗೆ **ಕಲಿಸುತ್ತಿದ್ದರು**
8	6. ಸೋಮೇಶ್ವರ ಶತಕ	120	2	1	ಶಬ್ದಾಂಕಾರ	**ಶಬ್ದಾಲಂಕಾರ**
8	8. ರಾಮಧಾನ್ಯ ಚರಿತೆ	130	1ನೇ ಪದ್ಯ	3	ಕೆಲವು ಹಾರಕವೆಂದು	**ಕೆಲರು** ಹಾರಕವೆಂದು
8	8. ರಾಮಧಾನ್ಯ ಚರಿತೆ	135	1	3	'ಎನಗೆ ಸವಿಯುವುದನ್ನು ಧಾನ್ಯದ ತನುವನೀಕ್ಷಿಸಬೇಕು ದೇವರು ತರಿಸಿ'	**'ನಾನು ಸವಿದ ಧಾನ್ಯದ ತನುವನೀಕ್ಷಿಸಬೇಕು ತರಿಸಿ'**
8	8. ರಾಮಧಾನ್ಯ ಚರಿತೆ	137	ಆ	ಪ್ರಶ್ನೆ 4	ನರೆದಲಗನು	**ನರೆದಲಗವು**
9	1. ಕನ್ನಡ ಮೌಲ್ವಿ	5	(ಆಶಯ ಭಾವ)	2	ನಿರ್ದೇಶನಗಳು ನಮ್ಮ ಮುಂದಿವೆ	**ನಿದರ್ಶನಗಳು** ನಮ್ಮ ಮುಂದಿವೆ
9.	5. ಪ್ರಜಾನಿಷ್ಠೆ	39	1	6	ಗಂಗ ಸಾಮ್ರಾಜ್ಯವನ್ನು	**ಹೊಯ್ಸಳ** ಸಾಮ್ರಾಜ್ಯವನ್ನು
9	2. ಪಾರಿವಾಳ	97	(ಆಶಯ ಭಾವ)	5	ಬೇಡನ ಪಾಲದವು	ಬೇಡನ **ಪಾಲಾದವು**
10	3. ಲಂಡನ್ ನಗರ	32	ಪದಗಳ ಅರ್ಥ	3	ಕುಟ	**ಕೂಟ**

ತರಗತಿ	ಪಾಠದ ಸಂಖ್ಯೆ ಮತ್ತು ಹೆಸರು	ಪುಟ ಸಂಖ್ಯೆ	ಪ್ಯಾರಾ ಸಂಖ್ಯೆ	ಸಾಲಿನ ಸಂಖ್ಯೆ	ತಪ್ಪು (ಮುದ್ರಣ ದೋಷ)	ಒಪ್ಪು (ಪಠ್ಯಪುಸ್ತಕದಲ್ಲಿ ತಿದ್ದುಪಡಿ ಮಾಡಿಕೊಳ್ಳಬೇಕಾಗಿರುವುದು)
10	5. ಎದೆಗೆ ಬಿದ್ದ ಅಕ್ಷರ	53	(ಕೃತಿಕಾರರ ಪರಿಚಯ)	1	ದೇವನೂರ ಮಹಾದೇವ (ಕ್ರಿ.ಶ. 1949)	**ದೇವನೂರ ಮಹಾದೇವ (ಕ್ರಿ.ಶ. 1948)**
10	6. ಛಲಮನೆ ಮೆಱೆವೆಂ	136	6ನೇ ಪದ್ಯದ ಶೀರ್ಷಿಕೆ	1	'ಛಲಮನೆ ಮೆಟಿವೆಂ'	**'ಛಲಮನೆ ಮೆಱೆವೆಂ'**
10	6. ಛಲಮನೆ ಮೆಱೆವೆಂ	136	ವಚನ	2	ಮೀಱೆವರಲ್ಲ	**'ಮೀಱುವರಲ್ಲ'**
10	6. ಛಲಮನೆ ಮೆಱೆವೆಂ	140	ಈ (ಸಂದರ್ಭ)	1	'ನೆಲಕಿಟಿವೆನೆಂದು ಬಗೆದಿರೆ ಚಲಕಿಟಿವೆಂ'	**'ನೆಲಕಿಱಿವೆನೆಂದು ಬಗೆದಿರೆ ಚಲಕಱಿವೆಂ'**
10	6. ಛಲಮನೆ ಮೆಱೆವೆಂ	144	ಚಟುವಟಿಕೆ	'ಅ'	ಕಂಠಪಾಟ ಮಾಡಿ	**ಕಂಠಪಾಠ ಮಾಡಿ**
10	6. ಛಲಮನೆ ಮೆಱೆವೆಂ	144	ಚಟುವಟಿಕೆ (ಅ)	1	(ಕಂಠಪಾಠ ಮಾಡಿ) (1) ನೆಲಕಿಟಿವೆನೆಂದು ಬಗೆದಿರೆ	**ನೆಲಕಿಱಿವೆನೆಂದು ಬಗೆದಿರೆ**
10	8. ಕೆಮ್ಮನೆ ಮೀಸೆವೊತ್ತೆನೇ	154	2ನೇ ವಚನ	3	ಕೇಳ್ದಾ ಪೊಱಲ್ಗೆವಂದು	**ಕೇಳ್ದಾ ಪೊಟಲ್ಗೆವಂದು**
10	8. ಕೆಮ್ಮನೆ ಮೀಸೆವೊತ್ತೆನೇ	155	2ನೇ ವಚನ	1	ನಾಣಿಲಿ ಪಾರ್ವನನೆಱೆದು	**ನಾಣಿಲಿ ಪಾರ್ವನನೆಟಿದು**
10	8. ಕೆಮ್ಮನೆ ಮೀಸೆವೊತ್ತೆನೇ	157	4	1	ಚಂ॥ ಖಳನೊಳವಿಂಗೆ ತಪ್ಪೆವರಮ್	**ಚಂ॥ ಖಳನೊಳವಿಂಗೆ ಕುಪ್ಪೆವರಮ್**
10	8. ಕೆಮ್ಮನೆ ಮೀಸೆವೊತ್ತೆನೇ	157	ಆಶಯ ಭಾವ (ಕೊನೆಯ ಸಾಲು)	2	ತನ್ನ ಬಳಿಕ ಬಂದರೆ ಸಹಾಯ ಮಾಡುವುದಾಗಿ ದ್ರೋಣನಿಗೆ ಹಾಳಿದನು.	'ತನ್ನ ಬಳಿಗೆ ಬಂದರೆ ಸಹಾಯ ಮಾಡುವುದಾಗಿ ದ್ರೋಣನಿಗೆ **ಹೇಳಿದನು**'.
10	8. ಕೆಮ್ಮನೆ ಮೀಸೆವೊತ್ತೆನೇ	160	ಈ (ಸಂದರ್ಭ)	5	ನೊಳವಿಂಗೆ ತಪ್ಪೆ ವರಂ	'ನೊಳವಿಂಗೆ **ಕುಪ್ಪೆ** ವರಂ'
10	5. ಜನಪದ ಒಗಟುಗಳು	176	ಒಗಟು–6	1	ಬಗಲಲ್ಲಿ ಕುಕ್ಕುವುದು	'ಬಗಲಲ್ಲಿ **ಕಕ್ಕುವುದು**'
8	2. ಕನಸು ಮತ್ತು ಸಂದೇಶ	13	1	3	'ಸಿರಿತನಕ್ಕೆ ಹದಿಮೂರೇ ಹೆಜ್ಜೆ'	'ಸಿರಿತನಕ್ಕೆ ಹದಿಮೂರೇ **ಹೆಜ್ಜೆ**'
8	4. ಸುಕ್ರಿ	28	(ಕೃತಿಕಾರರ	3	'ಜಾಣೆ ಕನ್ನಡವ	ಜಾಣೆ ಕನ್ನಡವ **ತಿಳಿದ್ಹೇಳೆ**

ತರಗತಿ	ಪಾಠದ ಸಂಖ್ಯೆ ಮತ್ತು ಹೆಸರು	ಪುಟ ಸಂಖ್ಯೆ	ಪ್ಯಾರಾ ಸಂಖ್ಯೆ	ಸಾಲಿನ ಸಂಖ್ಯೆ	ತಪ್ಪು (ಮುದ್ರಣ ದೋಷ)	ಒಪ್ಪು (ಪಠ್ಯಪುಸ್ತಕದಲ್ಲಿ ತಿದ್ದುಪಡಿ ಮಾಡಿಕೊಳ್ಳಬೇಕಾಗಿರುವುದು)
	ಬೊಮ್ಮನಗೌಡ		ಪರಿಚಯ) 2		ತಿಳಿಸದ್ದೇಳಿ'	
8	1. ಅನ್ವೇಷಣೆ	66	(ಕೃತಿಕಾರರ ಪರಿಚಯ) 3	3	71ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ	**61ನೆಯ** ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ
8	5. ತೂಗಿ ತೂಗಿ ಮರಗಳೇ	85	(ಕೃತಿಕಾರರ ಪರಿಚಯ) 2	1	'ಹೊರಳುದಾರಿಯಲ್ಲಿ' 'ಕಾವ್ಯ ನಂದನ'	**'ಹೊರಳುದಾರಿಯಲ್ಲಿಕಾವ್ಯ' 'ನಂದನ'**
9	2. ಅರಳಿಕಟ್ಟೆ	12	(ಕೃತಿಕಾರರ ಪರಿಚಯ) 1	2	1918ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು	**1916**ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು
9	5. ಉರುಸುಗಳಲ್ಲಿ ಭಾವೈಕ್ಯತೆ	38	(ಕೃತಿಕಾರರ ಪರಿಚಯ) 1	5	ಕನ್ನಡ ಪ್ರಾಧ್ಯಾಪರಾಗಿ	ಕನ್ನಡ **ಪ್ರಾಧ್ಯಾಪಕರಾಗಿ**
10	3. ಗಾನಯೋಗಿ ಪಂಡಿತ ಪುಟ್ಟರಾಜು ಗವಾಯಿ	20	(ಕೃತಿಕಾರರ ಪರಿಚಯ)	7	'ಹಾರಿದ ಗರುಡ' ಕಥಾ ಸಂಕಲನಕ್ಕೆ	**'ಅಮೃತಕ್ಕೆ ಹಾರಿದ ಗರುಡ'** ಕಥಾ ಸಂಕಲನಕ್ಕೆ
8	10. ಮಾಸ್ತಿಯವರ ಮಾತೃಪ್ರೇಮ	54	(ಕೃತಿಕಾರರ ಪರಿಚಯ) 2	2	(ಮಾಸ್ತಿಯವರ ಪರಿಚಯ) 06-08-1890ರಲ್ಲಿ ಜನಿಸಿದರು	**06-06-1891**ರಲ್ಲಿ ಜನಿಸಿದರು
9	4. ನಾಲಗೆ	23	ಪದಗಳ ಅರ್ಥ	5	ಮಾನ್ಯತೆ	**ಮ್ಲಾನತೆ**
9	5. ಕನ್ನಡವ ನುಡಿ	31	ಕೃತಿಕಾರರ ಪರಿಚಯ	1	1961 ಮೇ 10ರಂದು	**1961 ಮೇ 11ರಂದು**
9	9. ಒಂದು ರಾತ್ರಿ	56	ಕೃತಿಕಾರರ ಪರಿಚಯ	1	1914 ಫೆಬ್ರವರಿ 18ರಲ್ಲಿ	**1914 ಫೆಬ್ರವರಿ 08ರಲ್ಲಿ**
9	11. ನಿರೀಕ್ಷೆ	71	ಕೃತಿಕಾರರ ಪರಿಚಯ	1	1946 ಜನವರಿ 2 ರಂದು ಜನಿಸಿದರು	**1950 ಜನವರಿ 2 ರಂದು** ಜನಿಸಿದರು
10	3. ಕೊಡಗಿನ ಗೌರಮ್ಮ	16	ಪದಗಳ ಅರ್ಥ	3	ಮಾತಿಲ್ಲವಾನು	**ಮಾತಿಲ್ಲವಾಗು**

ಆಧಾರ ಗ್ರಂಥಗಳು

ಆಧಾರ ಗ್ರಂಥಗಳು

1.	ಅನಸೂಯ ವಿ. ಪರಗಿ	ಮಾತೃಭಾಷೆ ತತ್ವ ಮತ್ತು ಬೋಧನಾ ಮಾರ್ಗ– ಅನುಸೂಯ ಪ್ರಕಾಶನ, ಪುರವರ – 1995
2.	ಅನಂತರಾಮು ರಾ.	ಕನ್ನಡ ಭಾಷಾ ಬೋಧನೆ – ಭಾರತಿ ಪ್ರಕಾಶನ ಸರಸ್ವತಿಪುರಂ, ಮೈಸೂರು– 1993.
3.	ಕರಜಗಿ ಬಿ.ಡಿ.	ಕನ್ನಡ ಬೋಧನೆಯ ಪದ್ಧತಿಗಳು – ಭಾರತ್ ಬುಕ್ ಡಿಪೋ – ಧಾರವಾಡ– 1990
4.	ಕುಲಕರ್ಣಿ ಕೆ.ಜಿ.	ಪ್ರಚಲಿತ ಶೈಕ್ಷಣಿಕ ತತ್ವಗಳು – ಪ್ರದೀಪ ಪ್ರಕಾಶನ – ಗದಗ – 1993.
5.	ಕೃಷ್ಣಪ್ಪ ಎಸ್.	ಕನ್ನಡ ಬೋಧನೆ – ಕನ್ನಡ ಅಧ್ಯಯನ ಸಂಸ್ಥೆ –ಮೈಸೂರು ವಿಶ್ವವಿದ್ಯಾನಿಲಯ – 1983
6.	ಗಿರಿಗೌಡ	ಕನ್ನಡ ವ್ಯಾಕರಣ ಪರಿಚಯ – ಡಿವಿಕೆ ಮೂರ್ತಿ ಪ್ರಕಾಶಕರು – ಮೈಸೂರು.
7.	ಚಂದ್ರಶೇಖರ್ ಕೆ.	ಹೊಸಗನ್ನಡ ವ್ಯಾಕರಣ ಕೈಪಿಡಿ– ರಾಘವೇಂದ್ರ ಪ್ರಕಾಶನ – ಬೆಂಗಳೂರು.
8.	ಡಾ॥ ಚಿದಾನಂದಮೂರ್ತಿ ಎಂ.	ಭಾಷಾ ವಿನ್ಯಾಸದ ಮೂಲ ತತ್ವಗಳು – ಡಿವಿಕೆ ಮೂರ್ತಿ ಪ್ರಕಾಶಕರು– ಮೈಸೂರು– 1991.
9.	ಧಾರವಾಡಕರ ರಾ.ಯ.	ಕನ್ನಡ ಭಾಷಾ ಶಾಸ್ತ್ರ – ನೀಲಾ ಬುಕ್ ಹೌಸ್ ಪ್ರಕಾಶಕರು – ಮೈಸೂರು.
10.	ನಂಜುಂಡಸ್ವಾಮಿ, ಎ.ಎಸ್.	ಭಾಷಾ ಬೋಧನೆ ಪ್ರಕಾಶಕರು, ಸಮಾಜ ಪುಸ್ತಕಾಲಯ, ಧಾರವಾಡ, 1989
11.	ಡಾ. ನರಸಿಂಹಮೂರ್ತಿ	ಕನ್ನಡ ಲಿಪಿಯ ಉಗಮ ಮತ್ತು ವಿಕಾಸ, ಕನ್ನಡ ಅಧ್ಯಯನ ಸಂಸ್ಥೆ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು – 1975.

12.	ಪಂಡಿತ್, ಸಿ. ಕೃಷ್ಣ	ಶಾಲೆಗಳಲ್ಲಿ ಕನ್ನಡ ಬೋಧನೆ – ಗೀತಾ ಬುಕ್ ಹೌಸ್, ಪ್ರಕಾಶಕರು – ಮೈಸೂರು – 1990
13.	ಡಾ. ಪದ್ಮಪ್ರಸಾದ್ ಎಸ್.ಪಿ.	ಶೈಕ್ಷಣಿಕ ಸಂಶೋಧನೆ, ಪ್ರಕಾಶಕರು, ಡೆಪ್ಯೂಟಿ ಚನ್ನಬಸಪ್ಪ ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನ, ಜಿ. ಶಿ. ತ, ಸಂಸ್ಥೆ, ಧಾರವಾಡ – 1992
14.	ಪುಟ್ಟಪ್ಪ ಕೆ.ವಿ.	ಕನ್ನಡ ಕೈಪಿಡಿ, ಪ್ರಕಾಶಕರು, ನಿರ್ದೇಶಕರು ಪ್ರಸಾರಾಂಗ, ಮಾನಸ ಗಂಗೋತ್ರಿ ಮೈಸೂರು – 1975
15.	ಕುಮಾರಿ ಪೂರ್ಣಿಮಾ ಆರ್. ಕುಲಕರ್ಣಿ	ಎಂ.ಇಡಿ. ಸಂಶೋಧನಾ ಪ್ರಬಂಧ, ಪುಟ ಸಂಖ್ಯೆ (42–47) 2000–01.
16.	ಪ್ರೌಢಶಾಲಾ ಪರಿಷ್ಕೃತ 8, 9, 10 ನೇ ತರಗತಿಯ ಪಠ್ಯಪುಸ್ತಕಗಳು	ಡಿ.ಎಸ್.ಇ.ಆರ್.ಟಿ, ಬೆಂಗಳೂರು
17.	ಮಹಾಬಲೇಶ್ವರ ರಾವ್	ಕನ್ನಡ ಬೋಧನೆ, ಕೆಲವು ವಿಚಾರಗಳು, ಪ್ರಕಾಶಕರು, ಹಳೇ ವಿದ್ಯಾರ್ಥಿ ಸಂಘ, ಡಾ. ಟಿ.ಎಂ.ಎ. ಪೈ ಶಿಕ್ಷಣ ಮಹಾವಿದ್ಯಾಲಯ ಉಡುಪಿ.
18.	ಶ್ರೀಮತಿ ಮಹಾದೇವಿ ಬಸನಗೌಡ ಪಾಟೀಲ್	ಎಂ.ಇಡಿ. ಸಂಶೋಧನಾ ಪ್ರಬಂಧ, ಪುಟಸಂಖ್ಯೆ 40–42, 54–55, 2005–06.

* * * *